
ಸೋಮವಾರ, ಅಕ್ಟೋಬರ್ 30, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 300 | ಪುಟ 14
• www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ವಿದ್ಯಾರ್ಥಿಗಳಲ್ಲಿ ಸ್ವಮೌಲ್ಯಮಾಪನದ ಬೀಜಬಿತ್ತಿ, ಹೆಮ್ಮರವಾಗುವಂತೆ ನೋಡಿಕೊಂಡರೆ ಸ್ವಬೆಳವಣಿಗೆ ಸಹಜವಾಗಿ ನಡೆಯುತ್ತದೆ



ಕಚ್ಚಾ ಬಾಂಬ್ ಬಳಕೆ: 50ಕ್ಕೂ ಹೆಚ್ಚು ಜನರಿಗೆ ಗಾಯ • ಸ್ಥಳಕ್ಕೆ ಎನ್‌ಐಎ ತಂಡ ಭೇಟಿ

ಕೇರಳ ಸ್ಫೋಟ: ಎರಡು ಸಾವು

ಕೊಚ್ಚಿ (ರಾಯಿಟರ್ಸ್/ಪಿಟಿಐ): ಕೇರಳದ ಎರ್ನಾಕುಳಂ ಜಿಲ್ಲೆಯಲ್ಲಿ ಕ್ರೈಸ್ತ ಸಮುದಾಯದವರು ಪ್ರಾರ್ಥನಾ ಸಭೆ ನಡೆಸುತ್ತಿದ್ದಲ್ಲಿ ಸರಣಿ ಬಾಂಬ್ ಸ್ಫೋಟಗೊಂಡ ಪರಿಣಾಮವಾಗಿ ಇಬ್ಬರು ಮಹಿಳೆಯರು ಸತ್ತಿದ್ದಾರೆ. ಐವತ್ತಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಕೊಚ್ಚಿಯಿಂದ ಈಶಾನ್ಯಕ್ಕೆ ಸುಮಾರು 10 ಕಿಲೋ ಮೀಟರ್ ದೂರದಲ್ಲಿರುವ ಕಲಮಶೇರಿಯ 'ಯಹೋವನ ಸಾಕ್ಷಿಗಳು' ಪಂಥದ ಕಾರ್ಯಕ್ರಮ ನಡೆಯುತ್ತಿದ್ದ ಸಭಾ ಭವನದಲ್ಲಿ ಬೆಳಿಗ್ಗೆ 9.40ಕ್ಕೆ ಈ ಸ್ಫೋಟ ನಡೆದಿದೆ. ಮೂರು ದಿನಗಳ ಸಮಾವೇಶದ ಕೊನೆಯ ದಿನವಾದ ಭಾನುವಾರ ಎರಡು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ. ಸಭಾ ಭವನದ ಒಳಗೆ ಕನಿಷ್ಠ ಮೂರು ಸ್ಫೋಟಗಳು ಸಂಭವಿಸಿವೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಘಟನೆ ನಡೆದ ಕೆಲವು ತಾಸುಗಳ ಬಳಿಕ, ಯಹೋವನ ಸಾಕ್ಷಿಗಳು ಪಂಥದ ಸದಸ್ಯನೆಂದು ಹೇಳಿಕೊಂಡ 48 ವರ್ಷ ವಯಸ್ಸಿನ ಡಾಮಿನಿಕ್ ಮಾರ್ಟಿನ್ ಎಂಬಾತ ಕೊಡಕರ ಪೊಲೀಸ್ ಠಾಣೆಯಲ್ಲಿ ಶರಣಾಗಿದ್ದು, 'ಸ್ಫೋಟಕ್ಕೆ ನಾನೇ ಕಾರಣ' ಎಂದು ಹೇಳಿಕೊಂಡಿದ್ದಾನೆ ಎಂದು ಕೇರಳದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಎಂ.ಆರ್.ಅಜಿತ್ ಕುಮಾರ್ ತಿಳಿಸಿದ್ದಾರೆ.

ಗಾಯಗೊಂಡ 51 ಜನರ ಪೈಕಿ 30 ಜನರನ್ನು ವಿವಿಧ ಆಸ್ಪತ್ರೆಗಳಲ್ಲಿ ದಾಖಲಿಸಲಾಗಿದೆ. ಅವರಲ್ಲಿ 18 ಮಂದಿ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆರು ಮಂದಿಯ ಸ್ಥಿತಿ ಚಿಂತಾಜನಕವಾಗಿದೆ. ಅವರಲ್ಲಿ ಮೂವರಿಗೆ ತೀವ್ರವಾಗಿ ಸುಟ್ಟ ಗಾಯಗಳಾಗಿವೆ. ತ್ರಿಶ್ಶೂರ್ ಮತ್ತು ಕೋಟಯಂ ವೈದ್ಯಕೀಯ ಕಾಲೇಜುಗಳಿಂದ ತಜ್ಞ ವೈದ್ಯರ ತಂಡಗಳು ಕಲಮಶೇರಿ ವೈದ್ಯಕೀಯ ಕಾಲೇಜಿಗೆ ಬಂದಿವೆ ಎಂದು ರಾಜ್ಯ ಆರೋಗ್ಯ ಸಚಿವೆ ವೀಣಾ ಜಾರ್ಜ್ ಹೇಳಿದ್ದಾರೆ.

'ಕಲಮಶೇರಿಯ ಜಮ್ರಾ ಇಂಟರ್‌ನ್ಯಾಷನಲ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಸ್ಫೋಟಕ್ಕೆ ಕಚ್ಚಾ ಬಾಂಬ್ ಬಳಸಲಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ' ಎಂದು ಕೇರಳ ಪೊಲೀಸ್ ಮಹಾನಿರ್ದೇಶಕ ಶೇಖ್ ದರ್ವೇಶ್ ಸಾಹೇಬ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಇದು ಭಯೋತ್ಪಾದಕ ದಾಳಿಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಿಜಿಪಿ, 'ಈ ಹಂತದಲ್ಲಿ ಏನನ್ನೂ ಹೇಳಲು ಸಾಧ್ಯವಿಲ್ಲ. ತನಿಖೆ ಬಳಿಕವೇ ಖಚಿತಪಡಿಸಬಹುದು. ಎಲ್ಲಾ ಆಯಾಮಗಳಿಂದ ತನಿಖೆ ನಡೆಸಲಾಗುತ್ತಿದೆ. ವಿಶೇಷ ತನಿಖಾ ತಂಡ ರಚಿಸಲಾಗಿದ್ದು, ಘಟನೆಯಲ್ಲಿ ಭಾಗಿಯಾಗಿರುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದ್ದಾರೆ.

5ನೇ ಪುಟ ನೋಡಿ



ಬಾಂಬ್ ಸ್ಫೋಟದ ನಂತರ ಜೀವ ರಕ್ಷಿಸಿಕೊಳ್ಳಲು ಜನರು ದಿಕ್ಕಾಪಾಲಾಗಿ ಓಡಿದರು —ಪಿಟಿಐ ಚಿತ್ರ

> **ಕೇರಳದಲ್ಲಿ ನಡೆದ ಸ್ಫೋಟದ ಕಾರಣ ದಕ್ಷಿಣ ಕನ್ನಡದ ಗಡಿಗಳಲ್ಲಿ ಜಾಗೃತರಾಗಿ ಇರುವಂತೆ ಪೊಲೀಸ್ ಇಲಾಖೆಗೆ ಸೂಚಿಸಲಾಗಿದೆ. ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ**
> **ಜಿ. ಪರಮೇಶ್ವರ,** ಗೃಹ ಸಚಿವ

ಚರ್ಚ್‌ಗಳಿಗೆ ಬಿಗಿ ಭದ್ರತೆ

ನವದೆಹಲಿ (ಪಿಟಿಐ): ಕೇರಳದಲ್ಲಿ ಸರಣಿ ಬಾಂಬ್ ಸ್ಫೋಟ ನಡೆದ ಕಾರಣ ಚರ್ಚ್ ಮತ್ತು ಮೆಟ್ರೊ ನಿಲ್ದಾಣಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ.

ನಗರದ ಪ್ರಮುಖ ಮಾರುಕಟ್ಟೆಗಳು, ಚರ್ಚ್‌ಗಳು, ಮೆಟ್ರೊ ನಿಲ್ದಾಣಗಳು, ಬಸ್ ನಿಲ್ದಾಣಗಳು, ರೈಲು ನಿಲ್ದಾಣಗಳು ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಭದ್ರತೆ ಬಿಗಿಗೊಳಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಉತ್ತರ ಪ್ರದೇಶ ಮತ್ತು ಹರಿಯಾಣ ಕಡೆಯಿಂದ ಗಡಿ ಪ್ರದೇಶದಾದ್ಯಂತ ಬ್ಯಾರಿಕೇಡ್‌ಗಳನ್ನು ಹಾಕಲು ತಂಡಗಳಿಗೆ ತಿಳಿಸಲಾಗಿದೆ. ಪೊಲೀಸರಿಗೆ ಜಾಗರೂಕರಾಗಿರಲು ಮತ್ತು ಯಾವುದೇ ಮಾಹಿತಿಯನ್ನು ನಿರ್ಲಕ್ಷಿಸದಂತೆ ಸೂಚಿಸಲಾಗಿದೆ. ಕಿಕ್ಕಿರಿದ ಮಾರುಕಟ್ಟೆಗಳಲ್ಲಿ ಹೆಚ್ಚುವರಿ ತುಕಡಿ ನಿಯೋಜನೆ ಮಾಡಲಾಗಿದೆ' ಎಂದು ಅವರು ಹೇಳಿದ್ದಾರೆ.

ಮೂಲಗಳ ಪ್ರಕಾರ, ದೆಹಲಿ ಪೊಲೀಸರ ವಿಶೇಷ ಘಟಕ ಕೇಂದ್ರ ತನಿಖಾ ಸಂಸ್ಥೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದೆ.

ಕಂದಾಯ ಭೂಮಿ ರಕ್ಷಣೆಗೆ 'ಅರಣ್ಯ ಕಾಯ್ದೆ' ಮಾದರಿ

ಶಿಫಾರಸು ಮಾಡಲು ಸಂಪುಟ ಉಪ ಸಮಿತಿ ನಿರ್ಧಾರ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕಂದಾಯ ಭೂಮಿಯನ್ನು ಅವ್ಯಾಹತವಾಗಿ ಕಬಳಿಸುವುದಕ್ಕೆ ಕಡಿವಾಣ ಹಾಕಲು ಮುಂದಾಗಿರುವ ರಾಜ್ಯ ಸರ್ಕಾರ, ಅರಣ್ಯ ಭೂಮಿ ಒತ್ತುವರಿ ಮಾಡಿದವರಿಗೆ ವಿಧಿಸುವ ಶಿಕ್ಷೆಯನ್ನು ಈ ಕಬಳಿಕೆದಾರರಿಗೂ ಅನ್ವಯಿಸಲು ಮುಂದಾಗಿದೆ.

ಕಂದಾಯ ಭೂಮಿ ರಕ್ಷಣೆ ಕುರಿತು ಸರ್ಕಾರಕ್ಕೆ ಶಿಫಾರಸು ಮಾಡಲು ಅರಣ್ಯ ಸಚಿವ ಈಶ್ವರ ಖಂಡ್ರೆ ಹಾಗೂ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರನ್ನು ಒಳಗೊಂಡ ಸಚಿವ ಸಂಪುಟ ಉಪ ಸಮಿತಿಯು ನಿರ್ಧರಿಸಿದೆ.

ಕಂದಾಯ ಭೂಮಿ ಕಬಳಿಕೆ ತಡೆಗೆ ಕರ್ನಾಟಕ ಅರಣ್ಯ ಕಾಯ್ದೆ–1963 ಹಾಗೂ 1980ರಲ್ಲಿ ರೂಪಿಸಿದ್ದ ಕಾಯ್ದೆ ಮಾದರಿಯಲ್ಲಿ ಕಾನೂನು ರೂಪಿಸುವಂತೆ ಸಲಹೆ ನೀಡಲು ಸಮಿತಿ ತೀರ್ಮಾನಿಸಿದೆ.

ಅರಣ್ಯ ಭೂಮಿಯನ್ನು ಅಕ್ರಮವಾಗಿ ಒತ್ತುವರಿ ಮಾಡಿದರೆ ಅಥವಾ ಕಬಳಿಸಿದರೆ ಕರ್ನಾಟಕ ಅರಣ್ಯ ಕಾಯ್ದೆ ಪ್ರಕಾರ ಕನಿಷ್ಠ ಒಂದು ವರ್ಷದಿಂದ ಗರಿಷ್ಠ ಎರಡು ವರ್ಷಗಳವರೆಗೆ ಶಿಕ್ಷೆ, ದಂಡ ವಿಧಿಸಲು ಅವಕಾಶವಿದೆ. ಸಂರಕ್ಷಿತ ಅರಣ್ಯ, ಜಿಲ್ಲಾ ಅರಣ್ಯ ಪ್ರದೇಶ, ಕಿರು ಅರಣ್ಯ, ಪರಿಭಾವಿತ ಅರಣ್ಯಗಳ (ಡೀಮ್ಡ್ ಫಾರೆಸ್ಟ್) ಆಧಾರದಲ್ಲಿ ಶಿಕ್ಷೆ, ದಂಡದ ಪ್ರಮಾಣ ನಿರ್ಧರಿಸಲಾಗುತ್ತದೆ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಅವರ ಮೇಲ್ಪಟ್ಟದ ಅಧಿಕಾರಿಗಳಿಗೆ ಒತ್ತುವರಿ ತೆರವು ಅಧಿಕಾರ ನೀಡಲಾಗಿದೆ. ಇಂತಹ ನಿಯಮಗಳನ್ನು ರೂಪಿಸುವ ಮೂಲಕ ಕಂದಾಯ ಭೂಮಿ ಕಬಳಿಕೆಗೆ ಸಂಪೂರ್ಣ ಕಡಿವಾಣ ಹಾಕಬಹುದು ಎಂದು ಸಮಿತಿ ಅಭಿಪ್ರಾಯಪಟ್ಟಿದೆ.

6ನೇ ಪುಟ ನೋಡಿ

ಅಂಕಿ ಅಂಶ

62.72 ಲಕ್ಷ ಹೆಕ್ಟೇರ್
ಕಂದಾಯ ಭೂಮಿ

14.27 ಲಕ್ಷ ಎಕರೆ
ಒತ್ತುವರಿ ಭೂಮಿ

> **ಕಂದಾಯ ಭೂಮಿ ಒತ್ತುವರಿ ತಡೆಗೆ ಅರಣ್ಯ ಮಾದರಿ ಕಾನೂನು ರೂಪಿಸುವ ಕುರಿತು ಸಂಪುಟ ಉಪ ಸಮಿತಿ ಚರ್ಚೆ ನಡೆಸಿದೆ. ಇನ್ನೂ ರೂಪುರೇಷೆ ಅಂತಿಮವಾಗಿಲ್ಲ**
> **ರಹೀಂ ಖಾನ್**
> ಸದಸ್ಯ, ಸಂಪುಟ ಉಪ ಸಮಿತಿ

ಆಂಧ್ರ ಪ್ರದೇಶ: ರೈಲು ಅಪಘಾತ – 8 ಸಾವು

ಪ್ರಜಾವಾಣಿ ವಾರ್ತೆ

ವಿಜಯನಗರ: ಆಂಧ್ರ ಪ್ರದೇಶದ ವಿಜಯನಗರ ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಎರಡು ರೈಲುಗಳ ನಡುವೆ ಡಿಕ್ಕಿ ಸಂಭವಿಸಿ, ರೈಲೊಂದು ಹಳಿ ತಪ್ಪಿದ್ದರಿಂದ ಕನಿಷ್ಠ 8 ಮಂದಿ ಮೃತಪಟ್ಟಿದ್ದಾರೆ. 32ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾವಿನ ಸಂಖ್ಯೆ ಮತ್ತಷ್ಟು ಹೆಚ್ಚುವ ಸಂಭವ ಇದೆ ಎಂದು ಮೂಲಗಳು ಹೇಳಿವೆ. ತಾಂತ್ರಿಕ ಕಾರಣದಿಂದಾಗಿ ನಿಲುಗಡೆಗೊಂಡಿದ್ದ ವಿಶಾಖಪಟ್ಟಣ–ರಾಯಗಢ ಪ್ರಯಾಣಿಕ ರೈಲಿಗೆ ವಿಶಾಖಪಟ್ಟಣ–ಪಲಾಸ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದಿದೆ. ಪರಿಣಾಮವಾಗಿ ರಾಯಗಢ ರೈಲಿನ ಹಿಂಬದಿಯ ಮೂರು ಬೋಗಿಗಳು ಹಳಿ ತಪ್ಪಿವೆ ಎಂದು ಈಸ್ಟ್ ಕೋಸ್ಟ್ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಇನ್ನೊಂದು ಸುದ್ದಿ 2

ವಿಶ್ವಕಪ್: ಭಾರತಕ್ಕೆ ಸತತ 6ನೇ ಜಯ

ಪ್ರಜಾವಾಣಿ ವಾರ್ತೆ



ರೋಹಿತ್ ಶರ್ಮಾ

ಲಖನೌ: ರೋಹಿತ್ ಶರ್ಮಾ (87; 101 ಎಸೆತ) ಅವರ ಆಟದಿಂದ ಭಾರತವು ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಹಾಲಿ ಚಾಂಪಿಯನ್ ಇಂಗ್ಲೆಂಡ್ ವಿರುದ್ಧ 100 ರನ್‌ಗಳಿಂದ ಜಯಿಸಿತು. ಸತತ ಆರನೇ ಗೆಲುವು ಸಾಧಿಸಿರುವ ಭಾರತ ಸೆಮಿಫೈನಲ್ ಪ್ರವೇಶಿಸುವುದು ಬಹುತೇಕ ಖಚಿತವಾಯಿತು.

ಪರಿಷತ್: ಕಾಂಗ್ರೆಸ್ ಅಭ್ಯರ್ಥಿಗಳ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ಗೆ ಎರಡು ಪದವೀಧರರ ಹಾಗೂ ಮೂರು ಶಿಕ್ಷಕರ ಕ್ಷೇತ್ರಗಳಿಂದ ನಡೆಯಲಿರುವ ದ್ವೈವಾರ್ಷಿಕ ಚುನಾವಣೆಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಭಾನುವಾರ ಪ್ರಕಟಿಸಿದೆ. 2024ರ ಮೇ ಅಥವಾ ಜೂನ್ ತಿಂಗಳಲ್ಲಿ ಈ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ.

ಬೆಂಗಳೂರು ಪದವೀಧರ ಕ್ಷೇತ್ರಕ್ಕೆ ರಾಮೋಜಿ ಗೌಡ, ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಪುಟ್ಟಣ್ಣ, ನೈರುತ್ಯ ಶಿಕ್ಷಕರ ಕ್ಷೇತ್ರಕ್ಕೆ ಕೆ.ಕೆ. ಮಂಜುನಾಥ್, ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಡಿ.ಟಿ. ಶ್ರೀನಿವಾಸ್ ಹಾಗೂ ಈಶಾನ್ಯ ಪದವೀಧರ ಕ್ಷೇತ್ರಕ್ಕೆ ಡಾ. ಚಂದ್ರಶೇಖರ್ ಪಾಟೀಲ ಅವರನ್ನು ಕಣಕ್ಕಿಳಿಸಲು ಎಐಸಿಸಿ ನಿರ್ಧರಿಸಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಐವರು ಅಭ್ಯರ್ಥಿ ಹೆಸರನ್ನು ಅಧಿಕೃತವಾಗಿ ಪ್ರಕಟಿಸಿದ್ದಾರೆ.

6ನೇ ಪುಟ ನೋಡಿ

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



‘ಸಿಬ್ಬಂದಿ ಲೋಪದಿಂದ ಅಪಘಾತ’

ಭುವನೇಶ್ವರ (ಪಿಟಿಐ): ಆಂಧ್ರ ಪ್ರದೇಶದ ವಿಜಯನಗರ ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಸಂಭವಿಸಿದ ರೈಲು ಅಪಘಾತಕ್ಕೆ ಸಿಬ್ಬಂದಿ ಲೋಪ ಕಾರಣವಿರಬಹುದು ಎಂದು ಈಸ್ಟ್-ಕೋಸ್ಟ್ ರೈಲ್ವೆ ತಿಳಿಸಿದೆ.

‘ವಿಶಾಖಪಟ್ಟಣ -ರಾಯಗಢ ಪ್ಯಾಸೆಂಜರ್ ರೈಲಿನ ಸಿಗ್ನಲ್ ‘ಓವರ್‌ಶೂಟ್’ ಆಗಿದೆ. ಹೀಗಾಗಿ ಅಫಘಾತಕ್ಕೆ ಸಂಭವನೀಯ ಕಾರಣ ಮಾನವ ದೋಷ ’ ಎಂದು ರೈಲ್ವೆ ಅಧಿಕಾರಿ ಬಿಸ್ವಜಿತ್ ಸಾಹೂ ಸುದ್ದಿಗಾರರಿಗೆ ತಿಳಿಸಿದರು. ‘ನಿಲುಗಡೆ (ಕೆಂಪು) ಸಿಗ್ನಲ್‌ನ ಹೊರತಾಗಿಯೂ ರೈಲು ನಿಲ್ಲದೆಯೇ, ಚಲಿಸುವುದನ್ನು ’ಸಿಗ್ನಲ್ ಓವರ್‌ಶೂಟ್’ ಎನ್ನಲಾಗುತ್ತದೆ’ ಎಂದು ತಿಳಿಸಿದರು.



ಅಪಘಾತಕ್ಕೀಡಾಗಿರುವ ವಿಶಾಖಪಟ್ಟಣ– ರಾಯಗಢ ರೈಲು —ಪಿಟಿಐ ಚಿತ್ರ

ಪರಿಹಾರ ಘೋಷಣೆ: ಮೃತಪಟ್ಟವರ ಕುಟುಂಬದ ಸದಸ್ಯರಿಗೆ ₹10 ಲಕ್ಷ ಮತ್ತು ತೀವ್ರವಾಗಿ ಗಾಯಗೊಂಡವರಿಗೆ ₹2 ಲಕ್ಷ, ಸಣ್ಣಪ್ರಮಾಣದಲ್ಲಿ ಗಾಯಗೊಂಡವರಿಗೆ ₹50 ಸಾವಿರ ಪರಿಹಾರವನ್ನು ಕೇಂದ್ರ ಸರ್ಕಾರ ಮತ್ತು ಆಂಧ್ರ ಪ್ರದೇಶ ಸರ್ಕಾರಗಳು ಘೋಷಣೆ ಮಾಡಿವೆ.

ಗಾಯಾಳುಗಳನ್ನೆಲ್ಲ ಆಸ್ಪತ್ರೆಗೆ ದಾಖಲಿಸಲಾಗಿದೆ. ರಕ್ಷಣಾ ಕಾರ್ಯ ಭರದಿಂದ ಸಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ನಗರದ ಹಲವೆಡೆ ಸಾಧಾರಣ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಭಾನುವಾರ ಸಂಜೆ ಸಾಧಾರಣ ಮಳೆಯಾಗಿದೆ.

ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣ ಇತ್ತು. ನಡುವೆ ಬಿಸಿಲು ಕಾಣಿಸುತ್ತಿತ್ತು. ಸಂಜೆ 5ರಿಂದ 6 ಗಂಟೆಯ ನಡುವೆ ಹಲವು ಪ್ರದೇಶದಲ್ಲಿ ಮಳೆಯಾಗಿದೆ.

ರಾಜಾಜಿನಗರ, ರಾಜರಾಜೇಶ್ವರಿ ನಗರ, ಜಾಲಹಳ್ಳಿ, ವಿದ್ಯಾರಣ್ಯಪುರ, ಯಶವಂತಪುರ, ಕೆಂಗೇರಿ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಕೊತ್ತನೂರು, ಮಹಾಲಕ್ಷ್ಮಿ ಲೇಔಟ್, ಮಲ್ಲೇಶ್ವರ, ಮತ್ತಿಕೆರೆ, ನಂದಿನಿಲೇಔಟ್, ಪೀಣ್ಯ, ಹೆಬ್ಬಾಳ, ಕಾಮಾಕ್ಷಿಪಾಳ್ಯದಲ್ಲಿ ಮಳೆಯಾಗಿದೆ.

ರಾಜ್ಯದ ಕೆಲವು ಪ್ರದೇಶಗಳಲ್ಲಿ ಸೋಮವಾರ ಹಾಗೂ ಮಂಗಳವಾರ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಪ್ರೇರಣಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

‘ಪ್ರತಿಭೆ ಜಾತಿ, ಧರ್ಮಕ್ಕೆ ಸೀಮಿತವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರತಿಭೆ ಯಾವುದೇ ಒಂದು ಜಾತಿ ಅಥವಾ ಧರ್ಮಕ್ಕೆ ಸೀಮಿತವಲ್ಲ. ಅವಕಾಶ ಮತ್ತು ಶಿಕ್ಷಣದ ಅನುಕೂಲ ಸಿಕ್ಕರೆ ಎಲ್ಲ ವ್ಯಕ್ತಿಗಳಲ್ಲಿರುವ ಪ್ರತಿಭೆಗಳೂ ಹೊರ ಬರುತ್ತವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಾಳಿದಾಸ ಹೆಲ್ತ್ ಆ್ಯಂಡ್ ಎಜುಕೇಷನ್ ಟ್ರಸ್ಟ್ ಮತ್ತು ಅಹಿಲ್ಯಾ ಫೌಂಡೇಷನ್ ವತಿಯಿಂದ ನಗರದ ಡಿ. ದೇವರಾಜ ಅರಸು ಭವನದಲ್ಲಿ ಭಾನುವಾರ ಆಯೋಜಿಸಿದ್ದ ಪ್ರೇರಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ‘ಹುಟ್ಟಿನಿಂದಲೇ ಯಾರೂ ಮೇಧಾವಿಗಳಾಗಿರುವುದಿಲ್ಲ. ಅವಕಾಶಗಳು ಸಿಕ್ಕರೆ ಎಲ್ಲರೂ ಮೇಧಾವಿಗಳಾಗುತ್ತಾರೆ’ ಎಂದರು.

‘ಸಮಾಜದಲ್ಲಿ ಸ್ವಾಭಿಮಾನಿಗಳಾಗಿ, ಉತ್ತಮ ಪ್ರಜೆಗಳಾಗಿ ಬದುಕಲು ಶಿಕ್ಷಣ ಅತ್ಯಂತ ಅಗತ್ಯ. ಎಲ್ಲರೂ ಶಿಕ್ಷಣ ಪಡೆಯಬೇಕು. ಶಿಕ್ಷಣದಿಂದ ವಂಚಿತರಾದವರು ಶಿಕ್ಷಣ ಪಡೆಯಲು ಸಹಕರಿಸಬೇಕು. ಆ ಮೂಲಕ ಅವರಿಗೂ ಸಮಾಜದ ಮುಖ್ಯವಾಹಿನಿಯಲ್ಲಿ ಸಾಗಲು ಅವಕಾಶ ಕಲ್ಪಿಸಿಕೊಡಬೇಕು’ ಎಂದು ಹೇಳಿದರು.

‘ಬ್ರಿಟಿಷರು ಭಾರತಕ್ಕೆ ಬರುವ ಮೊದಲು ದೇಶದಲ್ಲಿ ಶೂದ್ರರು ಶಿಕ್ಷಣ ಪಡೆಯುವುದನ್ನು ನಿಷೇಧಿಸಲಾಗಿತ್ತು. ಮುಂದುವರಿದ ಜಾತಿಗಳ ಹೆಣ್ಣು ಮಕ್ಕಳೂ ಶಿಕ್ಷಣ ಪಡೆಯುವಂತಿರಲಿಲ್ಲ. ಬಿ.ಆರ್.ಅಂಬೇಡ್ಕರ್ ಅವರು ಶೂದ್ರ ಸಮುದಾಯದ ಜನರು ಮತ್ತು ಎಲ್ಲ ಸಮುದಾಯಗಳ ಹೆಣ್ಣು ಮಕ್ಕಳು ಶಿಕ್ಷಣ ಪಡೆಯುವುದಕ್ಕೆ ಅವಕಾಶ ಕಲ್ಪಿಸಿದರು. ಈ ಚರಿತ್ರೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು’ ಎಂದರು.

‘ಪ್ರತಿ ಸಮುದಾಯವೂ ಸ್ವಂತ ವೈದ್ಯಕೀಯ ಕಾಲೇಜು ಆರಂಭಿಸಬೇಕು ಎನ್ನುವ ಯೋಚನೆ ಅವೈಜ್ಞಾನಿಕ. ವೈದ್ಯಕೀಯ ಕಾಲೇಜುಗಳನ್ನು ಆರಂಭಿಸುವುದು ಮತ್ತು ನಿರ್ವಹಣೆ ಮಾಡುವುದು ಅತ್ಯಂತ ದುಬಾರಿ. ವೈದ್ಯಕೀಯ ಕಾಲೇಜುಗಳಲ್ಲಿ ಬಡವರು ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉಚಿತವಾಗಿ ಸೀಟು ನೀಡಿ ನೆರವಾಗಲು ಸಾಧ್ಯವಾಗುವುದಿಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು.

’ಪ್ರತಿ ಸಮುದಾಯವೂ ಸ್ವಂತ ಅರೆ ವೈದ್ಯಕೀಯ ಕಾಲೇಜುಗಳು, ಕೈಗಾರಿಕಾ ತರಬೇತಿ ಕೇಂದ್ರ (ಐಟಿಐ) ಮತ್ತು ಹಾಸ್ಟೆಲ್‌ಗಳನ್ನು ಆರಂಭಿಸಲು ಹೆಚ್ಚು ಆಸಕ್ತಿ ತೋರಬೇಕು. ಆಗ ಬಡವರು ಮತ್ತು ಗ್ರಾಮೀಣ ಪ್ರದೇಶದ ಮಕ್ಕಳಿಗೆ ನೆರವಾಗಲು ಸಾಧ್ಯವಾಗುತ್ತದೆ’ ಎಂದರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ ಮತ್ತು ಸನ್ಮಾನ ಮಾಡಲಾಯಿತು. ತಿಂಥಣಿ ಬ್ರಿಡ್ಜ್‌ನಲ್ಲಿರುವ ಕಲಬುರಗಿ ವಿಭಾಗದ ಕನಕ ಗುರುಪೀಠದ ಸಿದ್ದರಾಮಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.



ನಗರದಲ್ಲಿ ಭಾನುವಾರ ಆಯೋಜಿಸಿದ್ದ ಪ್ರೇರಣಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಬೈರತಿ ಸುರೇಶ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

‘ಹುದ್ದೆಗಳಿಗಿಂತ ವೈದ್ಯರು ಹೆಚ್ಚು’

‘ಹಿಂದೆ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಹುದ್ದೆಗಳ ಭರ್ತಿಗೆ ವೈದ್ಯರೇ ಸಿಗುತ್ತಿರಲಿಲ್ಲ. ವೈದ್ಯರ ಕೊರತೆ ನೀಗಲು ಕಡ್ಡಾಯ ಗ್ರಾಮೀಣ ಸೇವೆ ಕಾಯ್ದೆ ಜಾರಿಗೊಳಿಸಲಾಗಿತ್ತು. ಈಗ ವೈದ್ಯರ ಸಂಖ್ಯೆ ದುಪ್ಪಟ್ಟಾಗಿದ್ದರೆ, ಹುದ್ದೆಗಳ ಸಂಖ್ಯೆ ಕಡಿಮೆ ಇದೆ. ಈ ಕಾರಣದಿಂದ ಗ್ರಾಮೀಣ ಪ್ರದೇಶದ ಸರ್ಕಾರಿ ಆಸ್ಪತ್ರೆಗಳ ವೈದ್ಯ ಹುದ್ದೆಗಳ ಭರ್ತಿಗೆ ಸೀಮಿತವಾಗಿ ವೈದ್ಯರ ಕಡ್ಡಾಯ ಗ್ರಾಮೀಣ ಸೇವೆ ಕಾಯ್ದೆಗೆ ತಿದ್ದುಪಡಿ ತರಬೇಕಾಯಿತು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಜಾತಿ ಗಣತಿ ವರದಿ ಸ್ವೀಕಾರಕ್ಕೆ ಬದ್ಧ’

ಬೆಂಗಳೂರು:‘ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸಿರುವ ರಾಜ್ಯದ ಎಲ್ಲ ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಗಣತಿ) ವರದಿಯನ್ನು ಸ್ವೀಕರಿಸಲು ನಮ್ಮ ಸರ್ಕಾರ ಬದ್ಧವಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಅವರು ವರದಿ ಸಲ್ಲಿಸಲಿದ್ದಾರೆ. ಅದನ್ನು ನಮ್ಮ ಸರ್ಕಾರ ಸ್ವೀಕರಿಸುತ್ತದೆ’ ಎಂದರು.

‘ಹಿಂದಿನ ಬಾರಿ ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಇಡೀ ದೇಶದಲ್ಲಿ ಜಾತಿ ಗಣತಿ ಮೊದಲು ಮಾಡಿದ್ದು ನಮ್ಮ ಸರ್ಕಾರ. ನಿಖರವಾಗಿ ಪ್ರತಿ ಜಾತಿಗಳ ಆರ್ಥಿಕ, ಸಾಮಾಜಿಕ ಸ್ಥಿತಿ ತಿಳಿಯುವ ಉದ್ದೇಶದಿಂದ ಜಾತಿವಾರು ಜನಗಣತಿ ಮಾಡಿಸಿದ್ದೆ. ನಂತರ ಬಂದ ಸರ್ಕಾರಗಳು ಜಾತಿ ಜನಗಣತಿ ವರದಿಯನ್ನು ಸ್ವೀಕರಿಸಲಿಲ್ಲ’ ಎಂದು ಹೇಳಿದರು.

ಸಮಾರಂಭದ ನಂತರವೂ ಇದೇ ವಿಷಯದ ಕುರಿತು ಪತ್ರಕರ್ತರ ಜತೆ ಮಾತನಾಡಿದ ಸಿದ್ದರಾಮಯ್ಯ, ‘ನನ್ನ ಅವಧಿಯಲ್ಲಿ ನಡೆದ ಜಾತಿವಾರು ಜನಗಣತಿ ನಡೆಸಿದ ಸಂದರ್ಭದಲ್ಲಿ ಎಚ್. ಕಾಂತರಾಜ ಅವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದರು. ಅವರು ವರದಿ ಸಲ್ಲಿಸಿದಾಗ ಅಂದಿನ ಮುಖ್ಯ ಮಂತ್ರಿ ಎಚ್.ಡಿ .ಕುಮಾರಸ್ವಾಮಿ, ನಂತರ ಅಧಿಕಾರಕ್ಕೆ ಬಂದ ಬಿ.ಎಸ್. ಯಡಿಯೂರಪ್ಪ ಅಥವಾ ಬಸವರಾಜ ಬೊಮ್ಮಾಯಿ ಅವರು ವರದಿ ಪಡೆಯಲಿಲ್ಲ. ಈಗ ನವೆಂಬರ್ ಅಥವಾ ಡಿಸೆಂಬರ್ ತಿಂಗಳಿನಲ್ಲಿ ವರದಿ ಸಲ್ಲಿಸುವುದಾಗಿ ಜಯಪ್ರಕಾಶ್ ಹೆಗ್ಡೆ ತಿಳಿಸಿದ್ದಾರೆ. ಅವರು ಕೊಟ್ಟಾಗ ಸ್ವೀಕರಿಸಲಾಗುವುದು’ ಎಂದರು.

ಪುನೀತ್ ಪುಣ್ಯಸ್ಮರಣೆ: ಸಮಾಧಿಗೆ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಅವರು ಅಗಲಿ ಎರಡು ವರ್ಷ ಉರುಳಿದೆ. ಸೋಮವಾರ (ಅ.29) ಪುನೀತ್ ಅವರ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಮಗಳು ವಂದಿತಾ, ನಟ ಶಿವರಾಜ್‌ಕುಮಾರ್ ದಂಪತಿ, ನಟ ರಾಘವೇಂದ್ರ ರಾಜ್‌ಕುಮಾರ್ ದಂಪತಿ ಸೇರಿದಂತೆ ಕುಟುಂಬದ ಸದಸ್ಯರು ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ಅವರ ಸಮಾಧಿಗೆ ಪೂಜೆ ಸಲ್ಲಿಸಿದರು.

2021ರ ಅ.29ರಂದು ಪುನೀತ್ ಅವರ ಅಕಾಲಿಕ ನಿಧನ ಅಭಿಮಾನಿಗಳನ್ನು ಒಳಗೊಂಡಂತೆ ಇಡೀ ಕನ್ನಡ ಚಿತ್ರರಂಗವನ್ನು ಆಘಾತಕ್ಕೆ ದೂಡಿತ್ತು. ಇದಾಗಿ ಎರಡು ವರ್ಷ ಕಳೆದಿದ್ದು, ಅವರ ಸಮಾಧಿಗೆ ಭೇಟಿ ನೀಡುವ ಅಭಿಮಾನಿಗಳ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ಪ್ರತಿನಿತ್ಯ ಐದಾರು ಸಾವಿರ ಜನರು ಸಮಾಧಿಗೆ ಭೇಟಿ ನೀಡಿದರೆ, ಸೋಮವಾರ ಈ ಸಂಖ್ಯೆ 50 ಸಾವಿರ ದಾಟಿತ್ತು. ಜನರು ತಮ್ಮ ನೆಚ್ಚಿನ ನಟನಿಗೆ ಪುಷ್ಪನಮನ ಸಲ್ಲಿಸಿದರು. ರಾಜ್‌ಕುಮಾರ್ ಅವರ ಸಮಾಧಿಯಂತೆಯೇ ಬಿಳಿ ಗ್ರಾನೈಟ್‌ನಿಂದ ಪುನೀತ್ ರಾಜ್‌ಕುಮಾರ್ ಅವರ ಸಮಾಧಿಯನ್ನು ಹೊಸದಾಗಿ ನಿರ್ಮಿಸಲಾಗಿದ್ದು, ಇದರ ಮುಂದೆ ಅಶ್ವಿನಿ ಪುನೀತ್ ರಾಜ್‌ಕುಮಾರ್ ಹಾಗೂ ವಂದಿತಾ ಅವರು ಪುನೀತ್ ಅವರ ನೆಚ್ಚಿನ ತಿಂಡಿ, ಸಿಹಿ ತಿನಿಸುಗಳನ್ನು ಎಡೆ ಇಟ್ಟರು.

ಅಶ್ವಿನಿ ಅವರು ಸಮಾಧಿ ಬಳಿ ಆಗಮಿಸುತ್ತಿದ್ದಂತೆಯೇ ಅಭಿಮಾನಿಗಳು ‘ಅಪ್ಪು..ಅಪ್ಪು..’ ಎಂದು ಜೈಕಾರ ಕೂಗಿ ತಮ್ಮ ಅಭಿಮಾನ ಪ್ರದರ್ಶಿಸಿದರು. ಇದೇ ಸಂದರ್ಭದಲ್ಲಿ ಅಭಿಮಾನಿಗಳಿಗೆ ಅಶ್ವಿನಿ ಅವರು ಅನ್ನದಾಸೋಹ ಮಾಡಿದರು.

‘ಅಪ್ಪಾಜಿ ಮಗನಾಗಿ ಎಷ್ಟು ಸಾರ್ಥಕ ಜೀವನ ನಡೆಸಿದ ಎಂದರೆ, ಅಪ್ಪು ಅಪ್ಪಾಜಿಗಿಂತ ದುಪ್ಪಟ್ಟು ಹೆಸರು ಮಾಡಿದ ಎಂದರೆ ತಪ್ಪಾಗಲಾರದು. ಅಪ್ಪು ಮೇಲೆ ಜನರಿಟ್ಟಿರುವ ಪ್ರೀತಿ ನೋಡಿದರೆ ಹೆಮ್ಮೆ ಎನಿಸುತ್ತದೆ’ ಎನ್ನುತ್ತಾ ಶಿವರಾಜ್‌ಕುಮಾರ್ ಭಾವುಕರಾದರು.



ಕಂಠೀರವ ಸ್ಟುಡಿಯೊದಲ್ಲಿರುವ ಪುನೀತ್ ರಾಜ್‌ಕುಮಾರ್ ಅವರ ಸಮಾಧಿ ದರ್ಶನಕ್ಕೆ ಆಗಮಿಸಿದ್ದ ಜನಸಾಗರ —ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್



ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಅವರು ಮಣ್ಣಿನ ಅಮೃತ ಕಳಶಗಳನ್ನು ಬಿಜೆಪಿ ಕಾರ್ಯಕರ್ತರ ಮೂಲಕ ದೆಹಲಿಗೆ ಕಳಿಸಿದರು

‘ನನ್ನ ಮಣ್ಣು ನನ್ನ ದೇಶ’ ಕಾರ್ಯಕ್ರಮಕ್ಕೆ ರಾಜ್ಯ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿಯಲ್ಲಿ ನಡೆಯ ಲಿರುವ ‘ನನ್ನ ಮಣ್ಣು ನನ್ನ ದೇಶ’ ಕಾರ್ಯಕ್ರಮಕ್ಕೆ ಬಿಜೆಪಿ ಪ್ರತಿನಿಧಿಗಳು ನಗರದ ಬೈಯಪ್ಪನಹಳ್ಳಿಯ ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಭಾನುವಾರ ಸಂಜೆ ತೆರಳಿದರು.

ರಾಜ್ಯದ ವಿವಿಧ ಪುಣ್ಯಕ್ಷೇತ್ರಗಳೂ ಸೇರಿ ವಿವಿಧೆಡೆಯಿಂದ ಸಂಗ್ರಹಿಸಿರುವ ಮಣ್ಣಿನ ಅಮೃತ ಕಲಶಗಳೊಂದಿಗೆ ಪ್ರತಿನಿಧಿಗಳು ತೆರಳಿದರು.

ಕೇಂದ್ರದ ಸಚಿವ ರಾಜೀವ್ ಚಂದ್ರಶೇಖರ್, ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಸಿದ್ದರಾಜು, ರಾಜ್ಯ ಕಾರ್ಯದರ್ಶಿ ಜಗದೀಶ ಹಿರೇಮನಿ, ರೈತಮೋರ್ಚಾ ರಾಜ್ಯ ಅಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಅವರು ಭಾಗವಹಿಸಿ ದೆಹಲಿಗೆ ತೆರಳುವ ಪ್ರತಿನಿಧಿಗಳಿಗೆ ಶುಭ ಹಾರೈಸಿದರು.

ಪ್ರತಿನಿಧಿಗಳು, ಹುತಾತ್ಮರ ಗೌರವಾರ್ಥ ದೆಹಲಿಯ ಕರ್ತವ್ಯಪಥದಲ್ಲಿ ನಿರ್ಮಾಣವಾಗುವ ಅಮೃತ ಉದ್ಯಾನದ ಸ್ಥಳಕ್ಕೆ ನಮ್ಮ ರಾಜ್ಯದಿಂದ ಸಂಗ್ರಹಿಸಿದ ಮಣ್ಣಿನ ಅಮೃತ ಕಳಶವನ್ನು ಇದೇ 30 ರಂದು ತಲುಪಿಸುವರು. ರಾಜ್ಯದಲ್ಲಿ ಕಳೆದ ಎರಡು ತಿಂಗಳಿಂದ ‘ನನ್ನ ಮಣ್ಣು ನನ್ನ ದೇಶ’ ಅಭಿಯಾನ ನಡೆದಿದ್ದು, ಪ್ರತಿ ಮನೆ, ಧಾರ್ಮಿಕ ಕೇಂದ್ರಗಳು, ವೀರಯೋಧರ ಮನೆ, ಸ್ವಾತಂತ್ರ್ಯ ಹೋರಾಟಗಾರರ ಮನೆ, ಮಹಾಪುರುಷರ ಸ್ಮಾರಕ ಸ್ಥಳ ಸಾಧು ಸಂತರ ಮಠಗಳಿಗೆ ಪುಣ್ಯ ಮಣ್ಣನ್ನು ಸಂಗ್ರಹಿಸಲಾಗಿತ್ತು. ಅಮೃತವನದಲ್ಲಿ ಮಣ್ಣನ್ನು ವಿಲೀನಗೊಳಿಸಲಾಗುವುದು ಎಂದು ಮುಖಂಡರು ತಿಳಿಸಿದರು. ದೆಹಲಿಯಲ್ಲಿ ಇದೇ 31 ರಂದು ಒಂದು ಲಕ್ಷಕ್ಕೂ ಹೆಚ್ಚು ಯುವಕರು ಭಾಗವಹಿಸಲಿದ್ದಾರೆ.

ಪಾರ್ಶ್ವವಾಯು ಜಾಗೃತಿಗೆ ‘ಬೈಕ್‌ಥಾನ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರ್ಶ್ವವಾಯು ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ನಗರದ ಸಾಗರ್ ಆಸ್ಪತ್ರೆ ವತಿಯಿಂದ ಭಾನುವಾರ ಬೈಕ್‌ಥಾನ್ ನಡೆಸಲಾಯಿತು.

‘ವಿಶ್ವ ಪಾರ್ಶ್ವವಾಯು’ ದಿನದ ಅಂಗವಾಗಿ ಈ ಬೈಕ್‌ಥಾನ್ ಹಮ್ಮಿಕೊಳ್ಳಲಾಗಿತ್ತು. ಸಾಗರ್ ಆಸ್ಪತ್ರೆಯ ಸಿಇಒ ವೆಂಕಟೇಶ್ ಪ್ರಸಾದ್ ಬೈಕ್‌ಥಾನ್‌ಗೆ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ, ಪಾರ್ಶ್ವವಾಯು ರೋಗಿಗಳಿಗಾಗಿ ಸಿದ್ಧಪಡಿಸಿದ್ದ ಅಂಬುಲೆನ್ಸ್ ಉದ್ಘಾಟಿಸಲಾಯಿತು.

ಬಸವನಗುಡಿ ನ್ಯಾಷನಲ್ ಕಾಲೇಜ್ ಮೈದಾನದಿಂದ ಕುಮಾರಸ್ವಾಮಿ ಲೇಔಟ್ ನಲ್ಲಿರುವ ದಯಾನಂದ್ ಸಾಗರ್ ವಿಶ್ವ ವಿದ್ಯಾಲಯದವರೆಗೆ ನಡೆದ ಬೈಕ್‌ಥಾನ್ ನಲ್ಲಿ 200ಕ್ಕೂ ಹೆಚ್ಚು ಸವಾರರು ಪಾಲ್ಗೊಂಡಿದ್ದರು. ಪೊಲೀಸ್ ಮಾರ್ಷಲ್ ಗಳು ಕಾರ್ಯಕ್ರಮಕ್ಕೆ ಕೈ ಜೋಡಿಸಿದ್ದರು.

ಪ್ರತ್ಯೇಕ ಕ್ಲಿನಿಕ್: ಪಾರ್ಶ್ವವಾಯು ರೋಗಿಗಳ ಚಿಕಿತ್ಸೆಗಾಗಿ ಸಾಗರ್ ಆಸ್ಪತ್ರೆಯಲ್ಲಿ ‘ಪಾರ್ಶ್ವವಾಯು ಕ್ಲಿನಿಕ್’ ತೆರೆಯಲಾಗಿದೆ. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಕ್ಲಿನಿಕ್ ಉದ್ಘಾಟಿಸಿದರು.



ಸಾಗರ್ ಆಸ್ಪತ್ರೆಯಿಂದ ಹಮ್ಮಿಕೊಂಡಿದ್ದ ಬೈಕ್‌ಥಾನ್‌ಗೆ ಆಸ್ಪತ್ರೆಯ ಸಿಇಒ ವೆಂಕಟೇಶ್ ಪ್ರಸಾದ್ ಚಾಲನೆ ನೀಡಿದರು

ಉಷ್ಣ ಎಂಜಿನ್ ಸಮಸ್ಯೆಗೆ ಪರಿಹಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ವಿಜ್ಞಾನಿಗಳು ಹೆಚ್ಚಿನ ದಕ್ಷತೆ ಮತ್ತು ಅಧಿಕ ಶಕ್ತಿಯ ‘ಹೀಟ್ ಎಂಜಿನ್’ (ಮೈಕ್ರೋ ಎಂಜಿನ್) ಅಭಿವೃದ್ಧಿಪಡಿಸುವ ಮೂಲಕ, ಕಾರುಗಳು ಮತ್ತು ವಿಮಾನಗಳಿಂದ ಹಿಡಿದು ಅಣು ರಿಯಾಕ್ಟರ್‌ಗಳವರೆಗೆ ಎಲ್ಲ ರೀತಿಯ ಎಂಜಿನ್‌ಗಳಿಗೆ ಸಂಬಂಧಿಸಿ ಎರಡು ಶತಮಾನಗಳಿಗೂ ಹೆಚ್ಚಿನ ಸಮಯದಿಂದ ಸವಾಲಾಗಿಯೇ ಉಳಿದಿದ್ದ ಕಾರ್ನಾಟ್ ಉಷ್ಣ ಎಂಜಿನ್ ಸಮಸ್ಯೆಗೆ ಪರಿಹಾರ ಹುಡುಕಿದ್ದಾರೆ.

ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಮತ್ತು ನೆಹರೂ ಸೆಂಟರ್ ಫಾರ್ ಅಡ್ವಾನ್ಸಡ್ ಸೈಂಟಿಫಿಕ್ ರಿಸರ್ಚ್‌ನ ಸಂಶೋಧಕರು, ಈ ಹೊಸ ಎಂಜಿನ್ ವಿನ್ಯಾಸಗೊಳಿಸಿ ಮಹತ್ವದ ಸಾಧನೆ ಮಾಡಿದ್ದಾರೆ.

‘ಇದು ಅನೇಕ ಹೊಸ ಅವಕಾಶಗಳ ಬಾಗಿಲುಗಳನ್ನು ತೆರೆದಿದೆ. ಇದು ಹೊಸ ಪ್ರಯಾಣದ ಆರಂಭ. ಅಸಾಧ್ಯವೆಂದು ಭಾವಿಸಿದ್ದನ್ನು ಸಾಧಿಸಲಾಗಿದೆ’ ಎಂದು ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಮತ್ತು ಅಧ್ಯಯನದ ಸಹ ಲೇಖಕ ಅಜಯ್ ಸೂದ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ನೇಚರ್ ಕಮ್ಯುನಿಕೇಷನ್ಸ್’ ನಿಯತಕಾಲಿಕದಲ್ಲಿ ಈ ಅಧ್ಯಯನದ ವರದಿ ಪ್ರಕಟವಾಗಿದೆ. ಆಟೋಮೊಬೈಲ್‌ಗಳಲ್ಲಿ ಬಳಸುವಂತಹ ಅಧಿಕ ಶಕ್ತಿ- ದಕ್ಷತೆಯ ಎಂಜಿನ್‌ಗಳಲ್ಲಿ ಈ ಪ್ರಯೋಗದ ಫಲಿತಾಂಶವು ತಕ್ಷಣಕ್ಕೆ ಹೆಚ್ಚು ಅನ್ವಯ ಹೊಂದಿರದಿದ್ದರೂ, ಇದು ಭವಿಷ್ಯದಲ್ಲಿ ಎಂಜಿನ್‌ಗಳ ಕಾರ್ಯಕ್ಷಮತೆಯ ವೃದ್ಧಿ ವಿಷಯದಲ್ಲಿ ನಡೆಯುವ ಸಂಶೋಧನೆಗೆ ಅನುಕೂಲವಾಗಲಿದೆ ಎಂದು ಸೂದ್ ಅಭಿಪ್ರಾಯಪಟ್ಟಿದ್ದಾರೆ.

ಕ್ಯಾನ್ಸರ್ ಚಿಕಿತ್ಸೆಯಲ್ಲಿ ಬಳಸುವ ಯಂತ್ರಗಳಲ್ಲಿ ಈ ತಂತ್ರಜ್ಞಾನವು ಹೆಚ್ಚು ಅನ್ವಯವಾಗುವ ನಿರೀಕ್ಷೆ ಇದೆ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಇಂದು

‘ನವೀನ ಮತ್ತು ಸಮರ್ಥನೀಯ ನಿರ್ವಹಣಾ ಅಭ್ಯಾಸಗಳ’ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ನಿರಂಜನ ವಾನಳ್ಳಿ, ಆರ್. ಸಂಪತ್ ಕುಮಾರ್, ಸಿ. ಮನೋಹರ್, ಐ.ಎಸ್. ಪ್ರಸಾದ್, ಶಿವ ಕೆ ತ್ರಿಪಾಠಿ, ಅರ್ಪಿತಾ ಆದಿತ್ಯ, ಆಯೋಜನೆ ಮತ್ತು ಸ್ಥಳ: ಪಟೇಲ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್, ಕರಿಯಮ್ಮನ ಅಗ್ರಹಾರ, ಬೆಳಿಗ್ಗೆ 9.30

ಸ್ಟಾರ್ ಸ್ಟಾರ್ಟ್‌ಅಪ್ ಅವಾರ್ಡ್ಸ್–2023: ಅತಿಥಿಗಳು: ಕೆ. ಉಲ್ಲಾಸ್ ಕಾಮತ್, ಎಂ.ಆರ್. ಸೀತಾರಾಂ, ಎಂ.ಆರ್. ರಾಮಯ್ಯ, ಅಧ್ಯಕ್ಷತೆ: ಎಂ.ಆರ್. ಜಯರಾಂ, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಮಧ್ಯಾಹ್ನ 12

ರಕ್ತ ಸಂಗ್ರಹ ಮಾಡುವ ವಾಹನದ ಹಸ್ತಾಂತರ: ಅತಿಥಿ: ದಿನೇಶ್ ಗುಂಡೂರಾವ್, ಆಯೋಜನೆ: ಅಲ್ಕಾನ್, ಸ್ಥಳ: ರ್‍ಯಾಡಿಸನ್ ಬ್ಲ್ಯೂ ಹೋಟೆಲ್, ಮಧ್ಯಾಹ್ನ 12

‘ಕಥೆ ಹೇಳುವೆ’: ಕಥೆ ಹೇಳುವವರು: ಸಿ.ಆರ್. ಕಮಲಾಕ್ಷಿ, ಕಥೆ ಕೇಳುವವರು: ವಿದ್ಯಾಜ್ಯೋತಿ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳು, ಅತಿಥಿಗಳು: ಜೆ.ಎಚ್. ವರುಣ್ ದಾಸ್, ನಂದಿ ಸುಬ್ರಮಣಿ, ಬಿ.ಕೆ. ಪಾರ್ಥಸಾರಥಿ, ಡಿ. ಶರತ್ ಕುಮಾರ್, ಆಯೋಜನೆ: ಪರಂಪರಾ, ಸ್ಥಳ: ವಿದ್ಯಾಜ್ಯೋತಿ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಬಿಟಿಎಂ 2ನೇ ಹಂತ, ಮಧ್ಯಾಹ್ನ 2

‘ಟೆನ್ಟೆಟಿವ್ ಇವೆಂಟ್ ಫ್ಲೊ’ ಸುಸ್ಥಿರತೆ ಘೋಷಣೆ: ಅತಿಥಿಗಳು: ನಿತಿನ್ ಕಾಮತ್, ಅಮಿತ್ ಚಂದ್ರ, ಅನೂಪ್ ಪೈ, ಪ್ರಮೋದ್ ವರ್ಮಾ, ರಸಿಕ್ ಪನ್ಸಾರೆ, ಆಯೋಜನೆ: ಜಾಗೃತಿ ಯಾತ್ರಾ, ಸ್ಟಾರ್ಟ್‌ಅಪ್–20, ಸ್ಥಳ: ಐಐಎಸ್‌ಸಿ, ಮಧ್ಯಾಹ್ನ 3

ಮಹಿಳಾ ಸಾಹಿತ್ಯದ ಹಿರಿಯ ಚೇತನಗಳು–75 ಸಂವಾದ, ಗೌರವಾರ್ಪಣೆ: ಅತಿಥಿಗಳು: ಜಯಂತಿ ಮನೋಹರ್, ಶೈಲಜಾ ಸುರೇಶ್, ವಿದ್ಯಾ ಶಿರಹಟ್ಟಿ, ಮಧುರಾ ಕರ್ಣಂ, ಇಂದಿರಾ ಶರಣ್, ತ್ರಿವೇಣಿ ಮಿಟ್ಟಿ, ವಿಭಾ ಪುರೋಹಿತ್, ಸ್ವರ್ಣಗೌರಿ ಕೆ.ಎಸ್., ಸವಿತಾ ನಾಗೇಶ್, ಆಯೋಜನೆ: ಲೇಖಿಕಾ ಸಾಹಿತ್ಯ ವೇದಿಕೆ, ಸ್ಥಳ: ಸ್ಟರ್ಲಿಂಗ್ ಕೋರ್ಟ್ ಅಪಾರ್ಟ್‌ಮೆಂಟ್, ಬಸವನಗುಡಿ, ಸಂಜೆ 4

53ನೇ ಸಂಗೀತ ಸಮ್ಮೇಳನದ ಸಂಗೀತ ಕಛೇರಿ: ಗಾಯನ: ಎನ್.ಜೆ. ನಂದಿನಿ, ಪಿಟೀಲು: ಗೋಕುಲ್ ಅಲನಕೋಡ್, ಮೃದಂಗ: ಬಾಲಕೃಷ್ಣ ಕಾಮತ್, ಘಟ: ಸುಕನ್ಯಾ ರಾಮಗೋಪಾಲ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 6



ಯಶಸ್ಸಿನ ಮೂಲ ಸ್ವಅವಲೋಕನ

ಡಾ.ಪರಮೇಶ್ವರಯ್ಯ ಸೊಪ್ಪಿಮಠ

ವಿದ್ಯಾರ್ಥಿಗಳ ಮೌಲ್ಯಮಾಪನದ ರೀತಿ ಹಾಗೂ ತೀರ್ಮಾನಗಳಿಗೆ ದೊಡ್ಡವರಿಂದ ಗೌರವ ಸಿಗಲಿ. ವಿದ್ಯಾರ್ಥಿಗಳಲ್ಲಿ ಸ್ವಮೌಲ್ಯಮಾಪನದ ಬೀಜಬಿತ್ತಿ, ಹೆಮ್ಮರವಾಗುವಂತೆ ನೋಡಿಕೊಂಡರೆ ಸ್ವಬೆಳವಣಿಗೆ ಸಹಜವಾಗಿ ನಡೆಯುತ್ತದೆ.

‘ಸಿಂಹಾವಲೋಕನ’ ಪದವನ್ನು ಸಾಮಾನ್ಯವಾಗಿ ಅನೇಕ ಕಡೆಗಳಲ್ಲಿ ಬಳಸಲಾಗುತ್ತದೆ. ಅಂದರೆ ಸಿಂಹವು ತಾನು ನಡೆಯುವಾಗ ನಾಲ್ಕು ಹೆಜ್ಜೆ ಮುಂದಕ್ಕೆ ಸಾಗಿ ನಂತರ ಒಮ್ಮೆ ಅದು ಹಿಂತಿರುಗಿ ತಾನು ನಡೆದು ಬಂದ ಹಾದಿಯನ್ನು ಅವಲೋಕಿಸುತ್ತದೆ. ಪ್ರಾಣಿಗಳಲ್ಲೇ ಈ ಗುಣವಿರುವಾಗ ಮನುಷ್ಯರು ಇಂಥ ಗುಣವನ್ನು ಅಳವಡಿಸಿಕೊಳ್ಳದಿದ್ದರೆ ಹೇಗೆ?. ಅದರಲ್ಲಿಯೂ ಕಲಿಯುವ ವಿದ್ಯಾರ್ಥಿಗಳಿಗೆ ಇದು ರೂಢಿಸಿಕೊಳ್ಳಲೇಬೇಕಾದ ಶಿಸ್ತು.

ವಿದ್ಯಾರ್ಥಿಯು ತಾನು ಅಧ್ಯಯನ ಮಾಡಿದ್ದನ್ನು ಸಿಂಹಾವಲೋಕನ ಮಾಡಿಕೊಳ್ಳಲೇಬೇಕು. ಇದನ್ನು ಇನ್ನಷ್ಟು ಸರಳವಾಗಿ ಹೇಳುವುದಾದರೆ ‘ಸ್ವ ಅವಲೋಕನ’ ಎನ್ನಬಹುದು. ಸ್ವ ಅವಲೋಕನದ ಮೂಲಕ ವಿದ್ಯಾರ್ಥಿಯು ಅಧ್ಯಯನದ ಮಟ್ಟದಲ್ಲಿ ತಾನು ಎಲ್ಲಿರಬೇಕಾಗಿತ್ತು?. ಈಗ ಎಲ್ಲಿದ್ದೇನೆ?. ಅಲ್ಲಿಗೆ ಹೋಗಲು ಇರುವ ಮಾರ್ಗಗಳಾವುವು? ಹೀಗೆ ಇವೆಲ್ಲವನ್ನೂ ಸಂಪೂರ್ಣವಾಗಿ ಅರಿತುಕೊಳ್ಳಲು ಸ್ವ ಅವಲೋಕನ ನೆರವಾಗುತ್ತದೆ.


ಸ್ವಅವಲೋಕನ ಹೀಗಿರಲಿ...

- ಸ್ವಅವಲೋಕನಕ್ಕೆ ಒಳಪಡುವಾಗ ಪ್ರಾಮಾಣಿಕರಾಗಿರಬೇಕು. ಏನು ತಪ್ಪಾಗಿದೆ ಎಂಬುದನ್ನು ಮುಚ್ಚುಮರೆಯಿಲ್ಲದೇ ಒಪ್ಪಿಕೊಳ್ಳಿ. ನಿಮ್ಮನ್ನು ನೀವು ಮೊದಲು ನಂಬಿ. ಖಂಡಿತವಾಗಿಯೂ ಇಂಥದ್ದನ್ನು ಸಾಧಿಸಲು ಸಾಧ್ಯವಿದೆ ಎಂಬುದನ್ನು ಬಲವಾಗಿ ನಂಬಿ.
- ಸ್ವ ಮೌಲ್ಯಮಾಪನದಿಂದ ಬದಲಾದ ಅಂಶಗಳನ್ನು ಅಳವಡಿಸಿಕೊಳ್ಳಲು ಸಮಯವನ್ನು ನೀಡಲೇಬೇಕಾಗುತ್ತದೆ. ಅದಕ್ಕೂ ಮೊದಲು ಸ್ವಯಂ ಮೌಲ್ಯಮಾಪನವನ್ನು ಪೂರ್ಣಗೊಳಿಸಲು ಕೆಲ ಸಮಯವನ್ನು ಮೀಸಲಿಡಬೇಕಾಗುತ್ತದೆ. ಆದರೆ ನೀವು ಏನನ್ನು ಸಾಧಿಸಲು ಬಯಸುತ್ತೀರಿ, ಅದು ಹೇಗೆ ಸಂಭವಿಸಬಹುದು ಮತ್ತು ನೀವು ಸರಿಯಾದ ಹಾದಿಯಲ್ಲಿದ್ದೀರಾ ಎಂಬುದರ ಕುರಿತು ಯೋಚಿಸಲು ಸಮಯ ಕೊಡಿ.
- ಕಳೆದ ತ್ರೈಮಾಸಿಕದಲ್ಲಿ ಹೇಗೆ ಅಭ್ಯಾಸ ನಡೆಸಿದ್ದೀರಿ ಎಂಬುದರ ಕುರಿತು ಕೆಲವು ಟಿಪ್ಪಣಿಗಳನ್ನು ತೆಗೆದುಕೊಳ್ಳಲು ವಿಶ್ವಾಸಾರ್ಹ ಸ್ನೇಹಿತರೊಂದಿಗೆ ಸಮಾಲೋಚನೆ ಮಾಡಬೇಕು. ಕಡಿಮೆ ಅಂಕ ಬರುವ ವಿಷಯದ ಕುರಿತು ಇರುವ ನಿಮ್ಮ ಅಭಿಪ್ರಾಯದ ಬಗ್ಗೆಯೂ ಟಿಪ್ಪಣಿ ಮಾಡಿಕೊಳ್ಳಿ.
- ಹಿಂದಿನ ವರ್ಷದ ನಿಮ್ಮ ಕಾರ್ಯಕ್ಷಮತೆಯ ಬಗ್ಗೆ ಶಿಕ್ಷಕರಿಗೆ ಅರಿವಿರುವುದರಿಂದ ಸಾಮರ್ಥ್ಯ ಹಾಗೂ ದೌರ್ಬಲ್ಯ ಗುರುತಿಸಲು ಶಿಕ್ಷಕರ ನೆರವು ಪಡೆಯಬಹುದು. ಇದರಿಂದ ಗುರಿ ಸ್ಪಷ್ಟವಾಗುತ್ತದೆ. ಅದನ್ನು ಸಾಧಿಸುವ ಹಾದಿಯೂ ಸ್ಪಷ್ಟಗೊಳ್ಳುತ್ತದೆ.

ಸ್ವಅವಲೋಕನವು ಬರೀ ಅಧ್ಯಯನಕ್ಕೆ ಮಾತ್ರ ಸೀಮಿತವಲ್ಲ. ಬದಲಾಗಿ ಬದುಕಿನ ಪ್ರತಿ ಹಂತದಲ್ಲಿಯೂ ಈ ತಂತ್ರವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು.

ಸ್ವಅವಲೋಕನವು ಒಂದು ರೀತಿ ನಮ್ಮೊಂದಿಗೆ ನಾವೇ ಸ್ಪರ್ಧಿಸಲು ಪ್ರೇರಣೆ ಒದಗಿಸುತ್ತದೆ. ಇದು ಯಾವುದೇ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಲು ಅಗತ್ಯ.

ಸ್ವಅವಲೋಕನದ ಮೂಲಕ ನಮ್ಮ ಗುರಿಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಅವುಗಳನ್ನು ಒಂದೊಂದಾಗಿ ಸಾಧಿಸುವ ಮೂಲಕ ಉನ್ನತ ಹಂತಕ್ಕೆ ಸಾಗಬಹುದಾಗಿದೆ. ಆ ಗುರಿಗಳನ್ನು ತಲುಪಲು ಏನು ಮಾಡಬೇಕು? ಹಾಗೂ ಏನು ಮಾಡಬಾರದು? ಎಂಬುದರ ಬಗ್ಗೆ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಆ ಮೂಲಕ ಯೋಜನೆಯನ್ನು ರೂಪಿಸಿಕೊಂಡು ಸಾಧನೆಯತ್ತ ಮುನ್ನಡೆಯಬಹುದು.



ಸ್ವಅವಲೋಕನದ ಮಾದರಿ

ಎಸ್ಸೆಸ್ಸೆಲ್ಸಿ ಓದುತ್ತಿದ್ದ ಜಾಣ ವಿದ್ಯಾರ್ಥಿಯೊಬ್ಬ ತಪ್ಪದೇ ಎಲ್ಲ ತರಗತಿಗಳಿಗೆ ಹಾಜರಾಗುತ್ತಿದ್ದ. ಉತ್ತಮ ಅಧ್ಯಯನ ನಡೆಸಿದ್ದ. ಫಲಿತಾಂಶದಲ್ಲಿ ಅತ್ಯುತ್ತಮ ಶ್ರೇಣಿ ಪಡೆಯುವ ವಿಶ್ವಾಸವಿತ್ತು. ಯಾವ ಪ್ರಶ್ನೆ ಕೇಳಿದರೂ ಉತ್ತರ ಹೇಳುವಷ್ಟು ಪರಿಣತಿ ಇತ್ತು. ಆದರೆ, ಪರೀಕ್ಷೆ ಬರೆಯುವಾಗ ಮಾಡಿದ ಯಡವಟ್ಟಿನಿಂದ ಅತ್ಯುತ್ತಮ ಶ್ರೇಣಿ ಸಿಗಲಿಲ್ಲ. ಅದೇನೆಂದರೆ ಸಮಾಜವಿಜ್ಞಾನ ಪರೀಕ್ಷೆ ಬರೆಯುವಾಗ ಒಂದು ದೀರ್ಘಪ್ರಶ್ನೆಗೆ ತಪ್ಪು ಉತ್ತರ ಬರೆದಿದ್ದ. ಇದು ಪರೀಕ್ಷಾ ಸಮಯದಲ್ಲಿಯೇ ಆತನ ಗಮನಕ್ಕೆ ಬಂದಿತ್ತು. ಪರೀಕ್ಷಾ ಅವಧಿ ಮುಗಿಯಲು ಇನ್ನೂ ಐದು ನಿಮಿಷ ಬಾಕಿ ಇತ್ತು. ಸರಿಯಾದ ಉತ್ತರ ಗೊತ್ತಿದ್ದರೂ ಸುಮ್ಮನಾದ. ಇದು ಆತನಿಗೆ ಕಡಿಮೆ ಅಂಕ ಬರಲು ಕಾರಣವಾಗಿತ್ತು. ಕೆಲಸ ಮಾಡುವಾಗ, ನಿರ್ಧಾರ ಕೈಗೊಳ್ಳುವಾಗ ಎರಡೆರಡು ಬಾರಿ ಪರಿಶೀಲಿಸಬೇಕಾಗುತ್ತದೆ. ಈ ಸಮಯದಲ್ಲಿ ಸ್ವಅವಲೋಕನ ಪ್ರಮುಖ ಪಾತ್ರ ವಹಿಸುತ್ತದೆ.

ಸ್ವಅವಲೋಕನದ ಮಹತ್ವ

- ಕಾರ್ಯಕ್ಷಮತೆಯ ಮಟ್ಟವನ್ನು ವಿಮರ್ಶಾತ್ಮಕವಾಗಿ ಯೋಚಿಸುವಂತೆ ಮಾಡುತ್ತದೆ. ಆಗ ಪ್ರಗತಿಯ ಮೌಲ್ಯಮಾಪನವೂ ಸುಲಭ. ಸಾಮರ್ಥ್ಯ ಮತ್ತು ಸುಧಾರಿಸಬೇಕಾದ ಕೌಶಲಗಳನ್ನು ಅರಿಯಲು ಇದರಿಂದ ಸಾಧ್ಯವಾಗುತ್ತದೆ.
- ಜ್ಞಾನ ಮತ್ತು ಮಾನಸಿಕ ಬೆಳವಣಿಗೆಯಲ್ಲಿನ ಅಂತರವನ್ನು ಗುರುತಿಸಲು ಸಹಾಯ ಮಾಡುತ್ತದೆ. ಅವುಗಳನ್ನು ಸಮಯಕ್ಕೆ ತಕ್ಕಂತೆ ಪರಿಷ್ಕರಿಸುವುದರಿಂದ ಗುರಿ ಸ್ಪಷ್ಟಗೊಳ್ಳುತ್ತದೆ. ಇದರಿಂದ ಕೆಲಸದೆಡೆಗಿನ ಬದ್ಧತೆ ಹೆಚ್ಚುತ್ತದೆ. ಇನ್ನಷ್ಟು ಕೆಲಸ ಮಾಡಲು ಪ್ರೇರೇಪಿಸುತ್ತದೆ.
- ಸ್ವಅವಲೋಕನವೆಂಬುದು ನಿಷ್ಠುರವಾದ ಕ್ರಮವಾದ್ದರಿಂದ ಆದ ಘಟನೆಗಳ ಬಗ್ಗೆ ವ್ಯರ್ಥಯೋಚನೆ ಮಾಡದೆ, ಭವಿಷ್ಯದ ಕ್ರಿಯೆಗಳ ಬಗ್ಗೆ ಗಮನವಿಡುವಂತೆ ಪ್ರೇರೇಪಿಸುತ್ತದೆ. ಆಗಾಗ್ಗೆ ಕಾರ್ಯಕ್ಷಮತೆಯನ್ನು ಪರಿಶೀಲಿಸುತ್ತಿದ್ದರೆ ಆತ್ಮವಿಶ್ವಾಸವೂ ಹೆಚ್ಚುತ್ತದೆ. ಕಾರ್ಯಕ್ಷಮತೆಯ ಆಧಾರದ ಮೇಲೆ ಪ್ರಗತಿಯ ನಕ್ಷೆಯನ್ನು ರೂಪಿಸಬಹುದು.

ಸಾಧನೆಗೆ ಹೇಗೆ ಕಾರ್ಯನಿರ್ವಹಿಸಿದ್ದೀರಿ. ನಿರೀಕ್ಷೆಗಳನ್ನು ಪೂರೈಸಿದ್ದೀರಾ, ಮೀರಿದ್ದೀರಾ, ಸಾಧಿಸಲು ಹೆಣಗಾಡಿದ್ದೀರಾ ಎಂಬುದನ್ನು ದಾಖಲಿಸಿಕೊಳ್ಳಬೇಕು. ಸ್ವ ಅವಲೋಕನವೆಂಬುದು ಪ್ರಶ್ನೆಗಳ ಗುಚ್ಛವೇ ಆಗಿರುತ್ತದೆ. ಈ ಗುರಿಯನ್ನು ಏಕೆ ಮುಟ್ಟಲು ಸಾಧ್ಯವಾಗುತ್ತಿಲ್ಲ?. ಯಾವ ಅಂಶಗಳು ಪ್ರಗತಿಗೆ ಅಡ್ಡಗಾಲಾಗಿವೆ?. ಹಾಕಿಕೊಂಡ ಗುರಿಯು ಸ್ಪಷ್ಟವೇ? ನಿರ್ದಿಷ್ಟವೇ?. ಯಾವ ಪರ್ಯಾಯ ಮಾರ್ಗ ಅನುಸರಿಸಿದರೆ ಗುರಿ ಸಾಧಿಸಬಹುದು ಹೀಗೆ ಪ್ರಶ್ನೆಗಳನ್ನು ಮುಂದಿಟ್ಟುಕೊಳ್ಳಿ.

ಸ್ವಅವಲೋಕನ ಹಾದಿ ತುಳಿಯುವ ವಿದ್ಯಾರ್ಥಿಗಳ ನಿರ್ಧಾರ, ಮೌಲ್ಯಮಾಪನದ ರೀತಿ ಹಾಗೂ ತೀರ್ಮಾನಗಳಿಗೆ ದೊಡ್ಡವರಿಂದ ಗೌರವ ಸಿಗಲಿ. ವಿದ್ಯಾರ್ಥಿಗಳ ಅಕ್ಷರ ಜ್ಞಾನಕ್ಕೆ ಅಷ್ಟೇ ಅಲ್ಲದೇ ಸ್ವವಿಮರ್ಶೆಯ ನಡೆಗೂ ಗೌರವ ದೊರೆಯಬೇಕು. ವಿದ್ಯಾರ್ಥಿಗಳಲ್ಲಿ ಸ್ವ ಮೌಲ್ಯಮಾಪನದ ಬೀಜಬಿತ್ತಿ, ಹೆಮ್ಮರವಾಗುವಂತೆ ನೋಡಿಕೊಂಡರೆ ಸ್ವಬೆಳವಣಿಗೆ ಬಹಳ ಸಹಜವಾಗಿ ನಡೆಯುತ್ತದೆ. ಸ್ವಾನುಭವದ ಮುಖಾಂತರ ಆಳವಾದ ಜ್ಞಾನವನ್ನು ಅರಿಯುವಲ್ಲಿ ಅವರು ಸಮರ್ಥರಾಗುತ್ತಾರೆ.

ಕೆಲಸ ಸಿಗದೆ ಪರದಾಟ: ಏನು ಮಾಡಲಿ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ಸರ್, ನಾನು ಎರಡು ವರ್ಷದ ಹಿಂದೆ ಎಂಬಿಎ (ಎಚ್‌ಆರ್) ಮುಗಿಸಿದ್ದೇನೆ. ಒಳ್ಳೆಯ ಕೆಲಸಕ್ಕಾಗಿ ಈಗಲೂ ಪರದಾಡುತ್ತಿದ್ದೇನೆ. ಈಗಿರುವ ಕೆಲಸದಲ್ಲಿ ತೃಪ್ತಿಯಿಲ್ಲ. ಒಳ್ಳೆಯ ಕೆಲಸವಿಲ್ಲದೆ, ಜೀವನದಲ್ಲಿ ನೆಲೆಯೂರಲೂ ಆಗುತ್ತಿಲ್ಲ. ಈ ಕಷ್ಟದಿಂದ ಪಾರಾಗುವುದು ಹೇಗೆ? ದಯವಿಟ್ಟು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ವೃತ್ತಿಯಲ್ಲಿ ಯಶಸ್ಸನ್ನು ಗಳಿಸಲು ವೃತ್ತಿ ಸಂಬಂಧಿತ ಜ್ಞಾನ ಮತ್ತು ಕೌಶಲಗಳ ಜೊತೆಗೆ ಸಕಾರಾತ್ಮಕ ಆಲೋಚನೆ, ನಿಷ್ಠೆ, ಪ್ರಾಮಾಣಿಕತೆ, ಸ್ವಯಂಪ್ರೇರಣೆ ಮತ್ತು ಆತ್ಮವಿಶ್ವಾಸವಿರಬೇಕು. ಹಾಗಿದ್ದರೆ ಮಾತ್ರ, ನಿಮ್ಮ ಕಾರ್ಯಾಚರಣೆ ಉದ್ಯೋಗದಾತರ ನಿರೀಕ್ಷೆಯಂತಿದ್ದು, ನಿಮಗೂ ವೃತ್ತಿಯಲ್ಲಿ ತೃಪ್ತಿಯಿರುತ್ತದೆ. ಹಾಗಾಗಿ, ಈಗಿರುವ ವೃತ್ತಿಯಲ್ಲಿ ತೃಪ್ತಿಯಿಲ್ಲದಿರುವ ಕಾರಣಗಳನ್ನು ಸ್ವಯಂ ಮೌಲ್ಯಮಾಪನದಿಂದ ಅರ್ಥಮಾಡಿಕೊಂಡು, ಇದೇ ವೃತ್ತಿಯಲ್ಲಿ ಪ್ರಗತಿ ಸಾಧ್ಯವೇ ಎಂದು ಪರಿಶೀಲಿಸಿ.

ಹಾಗೂ, ಬೇಡಿಕೆಯಲ್ಲಿರುವ ಎಂಬಿಎ (ಮಾನವ ಸಂಪನ್ಮೂಲ) ಪದವಿಯ ನಂತರವೂ ಉತ್ತಮ ಕೆಲಸ ಸಿಗದಿರಲು ಇನ್ನಿತರ ಕಾರಣಗಳನ್ನು ವಿಶ್ಲೇಷಿಸಬೇಕು. ಉದಾಹರಣೆಗೆ, ನಿಮ್ಮಲ್ಲಿರುವ ವಿಶಿಷ್ಟ ಅರ್ಹತೆ, ಕೌಶಲ ಮತ್ತು ಸಾಮರ್ಥ್ಯಗಳನ್ನು ನಿಮ್ಮ ಬಯೋಡೇಟ ಅಚ್ಚುಕಟ್ಟಾಗಿ ಪ್ರತಿಬಿಂಬಿಸುತ್ತಿದೆಯೇ? ಅದೇ ರೀತಿ, ವೃತ್ತಿಯ ಸಂದರ್ಶನಗಳನ್ನು ಸೂಕ್ತವಾದ ಕಾರ್ಯತಂತ್ರದಿಂದಲೂ, ಆತ್ಮವಿಶ್ವಾಸದಿಂದಲೂ ಎದುರಿಸಲು ಆಗುತ್ತಿದೆಯೇ ಎಂದು ಪರಿಶೀಲಿಸಿ. ಹೆಚ್ಚಿನ ಮಾರ್ಗದರ್ಶನಕ್ಕಾಗಿ,

ಈ ವಿಡಿಯೊ ವೀಕ್ಷಿಸಿ: https://www.youtube.com/@ExpertCareerConsultantAuthor

2. ನಾನು ಈಗ ದ್ವಿತೀಯ ಪಿಯುಸಿ (ಕಾಮರ್ಸ್) ಮಾಡುತ್ತಿದ್ದು ಸಿಎ ಮಾಡುವುದು ಕಷ್ಟವೆನಿಸುತ್ತಿದೆ. ಮುಂದೆ ಯಾವ ಕೋರ್ಸ್ ಮಾಡಬಹುದು?

ಹೆಸರು, ಊರು ತಿಳಿಸಿಲ್ಲ.

ಪಿಯುಸಿ (ಕಾಮರ್ಸ್) ನಂತರ, ಬಿಕಾಂ, ಬಿಕಾಂ (ಹಾನರ್ಸ್), ಬಿ.ಎಸ್ಸಿ (ಕಂಪ್ಯೂಟರ್ ಸೈನ್ಸ್, ಐಟಿ ಸೇರಿದಂತೆ ಹಲವಾರು ಆಯ್ಕೆಗಳು), ಬಿಎ, ಬಿಸಿಎ, ಬಿಬಿಎ, ಬಿ.ಡಿಸೈನ್, ಎಸಿಎಸ್, ಸಿಎಂಎ ಇತ್ಯಾದಿ ಕೋರ್ಸ್‌ಗಳನ್ನು ಮಾಡಬಹುದು.

ನಿಮ್ಮ ಆಸಕ್ತಿ, ಸ್ವಾಭಾವಿಕ ಪ್ರತಿಭೆ ಮತ್ತು ಕೌಶಲಗಳನ್ನು ಗಮನಿಸಿ, ಸೂಕ್ತವಾದ ಕಾರ್ಯತಂತ್ರ ಮತ್ತು ಕಠಿಣವಾದ ಪರಿಶ್ರಮವಿದ್ದಲ್ಲಿ, ಬೇಡಿಕೆಯಿರುವ ಸಿಎ ಕೋರ್ಸ್ ಮಾಡುವುದು ಅಸಾಧ್ಯವಲ್ಲ. ಸಿಎ ಮಾಡುವ ಮಾರ್ಗದರ್ಶನಕ್ಕಾಗಿ,

ಈ ವಿಡಿಯೊ ವೀಕ್ಷಿಸಿ: https://www.youtube.com/watch?v=fuTaa5UjZCo

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ.
ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು

ಡಿಎಕ್ಸ್‌ಸಿ ಪ್ರೊಗ್ರೆಸ್ಸಿಂಗ್ ಮೈಂಡ್ಸ್

ವಿದ್ಯಾರ್ಥಿ ವೇತನ ಕೈಪಿಡಿ

ವಿವರ: ಡಿಎಕ್ಸ್‌ಸಿ ಪ್ರೊಗ್ರೆಸ್ಸಿಂಗ್ ಮೈಂಡ್ಸ್ ವಿದ್ಯಾರ್ಥಿವೇತನವು ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಶೈಕ್ಷಣಿಕ/ಕ್ರೀಡಾ ವೆಚ್ಚಗಳನ್ನು ಬೆಂಬಲಿಸುವ ಗುರಿಯನ್ನು ಹೊಂದಿದೆ.

ಅರ್ಹತೆ: ಸ್ಟೆಮ್-ಸಂಬಂಧಿತ ಕ್ಷೇತ್ರಗಳಲ್ಲಿ (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ) ಯಾವುದೇ ವರ್ಷದ ಪದವಿ ಪಡೆಯುತ್ತಿರುವ ಹುಡುಗಿಯರು ಮತ್ತು ಮಂಗಳಮುಖಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. 13 ರಿಂದ 25 ವರ್ಷ ವಯಸ್ಸಿನೊಳಗಿನ ಮತ್ತು ಕಳೆದ 2/3 ವರ್ಷಗಳಲ್ಲಿ ರಾಜ್ಯ/ರಾಷ್ಟ್ರೀಯ/ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ/ದೇಶವನ್ನು ಪ್ರತಿನಿಧಿಸಿರುವ ಮಹಿಳಾ ಕ್ರೀಡಾಪಟುಗಳೂ ಅರ್ಜಿ ಸಲ್ಲಿಸಬಹುದು.

ಪದವಿ ವಿದ್ಯಾಭ್ಯಾಸ ಪಡೆಯುವ ವಿದ್ಯಾರ್ಥಿಗಳಾದರೆ, ಅವರ ತಮ್ಮ ಹಿಂದಿನ ತರಗತಿ/ಸೆಮಿಸ್ಟರ್‌ನಲ್ಲಿ ಕನಿಷ್ಠ ಶೇ 60 ಅಂಕಗಳನ್ನು ಪಡೆದಿರಬೇಕು.

ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು **₹4,00,000** (ಕ್ರೀಡಾಪಟುಗಳಿಗೆ **₹5,00,000**) ಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.

ಆರ್ಥಿಕ ಸಹಾಯ: ಪದವಿಗೆ - **₹50,000**

ಕ್ರೀಡಾ ಪಟುಗಳಿಗೆ - ₹1,25,000

ಅರ್ಜಿ ಸಲ್ಲಿಸಲು ಕೊನೆ ದಿನ: 31-10-2023

ಅರ್ಜಿ ಸಲ್ಲಿಸುವ ವಿಧಾನ : ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/DXCS2

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತ

1) 8, 3, 2 ..... ಈ ಸಮಾಂತರ ಶ್ರೇಢಿಯ 22 ಪದಗಳವರೆಗಿನ ಮೊತ್ತವೇನು?

ಪರಿಹಾರ: ಇಲ್ಲಿ $a = 8$, $b = 3 - 8 = -5$, $n = 22$.
ನಮಗೆ ತಿಳಿದಿರುವಂತೆ

$$S_n = \frac{n}{2}[2a + (n-1)d]$$
$$= \frac{22}{2}[16 + 21(-5)]$$
$$= 11[16-(105)]$$
$$= 11\ (16 - 105)$$
$$= 11\ (-89)$$
$$= -979$$

ಹಾಗಾದರೆ, ಸಮಾಂತರ ಶ್ರೇಢಿಯ ಮೊದಲ 22 ಪದಗಳ ಮೊತ್ತವು –979 ಆಗಿದೆ.

2) ಒಂದು ಸಮಾಂತರ ಶ್ರೇಢಿಯ ಮೊದಲ 14 ಪದಗಳ ಮೊತ್ತ 1050. ಅದರ ಮೊದಲನೇ ಪದ 10, ಆದರೆ 20ನೇ ಪದ ಕಂಡುಹಿಡಿಯಿರಿ.

ಪರಿಹಾರ: ಇಲ್ಲಿ $S_{14} = 1050$, $n = 14$, $a = 10$

$$S_n = \frac{n}{2}[2a + (n-1)d]$$
$$1050 = \frac{14}{2}(20 + 13d)$$
$$1050 = 140 + 91d$$
$$910 = 91d$$
$$\therefore d = 10$$

ಆದ್ದರಿಂದ $a_{20} = 10 + (20-1)10 \Rightarrow = 200$ ಅಂದರೆ 20ನೇ ಪದ 200 ಆಗಿದೆ.

3) 24, 21, 18 .... ಈ ಸಮಾಂತರ ಶ್ರೇಢಿಯ ಎಷ್ಟು ಪದಗಳ ಮೊತ್ತ 78 ಆಗಿದೆ?

ಪರಿಹಾರ: $a = 24$, $d = 21 - 24 = -3$, $S_n = 78$

ನಾವು n ಕಂಡುಹಿಡಿಯಬೇಕಾಗಿದೆ.

$$S_n = \frac{n}{2}[2a + (n-1)d]$$
$$78 = \frac{n}{2}[48 + (n-1)(-3)]$$
$$\Rightarrow 78 = \frac{n}{2}[51 - 3n]$$
$$3n^2 - 51n + 156 = 0$$
$$n^2 - 17n + 52 = 0$$
$$(n - 4)(n - 13) = 0$$
$$\therefore \quad n = 4 \text{ ಅಥವಾ } 13$$

nನ ಎರಡೂ ಮೌಲ್ಯಗಳು ಸ್ವೀಕಾರಾರ್ಹ, ಆದ್ದರಿಂದ ಪದಗಳ ಸಂಖ್ಯೆ 4 ಅಥವಾ 13.

4) ಮೊತ್ತ ಕಂಡುಹಿಡಿಯಿರಿ

(i) ಮೊದಲ 1000 ಧನ ಪೂರ್ಣಾಂಕಗಳು

(ii) ಮೊದಲ n ಧನ ಪೂರ್ಣಾಂಕಗಳು

ಪರಿಹಾರ: (i) $S = 1 + 2 + 3 + \ldots\ldots + 1000$ ಆಗಿರಲಿ

$S_n = \frac{n}{2}[a + l]$ ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತ ಕಂಡುಹಿಡಿಯುವ ಸೂತ್ರ ಉಪಯೋಗಿಸಿದಾಗ ನಮಗೆ

$$S_{1000} = \frac{1000}{2}[1 + 1000] = 500 \times 1001 = 500500$$

ಹಾಗಾದರೆ ಮೊದಲ 1000 ಪೂರ್ಣಾಂಕಗಳ ಮೊತ್ತವು 500500

(ii) $S_n = 1 + 2 + 3 + \ldots\ldots + n$ ಆಗಿರಲಿ

ಇಲ್ಲಿ $a = 1$ ಮತ್ತು ಕೊನೆಯ ಪದ $l = n$ ಆಗಿದೆ

ಆದ್ದರಿಂದ $S_n = \frac{n(1+n)}{2}$ ಅಥವಾ $S_n = \frac{n(n+1)}{2}$

ಹಾಗಾದರೆ ಮೊದಲ ಧನ ಪೂರ್ಣಾಂಕಗಳ ಮೊತ್ತವು

$S_n = \frac{n(n+1)}{2}$ ಆಗಿದೆ

5) n ನೇ ಪದ $a_n = 3 + 2n$ ಇರುವ ಸಂಖ್ಯಾ ಸರಣಿಯ ಮೊದಲ 24 ಪದಗಳ ಮೊತ್ತ ಕಂಡುಹಿಡಿಯಿರಿ.

ಪರಿಹಾರ: $a_n = 3 + 2n$ ಆದರೆ

$$a_1 = 3 + 2 \Rightarrow = 5$$
$$a_2 = 3 + 2 \times 2 \Rightarrow = 7$$
$$a_3 = 3 + 2 \times 3 \Rightarrow = 3 + 6 \Rightarrow = 9$$

ಆ ಸಂಖ್ಯಾ ಸರಣಿ 5, 7, 9, 11 ....

ಇಲ್ಲಿ, 7 – 5 = 9 – 7 = 11 – 9 = 2 ....

ಆದ್ದರಿಂದ ಇದು ಸಾಮಾನ್ಯ ವ್ಯತ್ಯಾಸ $d = 2$ ಇರುವ ಸಮಾಂತರ ಶ್ರೇಢಿಯನ್ನು ಉಂಟು ಮಾಡುತ್ತದೆ.

S_{24} ನ್ನು ಕಂಡುಹಿಡಿಯಲು $n = 24$, $a = 5$, $d = 2$

ಆದ್ದರಿಂದ,

$$S_{24} = \frac{24}{2}[2 \times 5 + (24-1) \times 2 \Rightarrow = 12(10 + 46) \Rightarrow = 672$$

ಆದ್ದರಿಂದ ಆ ಸಂಖ್ಯಾ ಸರಣಿಯ ಮೊದಲ 24 ಪದಗಳ ಮೊತ್ತವು 672 ಆಗಿದೆ.

6) ಟೆಲಿವಿಷನ್ ಸೆಟ್‌ಗಳ ತಯಾರಕರೊಬ್ಬರು ಮೂರನೇ ವರ್ಷದಲ್ಲಿ 600 ಸೆಟ್‌ಗಳನ್ನು ಮತ್ತು ಏಳನೇ ವರ್ಷದಲ್ಲಿ 700 ಸೆಟ್‌ಗಳನ್ನು ತಯಾರಿಸುತ್ತಾರೆ. ಪ್ರತಿ ವರ್ಷ ಅವರ ಉತ್ಪಾದನೆ ಸ್ಥಿರವಾದ ಸಂಖ್ಯೆಯಿಂದ ಹೆಚ್ಚಾಗುತ್ತದೆ ಎಂದು ಭಾವಿಸಿ.

(i) ಮೊದಲ ವರ್ಷದ ಉತ್ಪಾದನೆ (ii) 10ನೇ ವರ್ಷದ ಉತ್ಪಾದನೆ (iii) 7 ವರ್ಷಗಳ ಒಟ್ಟು ಉತ್ಪಾದನೆಗಳನ್ನು ಕಂಡುಹಿಡಿಯಿರಿ

ಪರಿಹಾರ: (i) ಉತ್ಪಾದನೆ ಪ್ರತಿವರ್ಷ ಒಂದು ಸ್ಥಿರವಾದ ಸಂಖ್ಯೆಯ ಪ್ರಕಾರ ಹೆಚ್ಚಾಗುವ ಕಾರಣ 1ನೇ, 2ನೇ, 3ನೇ .... ವರ್ಷಗಳಲ್ಲಿ ಉತ್ಪಾದಿಸುವ ಟೆಲಿವಿಷನ್ ಸೆಟ್‌ಗಳ ಸಂಖ್ಯೆ ಸಮಾಂತರ ಶ್ರೇಢಿಯನ್ನುಂಟು ಮಾಡುತ್ತದೆ.

nನೇ ವರ್ಷದಲ್ಲಿ ಉತ್ಪಾದಿಸಿದ ಟೆಲಿವಿಷನ್ ಸೆಟ್‌ಗಳ ಸಂಖ್ಯೆಯನ್ನು a_n ಎಂದು ಸೂಚಿಸುವ

ಆದರೆ $a_3 = 600$ ಮತ್ತು $a_7 = 700$

ಅಥವಾ $a + 2d = 600$ ಮತ್ತು $a + 6d = 700$

ಈ ಸಮೀಕರಣಗಳನ್ನು ಬಿಡಿಸಿದಾಗ $d = 25$ ಮತ್ತು $a = 550$ ಪಡೆಯುತ್ತೇವೆ. ಆದ್ದರಿಂದ ಮೊದಲ ವರ್ಷದಲ್ಲಿ ಉತ್ಪಾದಿಸಿದ ಟೆಲಿವಿಷನ್ ಸೆಟ್‌ಗಳ ಸಂಖ್ಯೆ = 550

ii) ಈಗ $a_{10} = a + 9d \Rightarrow = 550 + 9 \times 25 \Rightarrow = 775$

ಆದ್ದರಿಂದ 10ನೇ ವರ್ಷದಲ್ಲಿ ಉತ್ಪಾದಿಸಿದ ಟೆಲಿವಿಷನ್ ಸೆಟ್‌ಗಳ ಸಂಖ್ಯೆ = 775

iii) $S_7 = 72$

$$S_n = \frac{n}{2}[2a + (n-1)d]$$
$$78 = \frac{7}{2}[2 \times 550 + (7-1)(25)]$$
$$\Rightarrow = \frac{7}{2}[1100 + 50]$$
$$= 4375$$

ಹೀಗೆ 7 ವರ್ಷಗಳಲ್ಲಿ ಉತ್ಪಾದಿಸಿದ ಒಟ್ಟು ಟೆಲಿವಿಷನ್ ಸೆಟ್‌ಗಳ ಸಂಖ್ಯೆ = 4375

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC PHYSICS

Chapter – 1

ELECTRIC CHARGES AND FIELDS


7. In the given figure q_A = -256 C, q_B = 299 C and q_C = 81 C. Calculate net electric field along DA.



(.....Contd)

Electric field at D due to q_A,

$$E_1 = \frac{1}{4\pi \epsilon_0} \frac{q_A}{AD^2}$$
$$= \frac{9 \times 10^9 \times 256}{(3.2 \times 10^{-2})^2}$$
$$= 225 \times 10^{13}\ NC^{-1} \text{ along DA}$$



Electric field at D due to q_B,

$$E_2 = \frac{1}{4\pi \epsilon_0} \frac{q_B}{BD^2} = \frac{9 \times 10^9 \times 299}{(2.4 \times 10^{-2})^2}$$
$$= 467.2 \times 10^4\ NC^{-1} \text{ along DF}$$

Electric field at D due to q_C,

$$E_3 = \frac{1}{4\pi \epsilon_0} \frac{q_C}{CD^2} = \frac{9 \times 10^9 \times 81}{(1.8 \times 10^{-2})^2}$$
$$= 225 \times 10^{13}\ NC^{-1} \text{ along DA}$$


$\therefore$ Net electric field along DA = $E_1 + E_3$

$$= 2 \times 225 \times 10^{13}\ NC^{-1}$$
$$= 4.5 \times 10^{15}\ NC^{-1}$$

8. A copper ball of density 8.6 g cm^{-3} and 1 cm in diameter is immersed in oil of density 0.8 g cm^{-3}. What is the charge on the ball, if it remains just suspended in oil electric field of intensity 3600 Vm^{-1} acting in the upward direction? *(Electric force on the ball should be equal to the observed weight of the ball for the ball to remain just suspended in oil)*

Soln:- Observed weight of ball = actual weight of ball – weight of oil displaced

$$W_0 = \frac{4}{3}\pi R^3 \rho g - \frac{4}{3}\pi R^3 \sigma g$$



$$W_0 = \frac{4}{3}\pi R^3(\rho - \sigma)g$$
$$= \frac{4}{3}\pi(5 \times 10^{-3})^3 \times (8600 - 800) \times 9.8$$
$$= \frac{4}{3}\pi(5 \times 10^{-3})^3 \times 7800 \times 9.8 \quad \ldots(i)$$

Electric force on the ball F = qE

= q x 3600 .... (ii)


Equating (i) and (ii),

$qE = W_0$

$$q \times 3600 = \frac{4}{3}\pi(5 \times 10^{-3})^3 \times 7800 \times 9.8$$
$$\Rightarrow q = 1.1 \times 10^{-5} C.$$

9. Sketch roughly the electric field lines for a thin, circular and uniformly positively charged disc of finite radius.

Ans:- The field lines are uniformly distributed over the surface of the disc. These lines diverge far away from the disc such that when extended backward (shown as dotted lines) they intersect at the centre of the disc.



If the disc is negatively charged the lines are to be shown directed inward toward the disc.

10. Give the tentative values of electric field near a charged plastic comb, at the surface of a uranium nucleus, electric discharge in air, lower layers of atmosphere near earth and on copper wiring of household installation.

Ans:- Charged plastic comb = 10^3 N C^{-1}

Surface of uranium nucleus = 10^{21} NC^{-1}

Electric discharge in air = 10^6 NC^{-1}

Lower atmosphere = 10^2 NC^{-1}

Household copper wiring = 10^{-2} NC^{-1}

Notes:- (1) Gaussian surface is an imaginary closed surface containing electric charges such that the electric field intensity at all points on its surface is same.

(2) Variation of Electric Field Intensity (E) with the distance (r) from the centre (O) of the solid sphere –

(a) Electric field intensity at the centre of the charged solid sphere is zero.

(b) As the distance (r) from the centre of solid sphere increases, electric field intensity also increases along OA and becomes maximum at the surface of the solid sphere.

(c)As the distance (r) further increases beyond the surface of the solid sphere, electric field intensity varies inversely with r^2 and hence decreases.

ರಸ್ತೆ ಸಾರಿಗೆ ಕಾರ್ಮಿಕರ ಫೆಡರೇಶನ್‌ನ ಸಮಾವೇಶದಲ್ಲಿ ರಾಮಲಿಂಗಾರೆಡ್ಡಿ

ಸಾರಿಗೆಗೆ ಶೀಘ್ರ ಸರ್ಕಾರಿ ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಓಲಾ, ಉಬರ್ ರೀತಿಯಲ್ಲಿ ಶೀಘ್ರದಲ್ಲೇ ಸಾರಿಗೆ ಇಲಾಖೆಯಿಂದ ಆ್ಯಪ್ ಪರಿಚಯಿಸಲಾಗುತ್ತದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭರವಸೆ ನೀಡಿದರು.

ಆಲ್ ಇಂಡಿಯಾ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಶನ್ (ಎಐಆರ್‌ಟಿಡಬ್ಲ್ಯುಎಫ್) ಭಾನುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಸಮಾವೇಶದಲ್ಲಿ ಅವರು ಮಾತನಾಡಿದರು.

'ಇದು ಆನ್‌ಲೈನ್ ಕಾಲವಾಗಿರುವುದರಿಂದ ಆ್ಯಪ್ ಅಗತ್ಯ ಹೆಚ್ಚಿದೆ. ತ್ವರಿತವಾಗಿ ಅಥವಾ ಸ್ವಲ್ಪ ತಡವಾಗಿಯಾದರೂ ಆ್ಯಪ್ ಪರಿಚಯಿಸಲಾಗುತ್ತದೆ' ಎಂದು ತಿಳಿಸಿದರು.

ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿ ರಚಿಸಲು ಸಾರಿಗೆ ಇಲಾಖೆ ಯೋಜನೆ ರೂಪಿಸಿದೆ. ಚಳಿಗಾಲದ ಅಧಿವೇಶನದಲ್ಲಿ ಈ ಮಸೂದೆ ಮಂಡಿಸಲಾಗುವುದು. ಎಲ್ಲ ಅಸಂಘಟಿತ ಕಾರ್ಮಿಕರು ಈ ಮಂಡಳಿ ವ್ಯಾಪ್ತಿಗೆ ಬರುವುದಿಲ್ಲ. ರಸ್ತೆ ಸಾರಿಗೆ ಕಾರ್ಮಿಕರಿಗಷ್ಟೇ ಇದು ಅನ್ವಯವಾಗಲಿದೆ. ಆಟೊ, ಟ್ಯಾಕ್ಸಿ, ಲಾರಿ ಸಹಿತ ಸಾರ್ವಜನಿಕ ಸಾರಿಗೆಯಲ್ಲಿ ದುಡಿಯುವವರು, ಇವುಗಳ ತಯಾರಿ, ದುರಸ್ತಿ ಕಾರ್ಯಾಗಾರಗಳಲ್ಲಿ ಕೆಲಸ ಮಾಡುವವರ ಕ್ಷೇಮಕ್ಕಾಗಿ ಮಂಡಳಿ ಇರಲಿದೆ ಎಂದು ಮಾಹಿತಿ ನೀಡಿದರು.


ನಗರದ ಗುಂಡೂರಾವ್ ಕ್ರೀಡಾಂಗಣದಲ್ಲಿ ಎಐಆರ್‌ಟಿಡಬ್ಲ್ಯೂಎಫ್ ಆಯೋಜಿಸಿದ್ದ ರಾಜ್ಯ ಸಮಾವೇಶದಲ್ಲಿ ಎಐಆರ್‌ಟಿಡಬ್ಲ್ಯೂಎಫ್ ಸಂಚಾಲಕ ಕೆ. ಪ್ರಕಾಶ್, ಬಿಟಿಡಿಯು ಅಧ್ಯಕ್ಷ ಆರ್.ಮಂಜುನಾಥ್ ಮತ್ತು ಸದಸ್ಯರು ಮನವಿ ಪತ್ರವನ್ನು ಸಾರಿಗೆ ಸಚಿವ ರಾಮಲಿಂಗ ರೆಡ್ಡಿ ರವರಿಗೆ ನೀಡಿದರು —ಪ್ರಜಾವಾಣಿ ಚಿತ್ರ

'ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಕೇಂದ್ರ ಸರ್ಕಾರ ಕೆಎಸ್‌ಆರ್‌ಟಿಸಿ, ಬಿಎಂಟಿಸಿಗೂ ಸಬ್ಸಿಡಿ ನೀಡಬೇಕು' ಎಂದು ಆಗ್ರಹಿಸಿದರು.

ಎಐಆರ್‌ಟಿಡಬ್ಲ್ಯುಎಫ್ ಸಂಚಾಲಕರಾದ ಪ್ರಕಾಶ್ ಕೆ, 'ಮೋಟಾರು ವಾಹನ ರಂಗವನ್ನು ಕಾರ್ಪೊರೇಟೀಕರಣ ಮಾಡುವ, ದುಬಾರಿ ದಂಡ, ಶುಲ್ಕ ವಿಧಿಸುವ ಮೋಟಾರು ವಾಹನ (ತಿದ್ದುಪಡಿ) ಕಾಯ್ದೆ–2019 ಅನ್ನು ಒಕ್ಕೂಟ ಸರ್ಕಾರ ವಾಪಸ್ ಪಡೆಯಬೇಕೆಂದು ರಾಜ್ಯ ಸರ್ಕಾರ ನಿರ್ಣಯ ಅಂಗೀಕರಿಸಬೇಕು. ಎಲೆಕ್ಟ್ರಿಕ್ ಬಸ್‌ಗಳನ್ನು ನಿಗಮಗಳೇ ಖರೀದಿಸಬೇಕು. ಪೆಟ್ರೋಲ್, ಡೀಸೆಲ್, ಅನಿಲದ ಮೇಲೆ ವಿಧಿಸುವ ತೆರಿಗೆ ಕಡಿಮೆ ಮಾಡಬೇಕು. ಸಾರಥಿ ಸೂರು ಯೋಜನೆಯನ್ನು ಜಾರಿ ಮಾಡಬೇಕು' ಎಂದರು.

ಪಿಜಿ ಆಯುಷ್ ಕೌನ್ಸೆಲಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023 ನೇ ಸಾಲಿನ ಸ್ನಾತಕೋತ್ತರ ಆಯುರ್ವೇದ, ಯೋಗ ಮತ್ತು ನ್ಯಾಚುರೋಪಥಿ, ಯುನಾನಿ ಮತ್ತು ಹೋಮಿಯೋಪಥಿ ಕೋರ್ಸುಗಳಿಗೆ ಅಖಿಲ ಭಾರತ ಮಟ್ಟದಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಗೆ ಸರ್ಕಾರದ ಸೂಚನೆಯಂತೆ ಕೌನ್ಸೆಲಿಂಗ್ ನಡೆಯಲಿದೆ.

ಪ್ರಾಧಿಕಾರವು ಸರ್ಕಾರಿ ಮಹಾವಿದ್ಯಾಲಯಗಳಲ್ಲಿ ಕೇಂದ್ರ ಸರ್ಕಾರದ ಕೋಟಾದ ಅಡಿ ಮೀಸಲಿರುವ ಶೇ 15 ರಷ್ಟು ಸೀಟುಗಳನ್ನು ಹೊರತುಪಡಿಸಿ ಮಿಕ್ಕ ಶೇ 85ರಷ್ಟು ಮತ್ತು ಖಾಸಗಿ ಕಾಲೇಜುಗಳಲ್ಲಿರುವ ಶೇ 100 ರಷ್ಟು ಸೀಟುಗಳನ್ನು ಹಂಚಿಕೆ ಮಾಡಲಿದೆ.

ಅರ್ಹ ಅಭ್ಯರ್ಥಿಗಳು ಪಿ.ಜಿ. ಆಯುಷ್ ಸೀಟುಗಳಿಗೆ ನೋಂದಾಯಿಸಿ ಕೊಳ್ಳಬಹುದು' ಎಂದು ತಿಳಿಸಿದ್ದಾರೆ. ಅಭ್ಯರ್ಥಿಗಳು ಅ.30 ರಿಂದ ನ.2ರ ವರೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆ.

ನ.3 ರ ಒಳಗೆ ₹ 2,000 ನೋಂದಣಿ ಶುಲ್ಕ ಪಾವತಿಸಬೇಕು. ಪರಿಶಿಷ್ಟ ಜಾತಿ/ಪಂಗಡ ಮತ್ತು ಪ್ರವರ್ಗ-1ರ ಅಭ್ಯರ್ಥಿಗಳಿಗೆ ಈ ಶುಲ್ಕ ₹ 1 ಸಾವಿರ ಇರಲಿದೆ. ವೇಳಾಪಟ್ಟಿ, ದಾಖಲಾತಿಗಳ ಪರಿಶೀಲನೆ ಮಾಹಿತಿಗಳನ್ನು ಪ್ರಾಧಿಕಾರದ ಜಾಲತಾಣ http://kea.kar.nic.in ನಲ್ಲಿ ನೋಡಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ ತಿಳಿಸಿದ್ದಾರೆ.

ಕೊರಿಯರ್ ಡ್ರಗ್ಸ್: ಪೊಲೀಸರ ಹೆಸರಿನಲ್ಲಿ ₹ 12.99 ಲಕ್ಷ ವಂಚನೆ

ಬೆಂಗಳೂರು: 'ಕೊರಿಯರ್‌ನಲ್ಲಿ ಡ್ರಗ್ಸ್ ಸಾಗಣೆ' ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸುವುದಾಗಿ ಬೆದರಿಸಿ ವೃದ್ಧೆಯೊಬ್ಬರಿಂದ ₹ 12.99 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸ್ಥಳೀಯ ನಿವಾಸಿಯಾಗಿರುವ 62 ವರ್ಷದ ವೃದ್ಧೆಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಫೆಡೆಕ್ಸ್ ಕೊರಿಯರ್ ಪ್ರತಿನಿಧಿ ಸೋಗಿನಲ್ಲಿ ಅ. 25ರಂದು ದೂರುದಾರರಿಗೆ ಕರೆ ಮಾಡಿದ್ದ ಆರೋಪಿ, 'ನಿಮ್ಮ ಹೆಸರಿನಲ್ಲಿ ಡ್ರಗ್ಸ್ ಹಾಗೂ ನಿಷೇಧಿತ ವಸ್ತುಗಳ ಕೊರಿಯರ್ ಬಂದಿದೆ. ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಕೊರಿಯರ್ ಜಪ್ತಿ ಮಾಡಿದ್ದಾರೆ. ನಿಮ್ಮ ವಿರುದ್ಧ ಪ್ರಕರಣ ದಾಖಲಿಸುವುದಾಗಿ ಹೇಳುತ್ತಿದ್ದಾರೆ' ಎಂದಿದ್ದ. ಕೊರಿಯರ್ ತಮ್ಮದಲ್ಲವೆಂದು ದೂರುದಾರರು ಹೇಳಿದ್ದರು.'

'ಕೊರಿಯರ್ ಮೇಲೆ ನಿಮ್ಮ ಹೆಸರು, ವಿಳಾಸವಿದೆ' ಎಂದಿದ್ದ ಪ್ರತಿನಿಧಿ, 'ಕೊರಿಯರ್ ನಿಮ್ಮದಲ್ಲವೆಂದಾದರೆ ಮುಂಬೈ ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಿ' ಎಂದು ತಿಳಿಸಿದ್ದ. ಆರೋಪಿ ನೀಡಿದ್ದ ಮೊಬೈಲ್ ಸಂಖ್ಯೆಗೆ ದೂರುದಾರರು ಕರೆ ಮಾಡಿದ್ದರು. ಪೊಲೀಸರ ಹೆಸರಿನಲ್ಲಿ ಮಾತನಾಡಿದ್ದ ಆರೋಪಿಗಳು, ಬ್ಯಾಂಕ್ ಖಾತೆ ವಿವರ ಪಡೆದು ₹ 12.99 ಲಕ್ಷ ವರ್ಗಾಯಿಸಿಕೊಂಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ. ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ **9606038256** ಮಾಡಬಹುದು.


ಪೀಣ್ಯ–ಲಗ್ಗೆರೆಗೆ ಸಂಪರ್ಕ ಕಲ್ಪಿಸುವ ರಸ್ತೆ ದುಃಸ್ಥಿತಿ.

'ಪೀಣ್ಯ: ರಸ್ತೆ ದುರಸ್ತಿಗೊಳಿಸಿ'

ಪೀಣ್ಯದಿಂದ ಲಗ್ಗೆರೆಗೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದು, ಅಲ್ಲಲ್ಲಿ ಗುಂಡಿಗಳು ಬಿದ್ದು ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಪೀಣ್ಯ ಕೈಗಾರಿಕೆ ಪ್ರದೇಶವಾಗಿದ್ದರಿಂದ ಪ್ರತಿನಿತ್ಯ ಈ ರಸ್ತೆಯಲ್ಲಿ ಸಾವಿರಾರೂ ವಾಹನಗಳು ಸಂಚರಿಸುತ್ತವೆ. ರಸ್ತೆ ಹದಗೆಟ್ಟಿರುವುದರಿಂದ ಸಂಚಾರ ದಟ್ಟಣೆಯಾಗುತ್ತಿದೆ. ಜತೆಗೆ ಅಪಘಾತಗಳು ಸಂಭವಿಸುತ್ತಿವೆ. ಇದರಿಂದ, ಕಾರ್ಖಾನೆಗೆ ತೆರಳುವ ಕಾರ್ಮಿಕರು ಸರಿಯಾದ ಸಮಯಕ್ಕೆ ಹೋಗಲು ಪರದಾಡುತ್ತಿದ್ದಾರೆ. ರಸ್ತೆ ದುರಸ್ತಿಗೊಳಿಸುವಂತೆ ಬಿಬಿಎಂಪಿ ಹಾಗೂ ಸ್ಥಳೀಯ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಲಾಗಿದೆ. ಆದರೆ, ಇದುವರೆಗೂ ಯಾವುದೇ ಕ್ರಮಕೈಗೊಂಡಿಲ್ಲ. ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ದೀಪಕ್, ಸ್ಥಳೀಯ ನಿವಾಸಿ


ರಾಷ್ಟ್ರೀಯ ಹೆದ್ದಾರಿಯಿಂದ ನಾಗಸಂದ್ರಕ್ಕೆ ಸಂಪರ್ಕ ಕಲ್ಪಿಸುವ ಒಳ ರಸ್ತೆಯ ದುಃಸ್ಥಿತಿ

'ರಸ್ತೆ ಸರಿಪಡಿಸಿ'

ರಾಷ್ಟ್ರೀಯ ಹೆದ್ದಾರಿಯಿಂದ ನಾಗಸಂದ್ರ, ರುಕ್ಮಿಣಿನಗರ ಮತ್ತು ಎಚ್‌ಎಂಟಿ ಬಡಾವಣೆಗೆ ಸಂಪರ್ಕ ಕಲ್ಪಿಸುವ ಒಳ ರಸ್ತೆಯು ಹದಗೆಟ್ಟಿದ್ದು, ರಸ್ತೆ ತುಂಬೆಲ್ಲ ಗುಂಡಿಗಳು ಬಿದ್ದಿವೆ. ವಾಹನ ಸವಾರರು ಸಂಚಾರಕ್ಕೆ ಸಂಚಕಾರ ಬಂದಿದೆ. ಇದರಿಂದ, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಕಚೇರಿಗೆ ಹೋಗುವ ನೌಕರರು ಸರಿಯಾದ ಸಮಯಕ್ಕೆ ತಲುಪಲು ಆಗುತ್ತಿಲ್ಲ. ಈ ಬಗ್ಗೆ ಬಿಬಿಎಂಪಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಸ್ಥಳೀಯ ಜನಪ್ರತಿನಿಧಿಗಳು ಕೂಡಲೇ ರಸ್ತೆ ದುರಸ್ತಿಗೊಳಿಸುವಂತೆ ಅಧಿಕಾರಿಗಳ ಮೇಲೆ ಒತ್ತಡ ಹಾಕಬೇಕು.

ವಿಶ್ವನಾಥ್ ಬೈಲಮ್ಮನವರ, ವಿನಾಯಕನಗರದ ನಿವಾಸಿ

'ವಾಲಿದ ವಿದ್ಯುತ ಕಂಬ ತೆರವುಗೊಳಿಸಿ'

ಹನುಮಂತನಗರದ ಗಣೇಶ ಭವನದ ಎದುರಿನ ಸರ್ಕಾರಿ ಗ್ರಂಥಾಲಯದ ಮುಂಭಾಗದಲ್ಲಿರುವ ವಿದ್ಯುತ್‌ಕಂಬ ವಾಲಿದೆ. ಪ್ರತಿನಿತ್ಯ ವಿದ್ಯಾರ್ಥಿಗಳು, ವೃದ್ಧರು ಪ್ರಯಾಣಿಕರು ಇಲ್ಲಿಂದಲೇ ಸಂಚರಿಸುತ್ತಾರೆ. ಅಪಾಯ ಸಂಭವಿಸುವ ಮುನ್ನ ಬೆಸ್ಕಾಂ ಅಧಿಕಾರಿಗಳು ವಿದ್ಯುತ್ ಕಂಬವನ್ನು ತೆರವುಗೊಳಿಸಬೇಕು.

ವಿನೋದ್, ಸ್ಥಳೀಯ ನಿವಾಸಿ


ಹನುಮಂತನಗರ ಗಣೇಶಭವನದ ಎದುರುಗಡೆ ಇರುವ ವಾಲಿದ ವಿದ್ಯುತ್ ಕಂಬ

'ರಸ್ತೆ ಗುಂಡಿ ಮುಚ್ಚಿ'

ನಗರತ್‌ಪೇಟೆಯ ಧರ್ಮರಾಯ ಸ್ವಾಮಿ ದೇವಸ್ಥಾನದ ವೃತ್ತದ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದಿದ್ದು ವಾಹನ ಸಂಚಾರಕ್ಕೆ ಸಮಸ್ಯೆಯಾಗಿದ್ದು, ಸಂಚಾರ ದಟ್ಟಣೆಗೂ ಕಾರಣವಾಗಿದೆ. ಈ ರಸ್ತೆಯ ಮೂಲಕವೇ ಬಿಬಿಎಂಪಿ ಕೇಂದ್ರ ಕಚೇರಿಗೆ ಹೋಗಬೇಕು. ಪ್ರತಿನಿತ್ಯ ಈ ರಸ್ತೆಯ ದುಃಸ್ಥಿತಿಯನ್ನು ಕಂಡು ಕಾಣದಂತೆ ಬಿಬಿಎಂಪಿ ಅಧಿಕಾರಿಗಳು ಓಡಾಡುತ್ತಿದ್ದಾರೆ. ಮಳೆ ಬಂದಾಗ ಈ ಗುಂಡಿಯಲ್ಲಿ ನೀರು ತುಂಬಿಕೊಳ್ಳುತ್ತದೆ. ಇದರಿಂದ ವಾಹನ ಸವಾರರಿಗೆ ರಸ್ತೆ ಯಾವುದು, ಗುಂಡಿ ಯಾವುದು ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ, ಈ ರಸ್ತೆಯನ್ನು ಕೂಡಲೇ ದುರಸ್ತಿಗೊಳಿಸಿ ಮುಂದೆ ಆಗುವ ಅನಾಹುತಗಳನ್ನು ತಪ್ಪಿಸಬೇಕು. ಬೆಂಗಳೂರು ನಗರಾಭಿವೃದ್ಧಿ ಸಚಿವರು ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನಗರದ ರಸ್ತೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಬೇಕು.

ಶಿವಪ್ರಸಾದ್, ಸ್ಥಳೀಯ ನಿವಾಸಿ


ಧರ್ಮರಾಯ ಸ್ವಾಮಿ ದೇವಸ್ಥಾನ ವೃತ್ತದ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು.


ಬಸವನಗುಡಿಯ ಮುಖ್ಯರಸ್ತೆಯಲ್ಲಿ ಹಾಕಿರುವ ಕಸ.

'ಪಾದಚಾರಿ ಮಾರ್ಗದಲ್ಲಿ ಕಸ'

ಬಸವನಗುಡಿಯ ರವೀಂದ್ರನಾಥ್ ಟ್ಯಾಗೋರ್ ಕೆಳಸೇತುವೆಯ ಮೇಲ್ಭಾಗದ ಮುಖ್ಯ ರಸ್ತೆಯಲ್ಲಿ ರಾಶಿಗಟ್ಟಲೇ ಕಸ ಹಾಕಲಾಗಿದೆ. ದಸರಾ ಹಬ್ಬದ ಸಂದರ್ಭದಲ್ಲಿ ಹೂವಿನ ತ್ಯಾಜ್ಯ ಸೇರಿದಂತೆ ಅಲಂಕಾರಿಕ ವಸ್ತುಗಳನ್ನು ಹಾಕಲಾಗಿದೆ. ಇದರಿಂದ, ಈ ಪ್ರದೇಶವೆಲ್ಲ ದುರ್ನಾತ ಬೀರುತ್ತಿದೆ. ಜತೆಗೆ ಇದು ಸೊಳ್ಳೆಗಳ ತಾಣವಾಗಿ ಮಾರ್ಪಟ್ಟಿದೆ. ರೋಗಗಳು ಹರಡುವ ಭೀತಿ ಶುರುವಾಗಿದೆ. ವಾಹನ ಸವಾರರು ಮೂಗು ಮುಚ್ಚಿಕೊಂಡು ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ, ಬಿಬಿಎಂಪಿ ಕೂಡಲೇ ಈ ಕಸವನ್ನು ವಿಲೇವಾರಿ ಮಾಡುವ ಮೂಲಕ ನಗರದ ಸೌಂದರ್ಯ ಹಾಗೂ ಸ್ವಚ್ಛತೆ ಕಾಪಾಡಬೇಕು.

ಅನುಷಾ, ಸ್ಥಳೀಯ ನಿವಾಸಿ

'ಪಾದಚಾರಿ ಮಾರ್ಗ ದುರಸ್ತಿಗೊಳಿಸಿ'

ನಾಗರಬಾವಿಯ 80 ಅಡಿ ಮುಖ್ಯರಸ್ತೆಯ ಪಾದಾಚಾರಿ ಮಾರ್ಗದ ಕಾಮಗಾರಿಯನ್ನು ಐದು ತಿಂಗಳಿಂದ ಸ್ಥಗಿತಗೊಳಿಸಲಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ಸಾವಿರಾರೂ ವಾಹನಗಳು ಸಂಚರಿಸುತ್ತಿವೆ. ಪಾದಚಾರಿ ಮಾರ್ಗದ ಕಾಮಗಾರಿ ಸ್ಥಗಿತಗೊಂಡ ಪರಿಣಾಮ ವೃದ್ಧರು, ಮಕ್ಕಳು, ಮಹಿಳೆಯರು ಮುಖ್ಯರಸ್ತೆಯಲ್ಲಿ ಸಂಚರಿಸು ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಬಿಬಿಎಂಪಿಗೆ ಹಲವಾರು ಮನವಿ ಸಲ್ಲಿಸಿದರೂ ಕಾಮಗಾರಿ ಪ್ರಾರಂಭಿಸಿಲ್ಲ. ಕೂಡಲೇ ಪಾದಚಾರಿ ಮಾರ್ಗ ದುರಸ್ತಿಗೊಳಿಸಿ ನಗರದ ಸೌಂದರ್ಯವನ್ನು ಕಾಪಡುವ ಕೆಲಸ ಮಾಡಬೇಕು.

ಕೃಷ್ಣಮೂರ್ತಿ ಡಿ.ಆರ್., ಸ್ಥಳೀಯ ನಿವಾಸಿ


ನಾಗರಬಾವಿ ಪಾದಚಾರಿ ಮಾರ್ಗದ ಸ್ಥಿತಿ.

'ರಸ್ತೆ ಗುಂಡಿ ಮುಚ್ಚಿ'

ಗೆದ್ದಲಹಳ್ಳಿಯ ರೈಲ್ವೆ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯರಸ್ತೆ ಸಂಪೂರ್ಣ ಹಾಳಾಗಿದ್ದು, ರಸ್ತೆಯ ತುಂಬೆಲ್ಲ ಗುಂಡಿಗಳು ಬಿದ್ದಿವೆ. ಈ ಮಾರ್ಗದಲ್ಲಿ ಪ್ರತಿನಿತ್ಯ ಸಾವಿರಾರೂ ವಾಹನಗಳು ಸಂಚರಿಸುತ್ತವೆ. ಬೇಸಿಗೆಯಲ್ಲಿ ವಾಹನ ಸಂಚಾರದಿಂದ ಎಲ್ಲೆಡೆ ದೂಳಿನ ಮಜ್ಜನ ವಾದರೆ, ಮಳೆಗಾಲದಲ್ಲಿ ಗುಂಡಿಯಲ್ಲಿ ನೀರು ನಿಲ್ಲುತ್ತದೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ಕೂಡಲೇ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಲಕ್ಷ್ಮಿನಾರಾಯಣ ಸ್ವಾಮಿ
ಸ್ಥಳೀಯ ನಿವಾಸಿ


ಗೆದ್ದಲಹಳ್ಳಿಯ ರೈಲ್ವೆ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅವ್ಯವಸ್ಥೆ

ಮಡಿವಾಳ, ನಾಗವಾರ, ಹೆಬ್ಬಾಳ ಕೆರೆ ಇನ್ನು ಪಾಲಿಕೆಯಿಂದ ನಿರ್ವಹಣೆ

ಬಿಬಿಎಂಪಿಗೆ 3 ಕೆರೆ ಹಸ್ತಾಂತರ

ಪ್ರಜಾವಾಣಿ ವಾರ್ತೆ



ಹೆಬ್ಬಾಳ ಕೆರೆ

ಬೆಂಗಳೂರು: ಅರಣ್ಯ ಇಲಾಖೆಯ ವಶದಲ್ಲಿದ್ದ ಮಡಿವಾಳ ಕೆರೆ, ನಾಗವಾರ ಕೆರೆ ಮತ್ತು ಹೆಬ್ಬಾಳ ಕೆರೆಯನ್ನು ಬಿಬಿಎಂಪಿ ವಶಕ್ಕೆ ನೀಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಇನ್ನು ಮುಂದೆ ಈ ಕೆರೆಗಳ ಮೇಲ್ವಿಚಾರಣೆ, ಅಭಿವೃದ್ಧಿ, ನಿರ್ವಹಣೆ ಮತ್ತು ಒತ್ತುವರಿ ತೆರವುಗೊಳಿಸುವುದು ಮತ್ತು ಮುಂದೆ ಒತ್ತುವರಿ ಆಗದಂತೆ ತಡೆಗಟ್ಟುವ ಅಂಶಗಳೊಂದಿಗೆ, ಕೆರೆಗಳು ಹೇಗಿವೆಯೋ ಅದೇ ರೀತಿಯಲ್ಲಿ ಹಸ್ತಾಂತರ ಆಗಲಿವೆ.

ಕೆರೆಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆಯಿಂದ ಈವರೆಗೂ ಕೆರೆಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ, ವೆಚ್ಚ, ಪ್ರಸ್ತುತ ಒತ್ತುವರಿಗಳ ವಿವರ, ನ್ಯಾಯಾಲಯಗಳಲ್ಲಿ ಬಾಕಿ ಇರುವ ವ್ಯಾಜ್ಯಗಳ ವಿವರ ಇತ್ಯಾದಿಗಳನ್ನು ಒಳಗೊಂಡ ಸಮಗ್ರ ಮಾಹಿತಿಯನ್ನು ಜಂಟಿ ತಪಾಸಣೆ ಮಾಡಿ ಲಿಖಿತ ರೂಪದಲ್ಲಿ ಹಸ್ತಾಂತರಿಸಬೇಕು.

ಈಗಾಗಲೇ ಅಭಿವೃದ್ಧಿಪಡಿಸಿರುವ ಕೆರೆಗಳನ್ನು ಪಾಲಿಕೆಗೆ ಹಸ್ತಾಂತರಿಸುವ ಇಲಾಖೆಯು ಕೆರೆಗಳ ಏರಿಯ ಸ್ಥಿರತೆ ಕುರಿತು ವರದಿಯನ್ನು ಪಾಲಿಕೆಗೆ ಸಲ್ಲಿಸಬೇಕು. ಕೆರೆಗಳನ್ನು ಅಭಿವೃದ್ಧಿಪಡಿಸಲು ಪಾಲಿಕೆಯ ಕೆರೆಗಳ ಅಭಿವೃದ್ಧಿ ವಿಭಾಗದಿಂದ ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಿರ್ವಹಿಸಬೇಕು ಎಂದೂ ಆದೇಶದಲ್ಲಿದೆ.

ಯಾವುದೇ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೆಟಿಟಿಪಿ ಕಾಯ್ದೆಯನ್ವಯ ಟೆಂಡರ್ ಕರೆದು ಕಾಮಗಾರಿ ನಿರ್ವಹಿಸಬೇಕು, ಕೆರೆಗಳಲ್ಲಿ ಯಾವುದೇ ವಿಧದ ವಾಣಿಜ್ಯ ಚಟುವಟಿಕೆಯನ್ನು ಕೈಗೊಳ್ಳಬಾರದು, ಎಲ್ಲ ಕೆರೆಗಳ ಮೂಲ ಒಡೆತನ ಸರ್ಕಾರದ್ದು, ಕೆರೆಗಳ ಮಾಲೀಕತ್ವವು ಕಂದಾಯ ಇಲಾಖೆಯಲ್ಲಿ ಇರಲಿದೆ. ಖಾಸಗಿ ಅಥವಾ ಸರ್ಕಾರೇತರ ಸಂಸ್ಥೆಗಳಿಗೆ ತಾತ್ಕಾಲಿಕವಾಗಿ ಅಥವಾ ಕಾಯಂ ಆಗಿ ವಹಿಸಬಾರದು ಎಂದೂ ವಿವರಿಸಲಾಗಿದೆ.

2019 ರ ಆಗಸ್ಟ್ 3 ಆದೇಶದ ಪ್ರಕಾರ ಬಿಡಿಎ ವಶದಲ್ಲಿದ್ದ ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿ ಗರುಡಾಚಾರ್ಯಪಾಳ್ಯ ಕೆರೆ ಮತ್ತು ಚಿಕ್ಕಪೇಟೆ ಕ್ಷೇತ್ರ ವ್ಯಾಪ್ತಿಯ ಜಯನಗರದಲ್ಲಿರುವ ಬೈರಸಂದ್ರ ಕೆರೆಯನ್ನು ಬಿಬಿಎಂಪಿಗೆ ಹಸ್ತಾಂತರಿಸಲು ಕ್ರಮ ತೆಗೆದುಕೊಳ್ಳಲಾ ಗಿತ್ತು. 2019 ರ ಡಿ. 11ರಂದು ಬಿಡಿಎ ವಶದಲ್ಲಿ 28, ಅರಣ್ಯ ಇಲಾಖೆಯ ವಶದಲ್ಲಿದ್ದ 9, ಬಿಎಂಆರ್‌ಸಿಎಲ್ ವಶದಲ್ಲಿ 28 ಎಕರೆ 39 ಗುಂಟೆ ಪ್ರದೇಶದಲ್ಲಿದ್ದ ಕೆಂಗೇರಿ ಕೆರೆಯನ್ನು ಕೆಲವು ಷರತ್ತು ವಿಧಿಸಿ ಬಿಬಿಎಂಪಿಗೆ ಹಸ್ತಾಂತರಿಸಲು ಅನುಮೋದನೆ ನೀಡಲಾಗಿತ್ತು.

ಆದರೆ, ನಂತರ ಈ ಆದೇಶವನ್ನು ಬದಲಿಸಿ ಅರಣ್ಯ ಇಲಾಖೆಯ ವಶದಲ್ಲಿದ್ದ 9 ಕೆರೆಗಳ ಪೈಕಿ, ಮಡಿವಾಳ, ಪುಟ್ಟೇನಹಳ್ಳಿ (ಯಲಹಂಕ ಕೆರೆ), ನಾಗವಾರ, ಹೆಬ್ಬಾಳ ಕೆರೆಗಳನ್ನು ಪರಿಸರ ಮತ್ತು ಜೈವಿಕ ಸಂಪತ್ತು ರಕ್ಷಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆಯ ಸುಪರ್ದಿಯಲ್ಲಿಯೇ ಮುಂದುವರಿಸಲಾಗಿತ್ತು.

ಆದರೆ, ಇದೇ ಜೂನ್ 1 ರಂದು ಬಿಬಿಎಂಪಿ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ಚರ್ಚೆ ನಡೆದಾಗ ಈ ಕೆರೆಗಳ ಅಭಿವೃದ್ಧಿ ನಿರೀಕ್ಷಿತ ಮಟ್ಟದಲ್ಲಿ ಆಗಿಲ್ಲ ಮತ್ತು ಕುಂಠಿತವಾಗುತ್ತಿದೆ. ಹೀಗಾಗಿ ಪುಟ್ಟೇನಹಳ್ಳಿ ಕೆರೆ ಹೊರತುಪಡಿಸಿ ಉಳಿದ ಮೂರು ಕೆರೆಗಳನ್ನು ಬಿಬಿಎಂಪಿ ವಶಕ್ಕೆ ಪಡೆಯುವುದು ಸೂಕ್ತ ಎಂದು ತೀರ್ಮಾನಿಸಲಾಗಿತ್ತು’ ಎಂದೂ ಆದೇಶದಲ್ಲಿ ತಿಳಿಸಲಾಗಿದೆ.

ನೀರಿನಲ್ಲಿ ಮುಳುಗಿ ಅಣ್ಣ –ತಮ್ಮ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನ್ನೇರುಘಟ್ಟ ರಸ್ತೆಯ ಸ್ವಾಗತ್ ಜಂಕ್ಷನ್ ಬಳಿಯ ಬಿ.ಜಿ.ರಸ್ತೆಯಲ್ಲಿರುವ ನಿರ್ಮಾಣ ಹಂತದ ಕಟ್ಟಡದ ಬೇಸ್‌ಮೆಂಟ್‌ನಲ್ಲಿದ್ದ ನೀರಿನಲ್ಲಿ ಮುಳುಗಿ ಸಹೋದರರಿಬ್ಬರು ಮೃತಪಟ್ಟಿದ್ದಾರೆ.

‘ತಿಲಕ್‌ನಗರದ ನಸರುಲ್ಲಾ ಖಾನ್ (9) ಹಾಗೂ ಈತನ ತಮ್ಮ ಅಮೀನ್ ಖಾನ್ (7) ಮೃತರು. ಆಟೊ ಚಾಲಕ ಅಜ್ಗರ್ ಖಾನ್ ಪುತ್ರರಾಗಿದ್ದ ಇಬ್ಬರೂ ಬಾಲಕರು, ಅ. 27ರಂದು ಮನೆಯಿಂದ ನಾಪತ್ತೆಯಾಗಿದ್ದರು. ಅವರಿಬ್ಬರ ಮೃತದೇಹಗಳು ಭಾನುವಾರ ಪತ್ತೆಯಾಗಿವೆ’ ಎಂದು ಸುದ್ದಗುಂಟೆಪಾಳ್ಯ ಪೊಲೀಸರು ಹೇಳಿದರು.

ಮೀನಿನ ಮರಿ ಹಿಡಿಯಲು ಹೋಗಿದ್ದರು: ‘ನಸರುಲ್ಲಾ ಖಾನ್ ಹಾಗೂ ಅಮೀನ್ ಖಾನ್, ನಿಂತ ನೀರಿನಲ್ಲಿರುತ್ತಿದ್ದ ಮೀನಿನ ಮರಿಗಳನ್ನು ಆಗಾಗ ಹಿಡಿಯುತ್ತಿದ್ದರು. ಬಿ.ಜಿ. ರಸ್ತೆಯಲ್ಲಿರುವ ನಿರ್ಮಾಣ ಹಂತದ ಕಟ್ಟಡ ವ್ಯಾಜ್ಯದಿಂದಾಗಿ ಹಲವು ವರ್ಷಗಳಿಂದ ಪಾಳು ಬಿದ್ದಿತ್ತು. ಅದರ ಬೇಸ್‌ಮೆಂಟ್‌ನಲ್ಲಿ 10 ಅಡಿಗಿಂತಲೂ ಹೆಚ್ಚು ನೀರಿತ್ತು. ಅದರಲ್ಲಿದ್ದ ಮೀನಿನ ಮರಿಗಳನ್ನು ಹಿಡಿಯಲು ಅಣ್ಣ- ತಮ್ಮ ಅ. 27ರಂದು ಸ್ಥಳಕ್ಕೆ ಹೋಗಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ನೀರಿನಲ್ಲಿ ಪಾಚಿ ಹೆಚ್ಚಾಗಿತ್ತು. ಮೀನಿನ ಮರಿ ಹಿಡಿಯುವ ಸಂದರ್ಭದಲ್ಲಿ ಅಣ್ಣ-ತಮ್ಮ ಇಬ್ಬರೂ ಆಯತಪ್ಪಿ ನೀರಿನಲ್ಲಿ ಬಿದ್ದಿದ್ದರು. ಅಲ್ಲಿಯೇ ಮುಳುಗಿ ಮೃತಪಟ್ಟಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ’ ಎಂದು ಹೇಳಿವೆ.

ಮಕ್ಕಳಿಗಾಗಿ ಹುಡುಕಾಟ: ‘ಮನೆಯಿಂದ ಹೊರಗೆ ಹೋಗಿದ್ದ ಮಕ್ಕಳು, ವಾಪಸು ಬಂದಿರಲಿಲ್ಲ. ಆತಂಕಗೊಂಡಿದ್ದ ಪೋಷಕರು, ತಿಲಕ್‌ನಗರ ಠಾಣೆಗೆ ದೂರು ನೀಡಿದ್ದರು. ನಾಪತ್ತೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಮಕ್ಕಳಿಗಾಗಿ ಹುಡುಕಾಟ ನಡೆಸುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಮಕ್ಕಳಿಗೆ ಮೀನಿನ ಮರಿ ಹಿಡಿಯುವ ಹವ್ಯಾಸವಿತ್ತೆಂಬ ಮಾಹಿತಿ ಗೊತ್ತಾಗುತ್ತಿದ್ದಂತೆ, ನೀರು ಸಂಗ್ರಹವಿದ್ದ ಕಡೆ ಶೋಧ ನಡೆಸಲಾಯಿತು. ಬಿ.ಜಿ. ರಸ್ತೆಯಲ್ಲಿರುವ ನಿರ್ಮಾಣ ಹಂತದ ಕಟ್ಟಡದ ಬೇಸ್‌ಮೆಂಟ್ ಬಳಿ ಹೋದಾಗ, ನೀರಿನಲ್ಲಿ ಮೃತದೇಹಗಳು ತೇಲುತ್ತಿದ್ದವು’ ಎಂದು ಮೂಲಗಳು ಹೇಳಿವೆ.

‘ಮಕ್ಕಳ ಸಾವಿನ ಬಗ್ಗೆ ಪೋಷಕರು ದೂರು ನೀಡಿದ್ದಾರೆ. ಅದರನ್ವಯ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಹಜ್ ಭವನದಲ್ಲಿ ಬೆಂಕಿ ಅವಘಡ: ₹ 3 ಕೋಟಿ ನಷ್ಟ

ಬೆಂಗಳೂರು: ‘ತಿರುಮೇನಹಳ್ಳಿಯಲ್ಲಿರುವ ಹಜ್ ಭವನದಲ್ಲಿ ಶನಿವಾರ ಸಂಭವಿಸಿದ ಬೆಂಕಿ ಅವಘಡದಿಂದ ₹ 3 ಕೋಟಿ ನಷ್ಟ ಆಗಿದೆ’ ಎಂದು ರಾಜ್ಯ ಹಜ್ ಸಮಿತಿಯ ಕಾರ್ಯನಿರ್ವಹಣಾಧಿಕಾರಿ ಸರ್ಫರಾಜ್ ಖಾನ್ ಅವರು ಕೊತ್ತನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

‘ಹಜ್ ಯಾತ್ರಿಗಳು ತಾತ್ಕಾಲಿಕವಾಗಿ ಉಳಿದುಕೊಳ್ಳಲು ಭವನ ನಿರ್ಮಿಸಲಾಗಿದೆ. ವಸತಿ, ನೀರು, ಶೌಚಾಲಯ ಸೇರಿದಂತೆ ಹಲವು ಸೌಲಭ್ಯಗಳು ಭವನದಲ್ಲಿವೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಅ. 28ರಂದು ಸಂಜೆ 5 ಗಂಟೆಗೆ ಹಜ್ ಭವನದ ಎರಡನೇ ಹಾಗೂ ಮೂರನೇ ಮಹಡಿಯಲ್ಲಿದ್ದ ಸಮ್ಮೇಳನ ಸಭಾಂಗಣದಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದ್ದಾರೆ. ಅವಘಡದಿಂದಾಗಿ ಸಭಾಂಗಣದಲ್ಲಿದ್ದ ಪೀಠೋಪಕರಣ ಹಾಗೂ ಇತರೆ ಸಲಕರಣೆಗಳು ಸುಟ್ಟಿವೆ. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದ ಕೆ.ಆರ್.ಡಿ.ಎಲ್ ಅಧಿಕಾರಿಗಳು, ಸುಮಾರು ₹ 3 ಕೋಟಿ ನಷ್ಟ ಆಗಿರುವುದಾಗಿ ಹೇಳಿದ್ದಾರೆ. ಅವಘಡದ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸಿ ಹಜ್ ಸಮಿತಿ ತ್ವರಿತವಾಗಿ ವರದಿ ನೀಡಲು ಕ್ರಮ ಕೈಗೊಳ್ಳಿ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪೊಲೀಸರು, ‘ದೂರು ಪರಿಶೀಲಿಸಲಾಗುತ್ತಿದೆ’ ಎಂದರು.

ಸಚಿವ ಭೇಟಿ: ಅಲ್ಪಸಂಖ್ಯಾತ ಮತ್ತು ಹಜ್ ಸಚಿವ ಜಮೀರ್ ಅಹಮ್ಮದ್ ಖಾನ್ ಅವರು ಹಜ್ ಭವನಕ್ಕೆ ಭಾನುವಾರ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬೆಂಕಿ ಅವಘಡದ ಬಗ್ಗೆ ತನಿಖೆ ನಡೆಸಲಾಗುವುದು. ಹಾನಿಗೀಡಾಗಿರುವ ಸಭಾಂಗಣದ ದುರಸ್ತಿಗೆ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಬೈಕ್‌ಗಳ ನಡುವೆ ಡಿಕ್ಕಿ: ಸೈನಿಕ–ಯುಟ್ಯೂಬರ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ರಸ್ತೆಯಲ್ಲಿರುವ ಬಿಎಸ್‌ಎಫ್ ಕ್ಯಾಂಪಸ್ ಬಳಿ ಎರಡು ಬೈಕ್‌ಗಳ ನಡುವೆ ಶನಿವಾರ ರಾತ್ರಿ ಅಪಘಾತ ಸಂಭವಿಸಿದ್ದು, ಸೈನಿಕ ಹಾಗೂ ಯುಟ್ಯೂಬರ್ ಮೃತಪಟ್ಟಿದ್ದಾರೆ.

‘ತಮಿಳುನಾಡಿನ ಸುಧಾಕರ್ (41) ಹಾಗೂ ಕೋಲಾರದ ಗಿರೀಶ್ (32) ಮೃತರು. ಇಬ್ಬರೂ ಪ್ರತ್ಯೇಕ ಬೈಕ್‌ಗಳಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಯಲಹಂಕ ಸಂಚಾರ ಪೊಲೀಸರು ಹೇಳಿದರು.

‘ಬಿಎಸ್‌ಎಫ್‌ನಲ್ಲಿ ಕೆಲಸ ಮಾಡುತ್ತಿದ್ದ ಸುಧಾಕರ್, ಯಲಹಂಕ ಕ್ಯಾಂಪಸ್‌ನಲ್ಲಿದ್ದರು. ಮೃತ ಗಿರೀಶ್, ಯುಟ್ಯೂಬ್‌ನಲ್ಲಿ ‘ಗಣಿ 07’ ಚಾನೆಲ್ ಹೊಂದಿದ್ದರು. ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ ಸುತ್ತಾಡಿ ವಿಡಿಯೊ ಚಿತ್ರೀಕರಿಸಿ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡುತ್ತಿದ್ದರು’ ಎಂದು ತಿಳಿಸಿದರು.

ಮುಖಾಮುಖಿ ಡಿಕ್ಕಿ: ‘ಸೈನಿಕ ಸುಧಾಕರ್ ಅವರು ಬಿಎಸ್‌ಎಫ್ ಕ್ಯಾಂಪಸ್‌ನ 2ನೇ ಪ್ರವೇಶದ್ವಾರದಿಂದ ಹೊರಗೆ ಬಂದು ಮುಖ್ಯ ರಸ್ತೆಯತ್ತ (ಬಳ್ಳಾರಿ ರಸ್ತೆ) ಸಾಗಿದ್ದರು. ಗಿರೀಶ್ ಅವರು ಸ್ನೇಹಿತನ ಜೊತೆ ಬಾಗಲೂರು ವೃತ್ತದಿಂದ ಬೆಂಗಳೂರಿಗೆ ಬರುತ್ತಿದ್ದರು. ಎರಡು ಬೈಕ್‌ಗಳು ಮುಖಾಮುಖಿ ಡಿಕ್ಕಿ ಹೊಡೆದಿದ್ದವು’ ಎಂದು ಹೇಳಿದರು.

‘ಅಪಘಾತದಿಂದ ಮೂವರು ಸವಾರರು, ಬೈಕ್ ಸಮೇತ ರಸ್ತೆಯಲ್ಲಿ ಹಾರಿ ಬಿದ್ದಿದ್ದರು. ಸುಧಾಕರ್ ಹಾಗೂ ಗಿರೀಶ್, ತೀವ್ರ ಗಾಯಗೊಂಡು ಮೃತಪಟ್ಟಿದ್ದಾರೆ. ಗಿರೀಶ್ ಸ್ನೇಹಿತ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದರು.

‘ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ತಿಳಿದುಬಂದಿದೆ. ಜೊತೆಗೆ, ಸವಾರರು ಹೆಲ್ಮೆಟ್ ಧರಿಸಿರಲಿಲ್ಲವೆಂದು ಗೊತ್ತಾಗಿದೆ’ ಎಂದು ಪೊಲೀಸರು ತಿಳಿಸಿದರು.

ಪ್ರತ್ಯೇಕ ಅಪಘಾತ: ಬಸ್ ಗುದ್ದಿ ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯನಗರ ಹಾಗೂ ಹುಳಿಮಾವು ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಅಪಘಾತಗಳು ಸಂಭವಿಸಿದ್ದು, ಬಿಎಂಟಿಸಿ ಬಸ್ ಗುದ್ದಿ ಇಬ್ಬರು ಮೃತಪಟ್ಟಿದ್ದಾರೆ.

‘ಮಾಗಡಿಯ ಸುಪ್ರಿಯಾ ಗಾರ್ಮೆಂಟ್ಸ್ ಕಾರ್ಖಾನೆ ಮಾಲೀಕ ಕುಮಾರ್ (45) ಹಾಗೂ ಶಿವಮೊಗ್ಗ ಜಿಲ್ಲೆಯ ಸೊರಬದ ವೀಣಾ ಮೃತರು. ಎರಡೂ ಕಡೆಯೂ ಬಿಎಂಟಿಸಿ ಬಸ್ ಚಾಲಕರ ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಅಪಘಾತಗಳು ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಕುಮಾರ್

ಪತ್ನಿಯ ಸೀಮಂತಕ್ಕೆ ಸಿದ್ಧತೆ: ‘ಕುಮಾರ್ ಅವರ ಪತ್ನಿ ಗರ್ಭಿಣಿ. ಬೆಂಗಳೂರಿನ ಅನ್ನಪೂರ್ಣೇಶ್ವರಿ ನಗರದಲ್ಲಿ ಪತ್ನಿಯ ಸೀಮಂತ ಕಾರ್ಯ ಇಟ್ಟುಕೊಳ್ಳಲಾಗಿತ್ತು. ಇದಕ್ಕೆ ಅಗತ್ಯವಿದ್ದ ಹೂವು, ಹಣ್ಣು, ತರಕಾರಿ ಖರೀದಿಸಲೆಂದು ಕುಮಾರ್ ಭಾನುವಾರ ಬೆಳಿಗ್ಗೆ ವಿಜಯನಗರಕ್ಕೆ ಬಂದಿದ್ದರು. ಖರೀದಿ ಮುಗಿಸಿ, ದ್ವಿಚಕ್ರ ವಾಹನದಲ್ಲಿ ಮನೆಯತ್ತ ಹೊರಟಿದ್ದರು. ಗೋವಿಂದರಾಜನಗರದ ಬೈಟು ಕಾಫಿ ಹೋಟೆಲ್ ಬಳಿ ಹೋಗುತ್ತಿದ್ದಾಗ, ಇದೇ ಮಾರ್ಗವಾಗಿ ತೆರಳುತ್ತಿದ್ದ ಬಿಎಂಟಿಸಿ ಬಸ್ ಅವರ ವಾಹನಕ್ಕೆ ಡಿಕ್ಕಿ ಹೊಡೆದಿತ್ತು. ವಾಹನ ಸಮೇತ ರಸ್ತೆಯಲ್ಲಿ ಉರುಳಿ ಬಿದ್ದಿದ್ದ ಕುಮಾರ್ ತಲೆಗೆ ಪೆಟ್ಟಾಗಿತ್ತು. ತೀವ್ರ ಗಾಯಗೊಂಡು ಅವರು ಮೃತಪಟ್ಟರು’ ಎಂದು ವಿಜಯನಗರ ಸಂಚಾರ ಠಾಣೆ ಪೊಲೀಸರು ಹೇಳಿದರು.

ಗಾರ್ಮೆಂಟ್ಸ್ ಕಾರ್ಖಾನೆ ಉದ್ಯೋಗಿ: ‘ನಗರದ ಗಾರ್ಮೆಂಟ್ಸ್ ಕಾರ್ಖಾನೆಯೊಂದರಲ್ಲಿ ವೀಣಾ ಕೆಲಸ ಮಾಡುತ್ತಿದ್ದರು. ಅರಕೆರೆ ಸಮೀಪದ ಗಾರ್ಮೆಂಟ್ಸ್ ಬಳಿ ಶನಿವಾರ ಬೆಳಿಗ್ಗೆ ರಸ್ತೆ ದಾಟುತ್ತಿದ್ದ ವೇಳೆ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದಿತ್ತು’ ಎಂದು ಹುಳಿಮಾವು ಸಂಚಾರ ಠಾಣೆ ಪೊಲೀಸರು ಹೇಳಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿಕೆ

‘ನೋಂದಣಿ ಇಲಾಖೆ ಪುನರ್‌ರಚನೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಕಾಲೀನ ಸಂದರ್ಭಕ್ಕೆ ಪೂರಕವಾಗಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯನ್ನು ಪುನರ್‌ರಚಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಬೇಕು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನದಲ್ಲಿನ ಪ್ರಗತಿ ಕುರಿತು ಅಧಿಕಾರಿಗಳ ಜತೆ ಭಾನುವಾರ ಯವನಿಕಾ ಸಭಾಂಗಣದಲ್ಲಿ ಸಭೆ ನಡೆಸಿದ ಅವರು, ‘ಸುಗಮ ನೋಂದಣಿ ಪ್ರಕ್ರಿಯೆ, ತೆರಿಗೆ ಸೋರಿಕೆ ತಡೆ ಮತ್ತು ಜನಸ್ನೇಹಿ ಸೇವೆ ಒದಗಿಸುವ ನಿಟ್ಟಿನಲ್ಲಿ ಇಲಾಖೆಯನ್ನು ಪುನರ್ ರಚಿಸಬೇಕು. ತಂತ್ರಜ್ಞಾನವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳಲು ಅವಕಾಶ ಇರುವಂತೆ ಈ ಪ್ರಕ್ರಿಯೆ ನಡೆಯಬೇಕು’ ಎಂದರು.



ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಜಿಲ್ಲಾ ಉಪ ನೋಂದಣಾಧಿಕಾರಿಗಳಿಗೆ ಸ್ಮರಣಿಕೆ ವಿತರಿಸಿದರು. ನೋಂದಣಿ ಮತ್ತು ಮುದ್ರಾಂಕ ಇಲಾಖೆ ಮುಖ್ಯ ಆಯುಕ್ತೆ ಬಿ.ಆರ್‌.ಮಮತಾ, ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್‌.ಕೆ.ಅತೀಕ್, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ವಿ.ರಶ್ಮಿ ಮಹೇಶ್ ಇದ್ದರು –ಪ್ರಜಾವಾಣಿ ಚಿತ್ರ

ಕರ್ನಾಟಕದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ತಂತ್ರಜ್ಞಾನದ ಬಳಕೆಯಲ್ಲಿ ಮುಂಚೂಣಿಯಲ್ಲಿತ್ತು. ಕೆಲವು ವರ್ಷಗಳ ಕಾಲ ತಂತ್ರಜ್ಞಾನದ ಅಳವಡಿಕೆ ಮತ್ತು ಬಳಕೆಯಲ್ಲಿ ಹಿನ್ನಡೆ ಆಗಿತ್ತು. ಈಗ ಪುನಃ ತಂತ್ರಜ್ಞಾನದ ಬಳಕೆ ಹೆಚ್ಚಾಗಿದೆ. ಇನ್ನೂ ಹೊಸ ತಂತ್ರಜ್ಞಾನಗಳ ಅಳವಡಿಕೆ ಮತ್ತು ಬಳಕೆಗೆ ಮುಂದಾಗಬೇಕು ಎಂದು ಸೂಚಿಸಿದರು.

ಬಾಡಿಗೆ ಕರಾರುಗಳೂ ಸೇರಿದಂತೆ ನೋಂದಣಿಯೇತರ ಮುದ್ರಾಂಕ ಶುಲ್ಕ ದೊಡ್ಡ ಪ್ರಮಾಣದಲ್ಲಿ ಸೋರಿಕೆ ಆಗುತ್ತಿದೆ. ಅದನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳಬೇಕು. ನೋಂದಣಿಯೇತರ ಮುದ್ರಾಂಕ ಶುಲ್ಕ ಪಾವತಿಯ ಕುರಿತು ಜನರಲ್ಲಿ ಅರಿವು ಮೂಡಿಸುವ ಕೆಲಸವೂ ಆಗಬೇಕು. ಇಲಾಖೆಯಲ್ಲಿ ಪಾರದರ್ಶಕತೆ ತರುವುದಕ್ಕೆ ಹೆಚ್ಚು ಒತ್ತು ನೀಡಬೇಕು ಎಂದರು.

ಕಳೆದ ವರ್ಷದಲ್ಲಿ ₹17,850 ಕೋಟಿಯಷ್ಟು ನೋಂದಣಿ ಮತ್ತು ಮುದ್ರಾಂಕ ಶುಲ್ಕ ಸಂಗ್ರಹಕ್ಕೆ ಶ್ರಮಿಸಿರುವುದು, ಕಾವೇರಿ–2 ತಂತ್ರಾಂಶದ ಅಳವಡಿಕೆ ಮತ್ತು ಸುಗಮ ಕಾರ್ಯಾಚರಣೆ ಹಾಗೂ ವಿವಾದಕ್ಕೆ ಆಸ್ಪದವಿಲ್ಲದಂತೆ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಪರಿಷ್ಕರಣೆ ಪ್ರಕ್ರಿಯೆ ಪೂರ್ಣಗೊಳಿಸಿರುವುದಕ್ಕೆ ಇಲಾಖೆಯ ಅಧಿಕಾರಿಗಳನ್ನು ಸಭೆಯಲ್ಲಿ ಅಭಿನಂದಿಸಲಾಯಿತು.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಶ್ಮಿ ವಿ. ಮಹೇಶ್, ನೋಂದಣಿ ಮತ್ತು ಮುದ್ರಾಂಕ ಇಲಾಖೆ ಆಯುಕ್ತೆ ಬಿ.ಆರ್. ಮಮತಾ, ಹಿಂದಿನ ಆಯುಕ್ತರಾದ ಕೆ.ವಿ. ತ್ರಿಲೋಕಚಂದ್ರ, ಕೆ.ಪಿ. ಮೋಹನ್ ರಾಜ್ ಉಪಸ್ಥಿತರಿದ್ದರು.

₹80 ಸಾವಿರ ವೇತನ ಪಡೆಯುತ್ತಿದ್ದ ಮೆಕ್ಯಾನಿಕಲ್ ಎಂಜಿನಿಯರ್ ಬಂಧನ

ನೌಕರಿ ಆಸೆಗೆ ಬ್ಲೂಟೂತ್ ಅಡ್ಡದಾರಿ

ಪ್ರಜಾವಾಣಿ ವಾರ್ತೆ


ಆಕಾಶ ಮಂತಾಳೆ

ಕಲಬುರಗಿ: ಅಫಜಲಪುರದ ಮಹಾಂತೇಶ್ವರ ವಿದ್ಯಾವರ್ಧಕ ಸಂಘದ ಕಾಲೇಜಿನಲ್ಲಿ ಬ್ಲೂಟೂತ್ ಬಳಸಿ ಕೆಇಎ ಪರೀಕ್ಷೆ ಬರೆಯಲು ಮುಂದಾಗಿ ಬಂಧಿತರಾದವರ ಪೈಕಿ ಒಬ್ಬ ಕಂಪನಿಯೊಂದರಲ್ಲಿ ಮೆಕ್ಯಾನಿಕಲ್ ಎಂಜಿನಿಯರ್ ಆಗಿದ್ದು, ಮಾಸಿಕ ₹ 80 ಸಾವಿರ ವೇತನ ಪಡೆಯುತ್ತಿದ್ದ.

ಬೀದರ್ ಮೂಲದ ಆಕಾಶ ಮಂತಾಳೆ(30) ಬೆಂಗಳೂರಿನಲ್ಲಿ ಉದ್ಯೋಗಿ ಆಗಿದ್ದಾನೆ. ಸರ್ಕಾರಿ ನೌಕರಿ ಗಿಟ್ಟಿಸಿಕೊಳ್ಳಲು ಕೆಇಎ ನೇಮಕ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಲು ಯತ್ನಿಸಿದ್ದ. ಬ್ಲೂಟೂತ್ ಮೂಲಕ ಉತ್ತರ ಹೇಳಿಸಿಕೊಳ್ಳಲು ತನ್ನ ಮಾವ ವಿಜಯ ಕುಮಾರಬಿರಾದಾರನನ್ನು ಹುಮನಾಬಾದ್‌ನಿಂದ ಕರೆಯಿಸಿಕೊಂಡಿದ್ದ. ಈಗ ಇಬ್ಬರೂ ಪೊಲೀಸರ ವಿಚಾರಣೆ ಎದುರಿಸುತ್ತಿದ್ದಾರೆ.

ಸಂತೋಷ ಬಂಡೆಪ್ಪ ಯಾಳಗಿಗೆ (30) ಉತ್ತರ ಹೇಳಲು ಬಂದಿದ್ದ ಖಾಸಗಿ ಶಾಲೆಯ ಶಿಕ್ಷಕ ಬಾಪು ಗುತ್ತಪ್ಪ ಯಾಳಗಿ (42) ಬಂಧಿತರಾಗಿದ್ದಾರೆ. ಅಂಗಿ ಕಾಲರ್‌ನಲ್ಲಿ ಬ್ಲೂಟೂತ್ ಇರಿಸಿಕೊಂಡ ಆಕಾಶ ಮತ್ತು ಸಂತೋಷ ತಪಾಸಣೆಯಲ್ಲಿ ಸಿಕ್ಕಿ ಬಿದ್ದರೆ, ಭಯದಿಂದ ಓಡಿ ಹೋದ ಅಭ್ಯರ್ಥಿ ಬಾಬು ಚಾಂದಶೇಖ್‌ನನ್ನು ಪೊಲೀಸರು ಬೆನ್ನಟ್ಟಿ ಹಿಡಿದರು.


ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಭಾನುವಾರ ಆಯೋಜಿಸಿದ್ದ ನೇಮಕಾತಿ ಪರೀಕ್ಷೆಗೂ ಮುನ್ನ ಪೊಲೀಸರು ಕಲಬುರಗಿಯ ಶರಣಬಸವೇಶ್ವರ ವಿ.ವಿ.ಯ ಪರೀಕ್ಷಾ ಕೇಂದ್ರದಲ್ಲಿ ಅಭ್ಯರ್ಥಿಯ ತಪಾಸಣೆ ನಡೆಸಿದರು –ಪ್ರಜಾವಾಣಿ ಚಿತ್ರ

ಈ ಅಕ್ರಮದ ಸಂಬಂಧ 9 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ. ಆರ್.ಡಿ. ಪಾಟೀಲ ಮತ್ತು ಆಸಿಫ್ ಪರಾರಿಯಾಗಿದ್ದಾರೆ. 7 ಜನರ ವಿಚಾರಣೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಿಎಸ್‌ಐ ಹಗರಣದ ಮಾದರಿಯಲ್ಲಿ ಅಫಜಲಪುರದಲ್ಲಿ ಬ್ಲೂಟೂತ್ ಬಳಕೆ ಆಗಲಿದೆ ಎಂದು ಸ್ಥಳೀಯ ಬಾತ್ಮಿದಾರರು ಮಾಹಿತಿ ನೀಡಿದ್ದರು. ಪರೀಕ್ಷಾ ಕೇಂದ್ರದ ಸುತ್ತ ಪೊಲೀಸರು ಹದ್ದಿನ ಕಣ್ಣು ಇರಿಸಿದ್ದರು.

ಅಭ್ಯರ್ಥಿಗಳು ಮೊದಲ ಬಾರಿಗೆ ಇಂತಹ ಕೃತ್ಯಕ್ಕೆ ಕೈಹಾಕಿದ್ದರಿಂದ ಬ್ಲೂಟೂತ್ ಸಮೇತ ಪರೀಕ್ಷಾ ಕೇಂದ್ರದ ಒಳ ಹೋಗಲು ಆಗಲಿಲ್ಲ. ಪರೀಕ್ಷೆ ಆರಂಭದ ಕೆಲ ನಿಮಿಷಗಳು ಇರುವಂತೆ ಒಳಹೋದರೆ ಪೊಲೀಸರು ತಪಾಸಣೆ ಮಾಡದೆ ಒಳ ಬಿಡುತ್ತಾರೆ. ಮೆಟಲ್ ಡಿಟೆಕ್ಟರ್‌ನಿಂದ ತಪ್ಪಿಸಿಕೊಳ್ಳಬಹುದು ಎಂದುಕೊಂಡಿದ್ದರು. ಆದರೆ, ಪೊಲೀಸರು ಅಂತಹುದಕ್ಕೆ ಎಡೆಮಾಡಿಕೊಡದೆ ಎಚ್ಚೆತ್ತುಕೊಂಡು ಮೂವರ ಅಭ್ಯರ್ಥಿಗಳನ್ನು ಬಂಧಿಸಿದರು. ಬಳಿಕ ಉತ್ತರ ಹೇಳಲು ಬಂದಿದ್ದವರು ಹಾಗೂ ಅಕ್ರಮದ ಪ್ರಮುಖರ ಮಾಹಿತಿ ಕಲೆಹಾಕಿದರು ಎಂಬುದು ಗೊತ್ತಾಗಿದೆ.

ಹಗರಣದಲ್ಲಿ ಶಾಮೀಲಾಗಿರುವ ಆರ್.ಡಿ. ಪಾಟೀಲ, ಪರೀಕ್ಷೆಯ ಹಿಂದಿನ ದಿನವೇ ಜಿಲ್ಲೆಯನ್ನು ತೊರೆದು ನೆರೆಯ ಮಹಾರಾಷ್ಟ್ರಕ್ಕೆ ಪಲಾಯನ ಮಾಡಿರುವ ಸಾಧ್ಯತೆ ಇದೆ. ವಿಶೇಷ ತಂಡ ರಚಿಸಿ ಆತನ ಪತ್ತೆಗೆ ಶೋಧ ಕಾರ್ಯ ನಡೆಸಲಾಗುತ್ತಿದೆ. ಇನ್ನಷ್ಟು ಅಭ್ಯರ್ಥಿಗಳು ಭಾಗಿಯಾಗಿರುವ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಭಾನುವಾರ ನಡೆದ ಪರೀಕ್ಷೆಗೆ ಅಭ್ಯರ್ಥಿಗಳನ್ನು ಪೊಲೀಸರು ವಿವಿಧ ಹಂತಗಳಲ್ಲಿ ತಪಾಸಣೆ ಮಾಡಿ ಒಳಗೆ ಬಿಟ್ಟರು. ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು.

> **ಪರೀಕ್ಷೆ ಅಕ್ರಮ ತಡೆಗಟ್ಟಲು ಸಾಕಷ್ಟು ತಂತ್ರಜ್ಞಾನವಿದ್ದರೂ, ಅಕ್ರಮ ನಡೆದಿರುವುದು ಅನುಮಾನ ಮೂಡಿಸುತ್ತಿದೆ. ಕಾಂಗ್ರೆಸ್ ನಾಯಕ ಖರ್ಗೆ ಅವರ ಜಿಲ್ಲೆಯಲ್ಲಿಯೇ ಏಕೆ ಹಗರಣ ಆಗುತ್ತಿದೆ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

₹21 ಲಕ್ಷ ಪಡೆದಿದ್ದ ಆರ್‌.ಡಿ. ಪಾಟೀಲ

ಪ್ರಮುಖ ಆರೋಪಿ ಅಫಜಲಪುರದ ಆರ್.ಡಿ. ಪಾಟೀಲ ಬ್ಲೂಟೂತ್ ಪೂರೈಸಿ ಉತ್ತರ ಹೇಳಲು ಮೂವರು ಅಭ್ಯರ್ಥಿಗಳೊಂದಿಗೆ ₹ 53 ಲಕ್ಷಕ್ಕೆ ಒಪ್ಪಂದ ಮಾಡಿಕೊಂಡು, ₹21 ಲಕ್ಷ ಮುಂಗಡವಾಗಿ ಪಡೆದಿದ್ದ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಸಂತೋಷ ಯಾಳಗಿ ತನ್ನ ತಂದೆಯೊಂದಿಗೆ ಕಲಬುರಗಿ ನಗರದ ಮನೆಯಲ್ಲಿ ಆರ್.ಡಿ ಪಾಟೀಲನನ್ನು ಭೇಟಿಯಾಗಿ, ₹ 20 ಲಕ್ಷ ಒಪ್ಪಂದ ಮಾಡಿಕೊಂಡಿದ್ದ. ಮುಂಗಡವಾಗಿ ₹ 8 ಲಕ್ಷ ನೀಡಿದ್ದ. ಆ ಬಳಿಕ ಇತನ ಪರಿಚಯಸ್ಥರಾದ ಬಾಬು ಮತ್ತು ಆಕಾಶ್‌ನಿಂದ ಹಣ ಪಡೆದು, ಬ್ಲೂಟೂತ್ ಪೂರೈಸಿದ್ದ.

ಬಾಬು ಚಾಂದಶೇಖ್ ₹ 10 ಲಕ್ಷದ ಪೈಕಿ ₹ 5 ಲಕ್ಷ ಮುಂಗಡ ಕೊಟ್ಟಿದ್ದ. ಬೀದರ್‌ನಲ್ಲಿ ಆಕಾಶನನ್ನು ಭೇಟಿಯಾದ ಪಾಟೀಲ, ₹ 20 ಲಕ್ಷ ಒಪ್ಪಂದ ಮಾಡಿಕೊಂಡು ಮುಂಗಡವಾಗಿ ₹8 ಲಕ್ಷ ಪಡೆದಿದ್ದ ಎಂಬುದು ಗೊತ್ತಾಗಿದೆ.

ನ್ಯಾಯಾಲಯಕ್ಕೆ ಹಾಜರು

ಯಾದಗಿರಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ವಿವಿಧ ಮಂಡಳಿಗಳ ಹುದ್ದೆಗಳ ನೇಮಕಾತಿಗಾಗಿ ನಡೆಸಿದ ಪರೀಕ್ಷೆಯಲ್ಲಿ ಅಕ್ರಮವಾಗಿ ಬ್ಲೂಟೂತ್ ಬಳಕೆ ಮಾಡಿದ ಆರೋಪದ ಮೇರೆಗೆ ನಗರದ ವಿವಿಧ ಪರೀಕ್ಷಾ ಕೇಂದ್ರಗಳಿಂದ 9 ಆರೋಪಿಗಳನ್ನು ಬಂಧಿಸಿರುವ ಪೊಲೀಸರು ವೈದ್ಯಕೀಯ ತಪಾಸಣೆ, ಸ್ಥಳ ಮಹಜರು ಮಾಡಿ ಭಾನುವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ಮಾದಿಗರಿಗೆ ಸಿಗದ ಉನ್ನತ ಹುದ್ದೆ

ಗುರುಪೀಠದ ಮಾದಾರ ಚನ್ನಯ್ಯ ಸ್ವಾಮೀಜಿ ಬೇಸರ

ಪ್ರಜಾವಾಣಿ ವಾರ್ತೆ


ಮಾದಾರ ಚನ್ನಯ್ಯ ಸ್ವಾಮೀಜಿ

ಚಿತ್ರದುರ್ಗ: 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಸಮುದಾಯದ ಒಬ್ಬರಿಗೂ ಉನ್ನತ ಹುದ್ದೆ ನೀಡಿಲ್ಲ' ಎಂದು ಮಾದಾರ ಚನ್ನಯ್ಯ ಗುರು ಪೀಠದ ಬಸವ ಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಮಾದಿಗ ನೌಕರರ ಸಾಂಸ್ಕೃತಿಕ ಸಂಘದ ಜಿಲ್ಲಾ ಘಟಕದಿಂದ ಭಾನುವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ ಹಿಂದುಳಿದಿರುವ ಮಾದಿಗ ಸಮುದಾಯದ ಅಧಿಕಾರಿಗಳ ಸಂಖ್ಯೆಯೂ ಕಡಿಮೆಯಿದೆ. ಸಾಮಾಜಿಕ ನ್ಯಾಯದ ಮೇಲೆ ನಂಬಿಕೆ ಇರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮುದಾಯದ ಅಧಿಕಾರಿಗಳಿಗೆ ಆಗಿರುವ ಅನ್ಯಾಯ ಸರಿಪಡಿಸಬೇಕು' ಎಂದು ಒತ್ತಾಯಿಸಿದರು.

'ಸಮುದಾಯದ ಅಧಿಕಾರಿಗಳಿಗೆ ಉನ್ನತ ಹುದ್ದೆಗಳ ಕುರಿತು ಸಂಬಂಧಿಸಿದ ಸಚಿವರು ಗಮನ ಹರಿಸಬೇಕು' ಎಂದರು.

'ಪರಿಶಿಷ್ಟ ಜಾತಿಯ 101 ಜಾತಿಗಳಲ್ಲಿ ನಾವು ಹೆಚ್ಚಿನ ಸಂಖ್ಯೆಯಲ್ಲಿದ್ದೇವೆ. ಮೂರು ದಶಕಗಳಿಂದ ಒಳ ಮೀಸಲಾತಿ ಹೋರಾಟ ಮಾಡುತ್ತಿದ್ದೇವೆ. ನಮ್ಮ ಮಕ್ಕಳು ವಿಶೇಷ ಕಾಳಜಿವಹಿಸಿ ಶೈಕ್ಷಣಿಕವಾಗಿ ಪ್ರಗತಿ ಹೊಂದಬೇಕು. ಅಲ್ಲಿಯವರೆಗೂ ಬದಲಾವಣೆ ಸಾಧ್ಯವಿಲ್ಲ' ಎಂದು ಸ್ವಾಮೀಜಿ ಹೇಳಿದರು.

'ನಾನೂ ಮಾದಿಗ, ಮಾನವತಾವಾದಿ': ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, 'ನಾನು ಪಕ್ಕಾ ಮಾದಿಗ ಹಾಗೂ ಮಾನವತಾವಾದಿ. ನಾನು ಮಾದಿಗನಲ್ಲ ಎಂಬುದು ನಿರೂಪಿತವಾದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ' ಎಂದು ಹೇಳಿದರು.

'ತ್ರಿಶಂಕು ಸ್ಥಿತಿಯಲ್ಲಿ ಓಬಿಸಿ ಸಮುದಾಯ'

ಪ್ರಜಾವಾಣಿ ವಾರ್ತೆ

ಕೋಲಾರ: 'ದಲಿತರು ಪ್ರಜ್ಞಾವಂತರಾಗಿದ್ದು ಅವರಿಗೆ ಡಾ. ಬಿ.ಆರ್. ಅಂಬೇಡ್ಕರ್ ಅವರಂಥ ಐಕಾನ್ ಇದ್ದಾರೆ. ಹಿಂದುಳಿದ ವರ್ಗದವರಿಗೆ ಅಂಥ ಯಾವ ಐಕಾನ್ ಇಲ್ಲದೇ ತ್ರಿಶಂಕು ಸ್ಥಿತಿಗೆ ಸಿಲುಕಿದ್ದೇವೆ' ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ನಡೆದ ಹಿಂದುಳಿದ ಹಾಗೂ ಅತಿ ಹಿಂದುಳಿದ ವರ್ಗಗಳ ಮುಖಂಡರ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

'ನನಗೆ ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ರೀತಿಯಲ್ಲಿ ಅನ್ಯಾಯ ಆಗಿಲ್ಲ. ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸದಸ್ಯ ಸ್ಥಾನಕ್ಕಿಂತ ದೊಡ್ಡ ಹುದ್ದೆ ಬೇಕೇ' ಎಂದು ಅವರು ಪ್ರಶ್ನಿಸಿದರು.

'ಇದು ಪಕ್ಷ ವಿರೋಧಿ ಸಭೆಯಲ್ಲ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ (ಸಿಡಬ್ಲ್ಯುಸಿ) ತೀರ್ಮಾನದಂತೆಯೇ ಈ ಸಭೆ ಮಾಡುತ್ತಿದ್ದೇವೆ. ಹಿಂದುಳಿದ ಹಾಗೂ ಅತಿ ಹಿಂದುಳಿದ ವರ್ಗಗಳ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತರುವುದು ತಪ್ಪೇ? ನಾವು ಆಯೋಜಿಸುತ್ತಿರುವುದು ಪ್ರತ್ಯೇಕ ಸಭೆಯಲ್ಲ. ಪಕ್ಷಾತೀತವಾಗಿ ಕರೆದಿರುವ ಸಭೆ. ಜನಜಾಗೃತಿಗಾಗಿ ಈ ಸಭೆ ನಡೆಸುತ್ತಿದ್ದೇವೆ' ಎಂದು ಸ್ಪಷ್ಟಪಡಿಸಿದರು.

'ಕೆಲ ಸರ್ಕಾರಗಳ ಅವಧಿಯಲ್ಲಿ ದೊಡ್ಡ ಜಾತಿಗಳಿಗೆ ಸಾವಿರಾರು ಕೋಟಿ ಅನುದಾನ ಸಿಕ್ಕಿದೆ. ಬಡವರಿಗೆ ಒಂದೆರಡು ಕೋಟಿ ಅನುದಾನ ನೀಡಲಾಗುತ್ತಿದೆ. ಏಕೆ ಎಂದು ಪ್ರಶ್ನಿಸಲು ಹಿಂದುಳಿದ ವರ್ಗದವರು (ಓಬಿಸಿ) ಸಂಘಟಿತರಾಗಿಲ್ಲ' ಎಂದರು.

'ಶೇ 50ರಷ್ಟು ಇರುವ ತಳ ಸಮುದಾಯ ಶೇ 64ರಷ್ಟು ಜಿಎಸ್‌ಟಿ ಪಾವತಿ ಮಾಡುತ್ತಿದೆ. ಶೇ 12ರಷ್ಟು ಇರುವ ಮೇಲ್ವರ್ಗ ಶೇ 4ರಷ್ಟು ಜಿಎಸ್‌ಟಿ ಪಾವತಿಸುತ್ತಿದೆ. ದುಡಿದು ಖಜಾನೆ ತುಂಬಿಸುವ ಶ್ರಮಜೀವಿಗಳ ಸಮುದಾಯಕ್ಕೆ ಜಿಎಸ್‌ಟಿ ಹಣ ಸರಿಯಾದ ರೀತಿಯಲ್ಲಿ ಹಂಚಿಕೆ ಆಗಬೇಕು. ಸಾಮಾಜಿಕ ನ್ಯಾಯ ಸಿಗಬೇಕು. ಸಂವಿಧಾನದ ಚೌಕಟ್ಟಿನಲ್ಲಿ ಸಮಾನ ಅವಕಾಶ ಸಿಗಬೇಕು' ಎಂದು ಹರಿಪ್ರಸಾದ್ ಪ್ರತಿಪಾದಿಸಿದರು.

ಕೇರಳ ಬಾಂಬ್ ಸ್ಫೋಟ: ಎರಡು ಸಾವು

ಒಂದನೇ ಪುಟದಿಂದ...

ಶಾಂತಿ ಕಾಪಾಡಬೇಕು ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಚೋದನಕಾರಿ ಅಥವಾ ದ್ವೇಷದ ಸಂದೇಶಗಳನ್ನು ಹರಡಬಾರದು ಎಂದು ಡಿಜಿಪಿ ಮನವಿ ಮಾಡಿದ್ದಾರೆ. ರಾಜ್ಯದಾದ್ಯಂತ ಪೊಲೀಸರು ಕಟ್ಟೆಚ್ಚರ ವಹಿಸಿದ್ದಾರೆ.

ಸ್ಫೋಟಕಗಳನ್ನು ಪ್ಯಾಕ್ ಮಾಡಲು ಟಿಫಿನ್ ಬಾಕ್ಸ್ ಬಳಸಲಾಗಿದೆಯೇ ಎಂಬ ಪ್ರಶ್ನೆಗೆ, ಸ್ಫೋಟದ ಸ್ಥಳವನ್ನು ರಾಜ್ಯ ಭಯೋತ್ಪಾದನಾ ನಿಗ್ರಹ ದಳ ಮತ್ತು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಪರಿಶೀಲಿಸುತ್ತಿರುವುದರಿಂದ ಈ ಹಂತದಲ್ಲಿ ಅದನ್ನು ದೃಢೀಕರಿಸಲು ಸಾಧ್ಯವಿಲ್ಲ ಎಂದು ಮೂಲಗಳು ತಿಳಿಸಿವೆ.

ಅಗ್ನಿಶಾಮಕ ದಳ ಮತ್ತು ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಬೆಂಕಿ ನಂದಿಸಲು ಪ್ರಯತ್ನಿಸಿದರು. ಸ್ಫೋಟದ ಶಬ್ದ ಕೇಳುತ್ತಿದ್ದಂತೆ ಸಭಾಂಗಣದಲ್ಲಿದ್ದ ಮಕ್ಕಳು, ಮಹಿಳೆಯರು ಭಯಭೀತರಾಗಿ ಕಿರುಚಿದರು. ಕುರ್ಚಿಗಳು ಚೆಲ್ಲಾಪಿಲ್ಲಿಯಾಗಿದ್ದವು. ಹಲವು ಕುರ್ಚಿಗಳು ಬೆಂಕಿಗೆ ಆಹುತಿಯಾಗಿವೆ. ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲು ಪೊಲೀಸರು ನೆರವಾದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರೊಂದಿಗೆ ಮಾತನಾಡಿ, ಸ್ಫೋಟದ ನಂತರದ ಪರಿಸ್ಥಿತಿಯ ಬಗ್ಗೆ ಮಾಹಿತಿ ಪಡೆದರು ಎಂದು ಮೂಲಗಳು ತಿಳಿಸಿವೆ. ಗೃಹ ಸಚಿವರ ನಿರ್ದೇಶನದ ಮೇರೆಗೆ ರಾಜ್ಯ ಸರ್ಕಾರಕ್ಕೆ ನೆರವಾಗಲು ರಾಷ್ಟ್ರೀಯ ಭದ್ರತಾ ಪಡೆ (ಎನ್‌ಎಸ್‌ಜಿ) ಮತ್ತು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತಂಡಗಳನ್ನು ಕೇರಳಕ್ಕೆ ಕಳುಹಿಸಲಾಗಿದೆ.

ಈ ಘಟನೆ ದುರದೃಷ್ಟಕರ, ಪೊಲೀಸರು ಇದನ್ನು ಗಂಭೀರವಾಗಿ ಪರಿಗಣಿಸಿದ್ದಾರೆ ಎಂದು ಪಿಣರಾಯಿ ವಿಜಯನ್ ಹೇಳಿದ್ದಾರೆ. ಸ್ಫೋಟದ ಹಿನ್ನೆಲೆಯಲ್ಲಿ ವಿಜಯನ್ ಅವರು ಸೋಮವಾರ ಬೆಳಿಗ್ಗೆ 10 ಗಂಟೆಗೆ ಸರ್ವಪಕ್ಷ ಸಭೆ ಕರೆದಿದ್ದಾರೆ.

'ಪ್ರಾರ್ಥನೆ ಮುಗಿದ ಕೆಲವೇ ಸೆಕೆಂಡುಗಳಲ್ಲಿ ಸ್ಫೋಟ ಸಂಭವಿಸಿದೆ. ಮೊದಲ ಸ್ಫೋಟವು ಸಭಾಂಗಣದ ಮಧ್ಯದಲ್ಲಿ ಆಗಿದೆ. ಸೆಕೆಂಡುಗಳ ನಂತರ, ಸಭಾಂಗಣದ ಎರಡೂ ಬದಿಗಳಲ್ಲಿ ಏಕಕಾಲದಲ್ಲಿ ಇನ್ನೂ ಎರಡು ಸ್ಫೋಟಗಳು ನಡೆದವು' ಎಂದು ಯಹೋವನ ಸಾಕ್ಷಿಗಳ ಪ್ರಾದೇಶಿಕ ವಕ್ತಾರ ಟಿ.ಎ. ಶ್ರೀಕುಮಾರ್ ಮಾಧ್ಯಮವೊಂದಕ್ಕೆ ತಿಳಿಸಿದ್ದಾರೆ.

ಯಹೋವನ ಸಾಕ್ಷಿಗಳು 1870ರ ಸುಮಾರಿಗೆ ಅಮೆರಿಕದಲ್ಲಿ ಸ್ಥಾಪಿತವಾದ ಅಂತರರಾಷ್ಟ್ರೀಯ ಕ್ರೈಸ್ತ ಪಂಥವಾಗಿದೆ. ಭಾರತದಲ್ಲಿ ಸುಮಾರು 60,000 ಅನುಯಾಯಿಗಳನ್ನು ಹೊಂದಿದೆ ಎನ್ನಲಾಗಿದೆ.

ಕಣ್ಮುಂದೆ ಬೆಂಕಿ ಉಂಡೆ...

'ಮೊದಲ ಸ್ಫೋಟದ ಶಬ್ದ ಕೇಳಿದ ನಂತರ ಕಣ್ಣು ತೆರೆದಾಗ, ನನ್ನ ಮುಂದೆ ಕಂಡಿದ್ದು ಬೆಂಕಿ ಉಂಡೆ ಮಾತ್ರ. ಎಲ್ಲರೂ ಚದುರಿ, ಓಡಿ ಹೋದರು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು, ಹಿರಿಯ ನಾಗರಿಕರು ಇದ್ದರು' ಎಂದು ವೃದ್ಧೆಯೊಬ್ಬರು ಘಟನೆಯನ್ನು ವಿವರಿಸಿದರು.

'ನಾನು ಸಭಾಂಗಣದ ಬದಿಯಲ್ಲಿ ನಿಂತು ಕಣ್ಣುಮುಚ್ಚಿ ಪ್ರಾರ್ಥಿಸುತ್ತಿದ್ದೆ. ಇದ್ದಕ್ಕಿದ್ದಂತೆ ಸ್ಫೋಟದ ಶಬ್ದ ಕೇಳಿಸಿತು. ಸುತ್ತಲೂ ಬೆಂಕಿ ಮಾತ್ರ ನೋಡಿದೆ. ಇತರರೊಂದಿಗೆ ಬಾಗಿಲ ಬಳಿ ಓಡಿದೆ. ಇಷ್ಟು ವರ್ಷಗಳಲ್ಲಿ ಈ ರೀತಿಯ ಘಟನೆ ನಡೆದಿರಲಿಲ್ಲ' ಎಂದು 70 ವರ್ಷದ ವ್ಯಕ್ತಿ ಕಣ್ಣೀರು ಒರೆಸುತ್ತಾ ಹೇಳಿದರು.

ಪೊಲೀಸರಿಗೆ ಶರಣು

ಕೊಚ್ಚಿ (ಪಿಟಿಐ): ಪ್ರಾರ್ಥನಾ ಸಭೆಯಲ್ಲಿ ನಡೆದ ಸರಣಿ ಸ್ಫೋಟಗಳ ಹೊಣೆ ಹೊತ್ತಿರುವುದಾಗಿ ಹೇಳಿಕೊಂಡ ವ್ಯಕ್ತಿಯೊಬ್ಬ ಸಾಮಾಜಿಕ ಜಾಲತಾಣಗಳ ಮೂಲಕ ವಿಡಿಯೊ ಸಂದೇಶ ರವಾನಿಸಿದ್ದಾನೆ. ಈತ ತನ್ನನ್ನು ಯೆಹೋವನ ಸಾಕ್ಷಿಗಳ ಪಂಥದ ಸದಸ್ಯನೆಂದು ತಿಳಿಸಿದ್ದಾನೆ.

ಸುದ್ದಿವಾಹಿನಿಗಳಲ್ಲಿ ಪ್ರಸಾರವಾದ ವಿಡಿಯೊದಲ್ಲಿ ಈತ ತನ್ನನ್ನು ಮಾರ್ಟಿನ್ ಎಂದು ಹೇಳಿಕೊಂಡಿದ್ದು, 'ಸಂಘಟನೆಯ ಬೋಧನೆಗಳು ದೇಶದ್ರೋಹ ಆಗಿರುವ ಕಾರಣ ಈ ನಿರ್ಧಾರ ತೆಗೆದುಕೊಂಡಿದ್ದೇನೆ' ಎಂದಿದ್ದಾನೆ.

'16 ವರ್ಷಗಳಿಂದ ಯೆಹೋವನ ಸಾಕ್ಷಿಗಳ ಪಂಥದ ಭಾಗವಾಗಿದ್ದೇನೆ. ಅವರ ಬೋಧನೆಗಳನ್ನು ಸರಿಪಡಿಸುವಂತೆ ಹಲವಾರು ಬಾರಿ ಹೇಳಿದ್ದೆ. ಅವರು ಸರಿಪಡಿಸಿಕೊಳ್ಳಲಿಲ್ಲ. ಸಂಘಟನೆ ಮತ್ತು ಅದರ ಸಿದ್ಧಾಂತವು ದೇಶಕ್ಕೆ ಅಪಾಯಕಾರಿಯಾಗಿದೆ. ಆದ್ದರಿಂದ ಅದನ್ನು ರಾಜ್ಯದಲ್ಲಿ ಕೊನೆಗೊಳಿಸಬೇಕಾಗಿದೆ' ಎಂದು ಆತ ಹೇಳಿದ್ದಾನೆ.

ಆತನ ಆರೋಪಗಳಿಗೆ ಸಂಘಟನೆಯ ಯಾರೂ ಪ್ರತಿಕ್ರಿಯಿಸಿಲ್ಲ. ಮಾರ್ಟಿನ್ ವಿಚಾರಣೆ ನಡೆಸಲಾಗುತ್ತಿದೆ. ತನ್ನ ಹೇಳಿಕೆ ಬೆಂಬಲಿಸುವ ಪುರಾವೆಗಳು ಮತ್ತು ನೀಡಿರುವ ಕಾರಣಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

'ಯಹೋವನ ಸಾಕ್ಷಿಗಳ ಸಿದ್ಧಾಂತವು ಯಾರಿಗೂ ಸಹಾಯ ಮಾಡುತ್ತಿಲ್ಲ. ನಿಮ್ಮನ್ನು ಬಿಟ್ಟು ಎಲ್ಲರೂ ನಾಶವಾಗಲಿ ಎಂಬುದು ನಿಮ್ಮ ಸಿದ್ಧಾಂತ' ಎಂದು ಕೂಡ ಆತ ವಿಡಿಯೊದಲ್ಲಿ ಹೇಳಿದ್ದಾನೆ.

'ಬಸವೇಶ್ವರ ಜಿಲ್ಲೆ ನಾಮಕರಣ ಆಗಲಿ'

ಬಸವಕಲ್ಯಾಣ: 'ಬಸವಣ್ಣನವರ ಜನ್ಮಭೂಮಿ ಆಗಿರುವ ವಿಜಯಪುರ ಜಿಲ್ಲೆಗೆ ಬಸವೇಶ್ವರ ಜಿಲ್ಲೆ ಎಂದು ನಾಮಕರಣ ಮಾಡಬೇಕು' ಎಂದು ಕೂಡಲ ಸಂಗಮ ಬಸವಧರ್ಮ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಆಗ್ರಹಿಸಿದ್ದಾರೆ.

ನಗರದಲ್ಲಿ ಭಾನುವಾರ ನಡೆದ 22ನೇ ಕಲ್ಯಾಣ ಪರ್ವದ ಎರಡನೇ ದಿನದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಬೆಂಗಳೂರಿನಲ್ಲಿನ ನಮ್ಮ ಮೆಟ್ರೊಗೆ ಕೂಡ ಬಸವೇಶ್ವರ ಮೆಟ್ರೊ ಎಂದು ಹೆಸರಿಸಬೇಕು. ಬಸವಣ್ಣನವರು ಕಾಯಕ, ದಾಸೋಹ ತತ್ವ ನೀಡಿ ಸರ್ವ ಸಮಾನತೆಗಾಗಿ ಕ್ರಾಂತಿಗೈದರು. ಆದ್ದರಿಂದ ನಾಡಿನಲ್ಲಿ ಸುಖ ಶಾಂತಿ ನೆಲೆಸಿ ಸಮೃದ್ಧಿ ಕಾಣಬೇಕಾದರೆ ಅವರ ತತ್ವದ ಆಚರಣೆ ಅಗತ್ಯ. ಈ ಕಾರಣ ಅವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಸರ್ಕಾರ ಘೋಷಿಸಬೇಕು' ಎಂದು ಸಹ ಕೇಳಿಕೊಂಡಿದ್ದಾರೆ.

ಎಂಇಎಸ್ ಮುಖಂಡರಿಂದ ಬೆಳಗಾವಿಯಲ್ಲಿ ಸಿದ್ಧತೆ

ಕರಾಳ ದಿನಾಚರಣೆಗೆ ಮಹಾರಾಷ್ಟ್ರ ಸರ್ಕಾರದಿಂದ ಪ್ರತಿನಿಧಿ: ಶಿಂದೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರದಲ್ಲಿ ನವೆಂಬರ್ 1ರಂದು ಕರ್ನಾಟಕ ರಾಜ್ಯೋತ್ಸವಕ್ಕೆ ವಿರುದ್ಧವಾಗಿ, ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಆಯೋಜಿಸಿರುವ 'ಕರಾಳ ದಿನಾಚರಣೆ'ಗೆ ಮಹಾರಾಷ್ಟ್ರ ಸರ್ಕಾರದ ಪ್ರತಿನಿಧಿಯನ್ನು ಕಳುಹಿಸುವುದಾಗಿ ಅಲ್ಲಿನ ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದ್ದಾರೆ.

ಕೊಲ್ಹಾಪುರದಲ್ಲಿ ಶನಿವಾರ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಕರಾಳ ದಿನಾಚರಣೆ ಮರಾಠಿಗರ ಅಸ್ತಿತ್ವದ ಪ್ರಶ್ನೆ. ಎಂಇಎಸ್ ಮುಖಂಡರು ಈಗಾಗಲೇ ಆಹ್ವಾನ ನೀಡಿದ್ದಾರೆ. ಅವರ ಬೇಡಿಕೆಗೆ ಸ್ಪಂದಿಸಲಾಗುವುದು' ಎಂದಿದ್ದಾರೆ.

ಈಚೆಗೆ ಬೆಳಗಾವಿಯಲ್ಲಿ ಕನ್ನಡ ಸಂಘಟನೆಗಳ ಸಭೆ ನಡೆಸಿದ ಜಿಲ್ಲಾಧಿಕಾರಿ ನಿತೇಶ್ ಪಾಟೀಲ, 'ಯಾವುದೇ ಕಾರಣಕ್ಕೂ ಕರಾಳ ದಿನಾಚರಣೆಗೆ ಅನುಮತಿ ನೀಡುವುದಿಲ್ಲ. ಕಾನೂನು ಉಲ್ಲಂಘಿಸಿದರೆ ದಿಟ್ಟ ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ಆದರೆ, ಎಂಇಎಸ್ ಮುಖಂಡರು ಕರಾಳ ದಿನಾಚರಣೆಗೆ ಸಿದ್ಧತೆ ನಡೆಸಿದ್ದಾರೆ. ಮರಾಠಿ ಭಾಷಿಗರ ಪ್ರದೇಶಗಳಲ್ಲಿ ಪ್ರತಿದಿನ ಗೋಪ್ಯ ಸಭೆಗಳನ್ನು ಮಾಡಿ, ಹೆಚ್ಚಿನ ಜನರನ್ನು ಸೇರಿಸುವ ಯತ್ನ ನಡೆಸಿದ್ದಾರೆ. ಮೆರವಣಿಗೆಗೆ ಅನುಮತಿ ಕೋರಿ ನಗರ ಪೊಲೀಸ್ ಆಯುಕ್ತರಿಗೂ ಮನವಿ ನೀಡಿದ್ದಾರೆ.

'ಏಕನಾಥ ಶಿಂದೆ ಅವರ ಹೇಳಿಕೆ ಕನ್ನಡಿಗರ ವಿರುದ್ಧ ದಂಗೆ ಹಾಗೂ ಹಿಂಸಾತ್ಮಕ ಚಟುವಟಿಕೆಗಳಿಗೆ ಪ್ರಚೋದನೆ ನೀಡುವಂತಿದೆ. ಇದಕ್ಕೆ ನಮ್ಮ ಯಾವೊಬ್ಬ ಜನಪ್ರತಿನಿಧಿಯೂ ಚಕಾರವೆತ್ತಿಲ್ಲ. ಈ ಪ್ರವೃತ್ತಿ ಸರಿಯಲ್ಲ. ಮಹಾರಾಷ್ಟ್ರದ ನಾಯಕರು ನಗರ ಪ್ರವೇಶ ಮಾಡದಂತೆ ಎಚ್ಚರಿಕೆ ವಹಿಸಬೇಕು' ಎಂದು ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ ಆಗ್ರಹಿಸಿದ್ದಾರೆ.

ಯಹೂದಿಗಳು ಗುರಿ ಎಂಬುದು ಸುಳ್ಳುಸುದ್ದಿ

ಪಿವಿ ಫ್ಯಾಕ್ಟ್ ಚೆಕ್

ಕಲಮಶೇರಿಯ ಚರ್ಚ್‌ವೊಂದರಲ್ಲಿ ಸಂಭವಿಸಿದ ಸ್ಫೋಟಕ್ಕೆ ಸಂಬಂಧಿಸಿ ಸುಳ್ಳು ಸುದ್ದಿಯೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಯಹೂದಿಗಳನ್ನು ಗುರಿಯಾಗಿಸಿ ಈ ಸ್ಫೋಟ ನಡೆದಿದೆ ಎಂದು ಹಲವರು ಪೋಸ್ಟ್‌ಗಳನ್ನು ಹಂಚಿಕೊಳ್ಳುತ್ತಿದ್ದಾರೆ.

ಕೇರಳದಲ್ಲಿ ಪ್ಯಾಲೆಸ್ಟೀನ್ ಪರವಾದ ರ್‍ಯಾಲಿಯೊಂದು ಇದೇ 28ರಂದು ನಡೆದಿತ್ತು. ಈ ವೇಳೆ ಹಮಾಸ್‌ನ ನಾಯಕ ಖಾಲಿದ್ ಮಶಾಲ್ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಭಾಷಣ ಮಾಡಿದ್ದರು. ಖಾಲಿದ್ ಭಾಷಣವನ್ನು ಉಲ್ಲೇಖಿಸಿ, 'ಜಿಹಾದಿಗಳು ಭಾರತದ ಬೀದಿಗಿಳಿಯಲು ಸಿದ್ಧರಾಗಬೇಕು ಎಂದು ಖಾಲಿದ್ ಅವರು ತಮ್ಮ ಭಾಷಣದಲ್ಲಿ ಹೇಳಿದ್ದರು. ಆದ್ದರಿಂದಲೇ ಈ ಸ್ಫೋಟ ನಡೆದಿದೆ' ಎನ್ನುವಂಥ ಪೋಸ್ಟ್‌ಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಸ್ಫೋಟದ ಹೊಣೆಯನ್ನು ಡಾಮಿನಿಕ್ ಮಾರ್ಟಿನ್ ಹೊತ್ತುಕೊಂಡಿದ್ದಾರೆ. 'ಯೆಹೋವನ ಸಾಕ್ಷಿಗಳು ಪಂಥದ ಬೋಧನೆಗಳು ಪ್ರಚೋದನಕಾರಿಯಾಗಿವೆ. ಆದ್ದರಿಂದ ಸ್ಫೋಟ ಮಾಡಿದ್ದೇನೆ' ಎಂದು ಡಾಮಿನಿಕ್ ಅವರು ತಪ್ಪೊಪ್ಪಿಕೊಂಡಿದ್ದಾರೆ. ಜೊತೆಗೆ, 2021ರ ಪ್ಯೂ ರೀಸರ್ಚ್ ಸೆಂಟರ್‌ನ ಪ್ರಕಾರ ಭಾರತದಲ್ಲಿ 3 ಸಾವಿರದಿಂದ 4 ಸಾವಿರ ಯಹೂದಿಗಳು ಇದ್ದಾರೆ. ಕೇರಳದಲ್ಲಿ 15–20 ಜನರ ಇದ್ದಾರೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿದೆ.

'ಕಲಮಶೇರಿಯಲ್ಲಿ ಒಬ್ಬ ಯಹೂದಿಯೂ ವಾಸವಿಲ್ಲ. ಎರ್ನಾಕುಲಂ ನಗರ ಹಾಗೂ ಕೊಚ್ಚಿಯಲ್ಲಿ ಮಾತ್ರವೇ ಯಹೂದಿಗಳು ವಾಸವಿದ್ದಾರೆ' ಎಂದು ಎರ್ನಾಕುಲಂನಲ್ಲಿರುವ ಯಹೂದಿ ಸಮುದಾಯದ ಮಂಜೂಷಾ ಇಮ್ಯಾನುಯಲ್ ಅವರು ಹೇಳಿದ್ದಾರೆ. ಆದ್ದರಿಂದ, ಈ ಸ್ಫೋಟವು ಯಹೂದಿಗಳನ್ನು ಗುರಿಯಾಗಿಸಿ ನಡೆದಿಲ್ಲ ಎಂದು ದಿ ಕ್ವಿಂಟ್ ಹೇಳಿದೆ.

ಧರ್ಮಸಂರಕ್ಷಣ ರಥಯಾತ್ರೆ: ಧರ್ಮಸ್ಥಳದ ಭಕ್ತರು, ಅಭಿಮಾನಿಗಳಿಂದ ಪಾದಯಾತ್ರೆ

ಯಾವ ತನಿಖೆಗೂ ಸಿದ್ಧ: ವೀರೇಂದ್ರ ಹೆಗ್ಗಡೆ

ಪ್ರಜಾವಾಣಿ ವಾರ್ತೆ

ಉಜಿರೆ: 'ಧರ್ಮಸ್ಥಳದ ಬಗ್ಗೆ ವದಂತಿಯನ್ನು ಹಬ್ಬಿ ಅಪಪ್ರಚಾರ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಯಾವ ಬಗೆಯ ತನಿಖೆಗೂ ಸಿದ್ಧ' ಎಂದು ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಹೇಳಿದರು.

ಎರಡು ಧರ್ಮ ಸಂರಕ್ಷಣ ರಥಗಳು ಭಾನುವಾರ ಧರ್ಮಸ್ಥಳಕ್ಕೆ ಮೆರವಣಿಗೆಯಲ್ಲಿ ಬಂದಾಗ ದೇವಸ್ಥಾನದ ಎದುರು ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, 'ಮಂಜುನಾಥ ಸ್ವಾಮಿ ವಿಷವನ್ನು ಕಂಠದಲ್ಲಿ ಇರಿಸಿಕೊಂಡು ಲೋಕಕಲ್ಯಾಣ ಮಾಡುವ ದೇವರು. ಇಂಥ ಮಂಜುನಾಥನ ಧರ್ಮಸ್ಥಳದ ಅಭಿಮಾನಿ ಭಕ್ತರು ಸ್ವಯಂಪ್ರೇರಿತರಾಗಿ ಫಲಾಪೇಕ್ಷೆ ಇಲ್ಲದೆ ಕ್ಷೇತ್ರದ ರಕ್ಷಣೆಗಾಗಿ ಮಾಡಿರುವ ಸೇವೆ ಶ್ಲಾಘನೀಯ' ಎಂದರು.

ಕುಂದಾಪುರದಿಂದ ಹೊರಟ ಮೆರವಣಿಗೆ ಭಾನುವಾರ ಬೆಳಿಗ್ಗೆ ಮಂಗಳೂರಿನ ಕದ್ರಿ ಮಂಜುನಾಥೇಶ್ವರ ದೇವಸ್ಥಾನದಿಂದ ಮುಂದುವರಿಯಿತು. ಉಜಿರೆಯಿಂದ ಸಾವಿರಾರು ಭಕ್ತರು


ಪಾದಯಾತ್ರೆಯಲ್ಲಿ ಬಂದ ಭಕ್ತರು ಹಾಗೂ ಧರ್ಮಸ್ಥಳದ ಅಭಿಮಾನಿಗಳು

ಮತ್ತು ಧರ್ಮಸ್ಥಳದ ಅಭಿಮಾನಿಗಳು ಪಾದಯಾತ್ರೆಯಲ್ಲಿ ಬಂದರು. ಅವರನ್ನು ಉದ್ದೇಶಿಸಿ ವೀರೇಂದ್ರ ಹೆಗ್ಗಡೆ ಅವರು ಮಾತನಾಡಿದರು.

'ದೇಶ ಹಾಳು ಮಾಡಲು ಅಲ್ಲಿನ ಧರ್ಮ, ಸಂಸ್ಕೃತಿಗೆ ಹಾನಿ ಮಾಡುತ್ತಾರೆ. ಧರ್ಮಸ್ಥಳದ ಬಗ್ಗೆಯೂ ಇಂಥ ಪಿತೂರಿ ನಡೆದಿದೆ. ನನ್ನ ಮನ, ವಚನ, ಕಾಯ ಪವಿತ್ರವಾಗಿದೆ. ಶ್ರೀ ಮಂಜುನಾಥ ಸ್ವಾಮಿ, ಅಣ್ಣಪ್ಪ ಸ್ವಾಮಿ ಹಾಗೂ ಧರ್ಮದೇವತೆಯ ಅಭಯ, ಅನುಗ್ರಹ ನನ್ನ ಕಾರ್ಯಗಳಿಗೆ ಇದೆ' ಎಂದರು.

ಸಮಾರಂಭದಲ್ಲಿ ಪಾಲ್ಗೊಂಡಿದ್ದ ಮಠಾಧಿಪತಿಗಳು ಹಣ್ಣು, ತಾಂಬೂಲ, ಕಾಯಿ, ವೀಳ್ಯದೆಲೆ ಇರುವ ಹರಿವಾಣಕ್ಕೆ ಮಂತ್ರಾಕ್ಷತೆ ಹಾಕಿದರು. ಅದನ್ನು ವೇದಿಕೆಯ ಮಧ್ಯದಲ್ಲಿ ಕುಳಿತಿದ್ದ ಹೆಗ್ಗಡೆಯವರಿಗೆ ಹಸ್ತಾಂತರಿಸಲಾಯಿತು. 'ಧರ್ಮ ಹಾಗೂ ಧರ್ಮಸ್ಥಳದ ರಕ್ಷಣೆಗೆ ಸದಾ ನಿಮ್ಮೊಂದಿಗಿದ್ದೇವೆ' ಎಂದು ಎಲ್ಲರೂ ಸಂಕಲ್ಪ ಮಾಡಿದರು.

ಸುಬ್ರಹ್ಮಣ್ಯ ಮಠದ ವಿದ್ಯಾಪ್ರಸನ್ನ ಸ್ವಾಮೀಜಿ, ಉಡುಪಿ ಕಾಣಿಯೂರು ಮಠದ ವಿದ್ಯಾವಲ್ಲಭತೀರ್ಥ ಸ್ವಾಮೀಜಿ, ಗುರುಪುರ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ, ಕರಿಂಜೆಯ ಮುಕ್ತಾನಂದ ಸ್ವಾಮೀಜಿ, ಫಲಿಮಾರು ಮಠದ ವಿದ್ಯಾಧೀಶ ಸ್ವಾಮೀಜಿ, ಸಂಸದ ನಳಿನ್ ಕುಮಾರ್ ಕಟೀಲ್ ಮತ್ತು ಶಾಸಕ ಹರೀಶ್‌ಪೂಂಜ ಇದ್ದರು.

ಕೊಲ್ಲೂರು ಮತ್ತು ಮಂಗಳೂರಿನ ಕದ್ರಿ ದೇವಸ್ಥಾನದಿಂದ ಹೊರಟ ಧರ್ಮಸಂರಕ್ಷಣ ರಥ ಉಜಿರೆಯ ಶ್ರೀ ಜನಾರ್ದನಸ್ವಾಮಿ ದೇವಸ್ಥಾನಕ್ಕೆ ತಲುಪಿದಾಗ ದೇವಸ್ಥಾನದ ಆಡಳಿತ ಮೊಕ್ತೇಸರ ಶರತ್ ಕೃಷ್ಣ ಪಡ್ವೆಟ್ನಾಯ, ಶಾಸಕ ಹರೀಶ್ ಪೂಂಜ, ಸಂಚಾಲಕ ಶಶಿಧರ ಶೆಟ್ಟಿ, ಬಸ್ರೂರು ಅಪ್ಪಣ್ಣ ಹೆಗ್ಡೆ ಸ್ವಾಗತಿಸಿದರು.

ಕನ್ಯಾಡಿ ಬದ್ರಿಯಾ ಮಸೀದಿ ಬಳಿ ಮುಸ್ಲಿಮರು ಪಾದಯಾತ್ರಿಗಳಿಗೆ ಪಾನೀಯ ವಿತರಿಸಿದರು. ಸಾವಿರಾರು ಭಕ್ತರು ಉಜಿರೆಯಿಂದ ಧರ್ಮಸ್ಥಳಕ್ಕೆ 'ಹರಹರ ಮಹಾದೇವ' ಘೋಷಣೆಯೊಂದಿಗೆ ಸಾಗಿದರು. ಧರ್ಮಸ್ಥಳದ ಮುಖ್ಯ ಪ್ರವೇಶ ದ್ವಾರದ ಬಳಿ ಡಿ.ಸುರೇಂದ್ರ ಕುಮಾರ್, ಡಿ.ಹರ್ಷೇಂದ್ರ ಕುಮಾರ್, ಶ್ರೇಯಸ್ ಕುಮಾರ್, ನಿಶ್ಚಲ್ ಕುಮಾರ್ ಪಾದಯಾತ್ರಿಗಳನ್ನು ಸ್ವಾಗತಿಸಿದರು.

ಯಾತ್ರೆಯಲ್ಲಿ ಯು.ಟಿ.ಖಾದರ್ ಭಾಗಿ

ಮಂಗಳೂರಿನ ಕದ್ರಿ ದೇವಸ್ಥಾನದಿಂದ ಭಾನುವಾರ ಬೆಳಿಗ್ಗೆ ಹೊರಟ ಯಾತ್ರೆಯಲ್ಲಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಪಾಲ್ಗೊಂಡು ಶುಭ ಕೋರಿದರು. ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದ ಅವರು ನಂತರ ಜ್ಯೋತಿ ಬೆಳಗಿಸಲು ಸ್ವಾಮೀಜಿಯವರ ಜೊತೆಯಾದರು.

ಕದ್ರಿ ಯೋಗೀಶ್ವರ ಮಠದ ಸ್ವಾಮೀಜಿ, ಶರವು ದೇವಾಲಯದ ರಾಘವೇಂದ್ರ ಶಾಸ್ತ್ರಿ, ಕಟೀಲು ದೇವಸ್ಥಾನದ ಲಕ್ಷ್ಮಿನಾರಾಯಣ ಅಸ್ರಣ್ಣ, ಮೇಯರ್ ಸುಧೀರ್ ಶೆಟ್ಟಿ ಕಣ್ಣೂರು, ಕಲ್ಕೂರ ಪ್ರತಿಷ್ಠಾನದ ಪ್ರದೀಪ್ ಕುಮಾರ್ ಕಲ್ಕೂರ ಮತ್ತಿತರರು ಇದ್ದರು.

ಸುದ್ದಿ 2 ನಿಮಿಷ

ಸೈಬರ್ ಅಪರಾಧ ತಡೆಗೆ ಹೊಸ ನಿಯಮ: ಪರಮೇಶ್ವರ

ಮಂಗಳೂರು: 'ಸೈಬರ್ ಅಪರಾಧಗಳನ್ನು ತಡೆಗಟ್ಟಲು ಸಮಿತಿಯೊಂದನ್ನು ರಚಿಸಲಾಗಿದ್ದು ಅದು ಸದ್ಯದಲ್ಲೇ ಹೊಸ ಕಾನೂನು ರೂಪಿಸಲಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಬಜಪೆ, ಮಂಗಳೂರು ಗ್ರಾಮಾಂತರ ಠಾಣೆ ಮತ್ತು ನಗರ ಸಶಸ್ತ್ರ ದಳದ ಹೊಸ ಕಟ್ಟಡಗಳ ಉದ್ಘಾಟನೆಯ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಸೈಬರ್ ಅಪರಾಧ ತಡೆಗೆ ಸಮರ್ಪಕ ಕಾನೂನು ಜಾರಿಗೊಳಿಸುವುದಕ್ಕಾಗಿ ರಚಿಸಿರುವ ಸಮಿತಿಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಗೃಹ ಇಲಾಖೆಯ ತಜ್ಞರು ಇದ್ದಾರೆ. ಅವರು ಕಾನೂನು ತಿದ್ದುಪಡಿ, ಹೊಸ ನಿಯಮಗಳ ಅಳವಡಿಕೆ ಮತ್ತು ಜಾರಿಗೆ ನೆರವಾಗಲಿದ್ದಾರೆ' ಎಂದರು.

'ರಾಜ್ಯದಲ್ಲಿ ಈಚಿನ ವರ್ಷಗಳಲ್ಲಿ ಅಪರಾಧ ಪ್ರಕರಣಗಳು ಕಡಿಮೆಯಾಗಿವೆ. ಆದರೆ 'ವೈಟ್ ಕಾಲರ್' ಅಪರಾಧಗಳು ಹೆಚ್ಚುತ್ತಿವೆ. ಪೊಲೀಸ್ ವ್ಯವಸ್ಥೆಗೆ ಆಧುನಿಕ ಸ್ಪರ್ಶ ನೀಡುವುದರೊಂದಿಗೆ ಈ ಅಪರಾಧಗಳನ್ನು ಕೂಡ ತಡೆಯಲು ಅನುಕೂಲ ವಾತಾವರಣ ನಿರ್ಮಾಣ ಆಗಲಿದೆ. ಕಂಪ್ಯೂಟರ್ ಶಿಕ್ಷಣ, ಸೈಬರ್ ಅಪರಾಧ ತಡೆಗೆ ತರಬೇತಿ ಮತ್ತು ಶಸ್ತ್ರಾಸ್ತ್ರ ಬಳಕೆಯಲ್ಲಿ ಸಮರ್ಪಕತೆ ಮೂಡಿಸುವುದು ಆಧುನೀಕರಣದ ಭಾಗವಾಗಿದೆ. 18 ಸಾವಿರ ಕಾನ್‌ಸ್ಟೆಬಲ್ ಹುದ್ದೆಗಳ ಭರ್ತಿ ಪ್ರಕ್ರಿಯೆ ನಡೆಯುತ್ತಿದ್ದು, ಎಂಜಿನಿಯರಿಂಗ್ ಮತ್ತಿತರ ತಾಂತ್ರಿಕ ಶಿಕ್ಷಣ ಪಡೆದವರು ಪೊಲೀಸ್ ಇಲಾಖೆ ಸೇರಲು ಇಚ್ಛಿಸಿದ್ದಾರೆ. ಪೊಲೀಸ್ ವ್ಯವಸ್ಥೆಯ ಆಧುನೀಕರಣದಲ್ಲಿ ಇದು ಮಹತ್ವದ ಹೆಜ್ಜೆ ಆಗಲಿದೆ' ಎಂದರು.



ರಾಜ್ಯದ ಪೊಲೀಸ್ ಠಾಣೆಗಳನ್ನು ಕೇಂದ್ರೀಕೃತ ವ್ಯವಸ್ಥೆಯಡಿ ನಿಯಂತ್ರಿಸುವ ಕಮಾಂಡ್ ಸೆಂಟರ್ ಬೆಂಗಳೂರಿನಲ್ಲಿ ಮೂರು ತಿಂಗಳ ಒಳಗೆ ಆರಂಭವಾಗಲಿದೆ ಎಂದು ಅವರು ತಿಳಿಸಿದರು.

ಲಿಂಗಾಯತ ಧರ್ಮ: ಪುನರ್ ಪರಿಶೀಲನೆಗೆ ಮನವಿ

ಬೆಳಗಾವಿ: 'ಲಿಂಗಾಯತಕ್ಕೆ ಸ್ವತಂತ್ರ ಧರ್ಮ ಮಾನ್ಯತೆ ನೀಡುವ ಬಗ್ಗೆ ಕೇಂದ್ರ ಸರ್ಕಾರ ಕೇಳಿದ ಮಾಹಿತಿಗೆ ರಾಜ್ಯ ಸರ್ಕಾರ ಕೂಡಲೇ ಪ್ರತಿಕ್ರಿಯೆ ನೀಡಬೇಕು. ಈ ಹಿಂದೆ ಕಳುಹಿಸಿದ ಪ್ರಸ್ತಾವವನ್ನು ಪುನರ್ ಪರಿಶೀಲನೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಮತ್ತೊಮ್ಮೆ ಮನವಿ ಸಲ್ಲಿಸಲಾಗುವುದು' ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ ಎಸ್.ಎಂ. ಜಾಮದಾರ ತಿಳಿಸಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯ ಸರ್ಕಾರದಿಂದ 2018ರಲ್ಲಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. 2018ರ ನವೆಂಬರ್ 13ರಂದು ಕೇಂದ್ರದಿಂದ, ಈ ಪ್ರಸ್ತಾವ ದೋಷಪೂರಿತ, ಪುನರ್ ಪರಿಶೀಲಿಸಿ' ಎಂಬ ಪತ್ರ ಬಂದಿದೆ. ಈ ಬಾರಿ ಪರಿಪೂರ್ಣ ಮಾಹಿತಿ ಒದಗಿಸಬೇಕು ಎಂದು ರಾಜ್ಯ ಸರ್ಕಾರವನ್ನು ಕೋರಲಾಗುವುದು' ಎಂದರು.

'ಲಿಂಗಾಯತ ಸ್ವತಂತ್ರ ಧರ್ಮಕ್ಕೆ ಬೇಕಾದ ಎಲ್ಲ ದಾಖಲೆಗಳನ್ನೂ ನ್ಯಾಯಮೂರ್ತಿ ನಾಗಮೋಹನ ದಾಸ್ ಅವರಿಗೆ ಈ ಹಿಂದೆಯೇ ನೀಡಲಾಗಿತ್ತು. ಅವರ ವರದಿಯಲ್ಲಿಯೂ ಲಿಂಗಾಯತ ಸ್ವತಂತ್ರ ಧರ್ಮದ ಕುರಿತು ತಿಳಿಸಿದ್ದಾರೆ. ಈ ವರದಿಯನ್ನು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿತ್ತು. ಆದರೆ, ಕೇಂದ್ರವು ನಾಗಮೋಹನ ದಾಸ್ ಅವರ ವರದಿಯನ್ನು ನೋಡದೇ, ಮರಳಿ ರಾಜ್ಯ ಸರ್ಕಾರಕ್ಕೆ ಕಳಿಸಿದೆ. ಇದು ಸರಿಯಾದ ನಡೆಯಲ್ಲ' ಎಂದರು.

ಪೊಲೀಸ್ ಅಧಿಕಾರಿ ಮೇಲೆ ಉಗ್ರರ ದಾಳಿ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪೊಲೀಸ್ ಅಧಿಕಾರಿಯೊಬ್ಬರ ಮೇಲೆ ಉಗ್ರರು ಭಾನುವಾರ ಗುಂಡಿನ ದಾಳಿ ನಡೆಸಿದ್ದಾರೆ. ಅವರ ಸ್ಥಿತಿ ಗಂಭೀರವಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೊಲೀಸ್ ಅಧಿಕಾರಿ ಮಸರೂರ್ ಅಹ್ಮದ್ ವಾನಿ, ಉಗ್ರರಿಂದ ಗುಂಡಿನ ದಾಳಿಗೆ ಒಳಗಾದವರು. ಅವರು ಇಲ್ಲಿನ ಈದ್ಗಾ ಮೈದಾನದಲ್ಲಿ ಮಕ್ಕಳ ಜೊತೆ ಕ್ರಿಕೆಟ್ ಆಡುತ್ತಿದ್ದಾಗ, ಉಗ್ರರು ದಾಳಿ ನಡೆಸಿದ್ದಾರೆ. ಭದ್ರತಾ ಪಡೆಗಳು ಉಗ್ರರ ಶೋಧಕ್ಕಾಗಿ ಕಾರ್ಯಾಚರಣೆ ಕೈಗೊಂಡಿದ್ದಾರೆ.

'ಆಪರೇಷನ್ ಕಮಲ ಮಾಡಿದರೆ, ಬಿಜೆಪಿ ಅಂತ್ಯ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಆಪರೇಷನ್ ಕಮಲ ಮಾಡಿ, ರಾಜ್ಯ ಸರ್ಕಾರ ಬೀಳಿಸಲು ಯತ್ನಿಸಿದ್ದೇ ಆದರೆ ಅದು ಬಿಜೆಪಿ ಅಂತ್ಯಕ್ಕೆ ಕಾರಣವಾಗಲಿದೆ' ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಎಚ್ಚರಿಸಿದರು.



ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದ ಜನತೆ ಈಗಾಗಲೇ ಬಿಜೆಪಿಗೆ ವಿಧಾನಸಭಾ ಚುನಾವಣೆಯಲ್ಲಿ ಬುದ್ಧಿ ಕಲಿಸಿದೆ. ರಾಷ್ಟ್ರಮಟ್ಟದಲ್ಲೂ ರಾಜ್ಯ ಬಿಜೆಪಿ ಪ್ರಭಾವ ಕಳೆದುಕೊಂಡಿದೆ. ಹೀಗಿದ್ದಾಗ ಮತ್ತೆ ಆಪರೇಷನ್ ಕಮಲ ಮಾಡಲು ಹೊರಟಿರುವುದು ಅದರ ಅವನತಿಗೆ ಕಾರಣವಾಗಲಿದೆ' ಎಂದರು.

'ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ;ಮಾಧ್ಯಮಗಳಲ್ಲಿ ಚರ್ಚಿಸುವ ವಿಷಯವಲ್ಲ. ಪಕ್ಷದ ವೇದಿಕೆಯಲ್ಲಿ, ನಾಯಕರ ಸಮ್ಮುಖದಲ್ಲಿ ಚರ್ಚೆಯಾಗಬೇಕು. ಪಕ್ಷದ ಯಾರೂ ಕೂಡ ಮಾಧ್ಯಮದ ಎದುರು ಮಾತನಾಡಬಾರದು' ಎಂದು ವಿನಂತಿಸಿಕೊಂಡರು.

'ಕರ್ನಾಟಕದಲ್ಲಿ ಬಿಜೆಪಿಯವರ ಆಟ ನಡೆಯಲ್ಲ'

ಬೆಳಗಾವಿ: 'ಬಿಜೆಪಿಯವರಿಗೆ ಆಪರೇಷನ್ ಕಮಲದ ರುಚಿ ಹಿಡಿದಿದೆ. ಈ ಅಸ್ತ್ರ ಪ್ರಯೋಗಿಸಿ ಏಳೆಂಟು ರಾಜ್ಯಗಳಲ್ಲಿ ಅಧಿಕಾರ ಹಿಡಿದಿದ್ದಾರೆ. ಆದರೆ, ಕರ್ನಾಟಕದಲ್ಲಿ ಅವರ ಆಟ ನಡೆಯುವುದಿಲ್ಲ' ಎಂದು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೇರೆಯವರ ಕೆರೆಯಲ್ಲಿ ಮೀನು ಹಿಡಿಯುವುದೇ ಬಿಜೆಪಿಯವರಿಗೆ ಕೆಲಸ. ವಿರೋಧ ಪಕ್ಷದ ನಾಯಕನ ಆಯ್ಕೆ ಅವರಿಗೆ ಸಾಧ್ಯವಾಗದಿರುವುದು ವಿಪರ್ಯಾಸ' ಎಂದರು.

'ಎರಡೂವರೆ ವರ್ಷದ ಬಳಿಕ ಸಿ.ಎಂ ಬದಲಾಗುತ್ತಾರಾ? ಹಾಗೇನಾದರೂ ಒಪ್ಪಂದವಾಗಿದೆಯೇ?' ಎಂಬ ಪ್ರಶ್ನೆಗೆ, ' ಕಾಂಗ್ರೆಸ್‌ನಲ್ಲಿ ಈಗ ನಾಯಕತ್ವದ ರೇಸ್ ಇಲ್ಲ. ಈಗ ಸಿದ್ದರಾಮಯ್ಯ ನಮ್ಮ ಮುಖ್ಯಮಂತ್ರಿ. ಸರ್ಕಾರ ಸುಭದ್ರವಾಗಿದೆ. ಯಾವ ಒಪ್ಪಂದವೂ ಆಗಿಲ್ಲ' ಎಂದರು.

'ಬಿಜೆಪಿ ಸರ್ಕಾರ ರಚಿಸುವುದು ಹಗಲುಗನಸು'

ಆನೇಕಲ್: ಬಿಜೆಪಿಯವರು ಮತ್ತೆ 'ಆಪರೇಷನ್ ಕಮಲ'ದ ಪ್ರಯತ್ನದಲ್ಲಿ ತೊಡಗಿದ್ದಾರೆ. ಇದು ಅವರ ಹಳೆಯ ಚಾಳಿಯಾಗಿದೆ. ವಿರೋಧ ಪಕ್ಷ ನಾಯಕನನ್ನು ಆಯ್ಕೆ ಮಾಡಲು ಸಾಧ್ಯವಾಗದ ಬಿಜೆಪಿಯು ಆಪರೇಷನ್ ಕಮಲದ ಮೂಲಕ ಸರ್ಕಾರ ರಚಿಸುವುದು ಹಗಲುಗನಸು ಎಂದು ಸಚಿವ ರಾಮಲಿಂಗಾರೆಡ್ಡಿ ಲೇವಡಿ ಮಾಡಿದ್ದಾರೆ.

ಹಂದೇನಹಳ್ಳಿಯಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋಲು ಕಂಡಿರುವ ಬಿಜೆಪಿಗೆ ಇನ್ನೂ ಅದರಿಂದ ಹೊರಬರಲು ಸಾಧ್ಯವಾಗಿಲ್ಲ ಎಂದರು.

'ಒಡೆದ ಮನೆಯಾಗಿರುವ ಕಾಂಗ್ರೆಸ್ ಸ್ಥಿತಿ ಮನೆಯೊಂದು ಮೂರು ಬಾಗಿಲು ಎಂಬಂತಾಗಿದೆ' ಎಂಬ ನಳಿನ್ ಕುಮಾರ್ ಕಟೀಲ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್‌ಗೆ ಬಾಗಿಲುಗಳಾದರೂ ಇವೆ. ಬಿಜೆಪಿ ಎಂಬ ಮನೆಗೆ ಬಾಗಿಲುಗಳೇ ಇಲ್ಲ ಎಂದರು.


ಉಡುಪಿಯಲ್ಲಿ ವಿಶ್ವ ಬಂಟರ ಸಂಘಗಳ ಒಕ್ಕೂಟವು ಹಮ್ಮಿಕೊಂಡಿರುವ ಎರಡು ದಿನಗಳ 'ವಿಶ್ವ ಬಂಟರ ಸಮ್ಮೇಳನ–2023'ರಲ್ಲಿ ಬೆಂಗಳೂರಿನ ಬಂಟ್ಸ್ ಸಂಘದವರು ನೃತ್ಯ ಪ್ರದರ್ಶನ ನೀಡಿದರು ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್.

ಬೆಂಗಳೂರು– ಮಂಗಳೂರು ಕಾರಿಡಾರ್ ಅಗತ್ಯ: ಪರಮೇಶ್ವರ

ಪ್ರಜಾವಾಣಿ ವಾರ್ತೆ

ಉಡುಪಿ: 'ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಗಬೇಕಾದರೆ ಬೆಂಗಳೂರು–ಮಂಗಳೂರು ಕಾರಿಡಾರ್ ನಿರ್ಮಾಣಗುವುದು ಅಗತ್ಯ' ಎಂದು ಗೃಹ ಸಚಿವ ಜಿ. ಪರಮೇಶ್ವರ ಅಭಿಪ್ರಾಯಪಟ್ಟರು.

ಅಮ್ಮಣ್ಣಿ ರಾಮಣ್ಣ ಶೆಟ್ಟಿ ಮೈದಾನದಲ್ಲಿ ಭಾನುವಾರ ಬಂಟರ ಸಾಂಸ್ಕೃತಿಕ ವೈಭವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಬೆಂಗಳೂರು– ಮಂಗಳೂರು ಕಾರಿಡಾರ್ ನಿರ್ಮಾಣವಾದರೆ ಕೇವಲ ಮೂರೂವರೆ ಗಂಟೆಯಲ್ಲಿ ಬೆಂಗಳೂರು ತಲುಪಬಹುದು. ಕರಾವಳಿಯ ಸಮಗ್ರ ಅಭಿವೃದ್ಧಿಯೂ ಸಾಧ್ಯವಾಗಲಿದೆ' ಎಂದರು.

ಆರ್ಥಿಕವಾಗಿ ಸಬಲರಾಗಿರುವ ಬಂಟರು ಸೇರಿದಂತೆ ಕರಾವಳಿಯ ಉದ್ಯಮಿಗಳು ಚಿನ್ನ ಹಾಗೂ ವಜ್ರ ನವೋದ್ಯಮ ಆರಂಭಕ್ಕೆ ಮುಂದಾದರೆ ಸರ್ಕಾರದಿಂದ ಅಗತ್ಯ ಮೂಲಸೌಕರ್ಯ ವ್ಯವಸ್ಥೆ ಮಾಡಲಾಗುವುದು. ಮುಂದಿನ ಬಜೆಟ್‌ನಲ್ಲಿ ಬಂಟರ ಅಭಿವೃದ್ಧಿ ನಿಗಮ ಘೋಷಿಸುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದು ಸರ್ಕಾರವು ಕೊಟ್ಟ ಮಾತಿನಂತೆ ನಡೆಯಲಿದೆ ಎಂದು ಭರವಸೆ ನೀಡಿದರು. ಜಗತ್ತು ಭಾರತವನ್ನು ನೋಡುವ ದೃಷ್ಟಿಕೋನ ಬದಲಾಗಿದ್ದು ವಿಶ್ವದಲ್ಲೇ ಅತಿ ವೇಗವಾಗಿ ಬೆಳೆಯುತ್ತಿರುವ ರಾಷ್ಟ್ರಗಳಲ್ಲಿ ಭಾರತ ಮುಂಚೂಣಿಯಲ್ಲಿದೆ. ಬದಲಾದ ಭಾರತ ನಿರ್ಮಾಣ ಮಾಡಿರುವ ಅವಕಾಶಗಳನ್ನು ಬಳಸಿಕೊಳ್ಳಬೇಕು ಎಂದರು.

ನಟರಾದ ರಿಷಬ್ ಶೆಟ್ಟಿ, ಗುರುಕಿರಣ್ ಸೇರಿದಂತೆ ಹಲವು ಕಲಾವಿದರು ಕಾರ್ಯಕ್ರಮದಲ್ಲಿ ಇದ್ದರು.

'ಬಂಟರನ್ನು 2ಎ ಪ್ರವರ್ಗಕ್ಕೆ ಸೇರಿಸಿ'

'ಬಂಟರು ಮತ್ತು ಉತ್ತರ ಕನ್ನಡ ಜಿಲ್ಲೆಯ ನಾಡವರದು ಒಂದೇ ಸಮುದಾಯ. ನಾಡವರನ್ನು ಪ್ರವರ್ಗ 2ಎ ಅಡಿ ಸೇರಿಸಲಾಗಿದೆ. ಬಂಟರು ಇನ್ನೂ 3ಬಿ ಪ್ರವರ್ಗದಲ್ಲಿದ್ದಾರೆ. ಬಂಟರಿಗೂ 2ಎ ಪ್ರವರ್ಗದಡಿ ಮೀಸಲಾತಿ ನೀಡಬೇಕು' ಎಂದು ವಿಶ್ವ ಬಂಟರ ಸಮ್ಮೇಳನದ 'ಸ್ಥಿತ್ಯಂತರದಲ್ಲಿ ಬಂಟರು: ಶಿಕ್ಷಣ ಮತ್ತು ನಿರುದ್ಯೋಗ' ವಿಚಾರ ಗೋಷ್ಠಿಯಲ್ಲಿ ಠರಾವು ಮಂಡಿಸಲಾಯಿತು.

ತುಳು ಅಲ್ಪಸಂಖ್ಯಾತ ಕೋಟಾ ಅಡಿಯಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಸ್ಥಾಪನೆಯಾದ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಸೀಟು ಹಂಚಿಕೆಯಲ್ಲಿ ಈ ಹಿಂದೆ ತುಳುವರಿಗೆ ಮೀಸಲಾತಿ ನೀಡಲಾಗುತ್ತಿತ್ತು. ಈ ಕೋಟಾದಡಿ ಸ್ಥಾಪನೆಯಾಗಿರು ಕೆಲವು ಶಿಕ್ಷಣ ಸಂಸ್ಥೆಗಳು ಡೀಮ್ಡ್ ವಿಶ್ವವಿದ್ಯಾಲಯಗಳಾಗಿ ಪರಿವರ್ತನೆಗೊಂಡಿದ್ದು, ಈಗ ತುಳುವರಿಗೆ ಮೀಸಲಾತಿ ನೀಡುತ್ತಿಲ್ಲ. ಇದರಿಂದ ಬಂಟರೂ ಸೇರಿದಂತೆ ತುಳುವರಿಗೆ ಹಿಂದಿನಷ್ಟು ಸೀಟುಗಳು ಹಂಚಿಕೆ ಆಗುತ್ತಿಲ್ಲ. ಈ ಸಂಸ್ಥೆಗಳು ತುಳುವರಿಗೆ ಸೀಟುಗಳನ್ನು ಮೀಸಲಿಡುವುದನ್ನು ಕಡ್ಡಾಯಗೊಳಿಸಬೇಕು ಎಂದೂ ಠರಾವು ಮಂಡಿಸಲಾಯಿತು.

'ನಿಮ್ಮವರ ಅನ್ಯಾಯಕ್ಕೆ ಯಾರ ಬಳಿ ನ್ಯಾಯ ಕೇಳಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕಾದ ನಷ್ಟ ತುಂಬಿಕೊಡಲು 15ನೇ ಹಣಕಾಸು ಆಯೋಗ ಕರ್ನಾಟಕಕ್ಕೆ ₹ 5,495 ಕೋಟಿ ವಿಶೇಷ ಅನುದಾನ ನೀಡುವಂತೆ ಶಿಫಾರಸು ಮಾಡಿತ್ತು. ನಮ್ಮದೇ ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗಿ ವಿತ್ತ ಸಚಿವೆಯಾಗಿರುವ ನಿರ್ಮಲಾ ಸೀತಾರಾಮನ್ ಅವರು ಶಿಫಾರಸನ್ನು ತಿರಸ್ಕರಿಸಿ, ನಾಡದ್ರೋಹ ಎಸಗಿದರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಕೇಂದ್ರದ ವಿರುದ್ಧ ಅಭಿಯಾನ ಮುಂದುವರಿಸಿ ತಮ್ಮ ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಶನಿವಾರ ಪೋಸ್ಟರ್‌ಗಳನ್ನು ಹಂಚಿಕೊಂಡಿರುವ ಅವರು, 'ಕೇಂದ್ರದ ಬಿಜೆಪಿ ಸರ್ಕಾರ ಕರ್ನಾಟಕದ ಮೇಲೆ ಸೇಡು ತೀರಿಸಿಕೊಳ್ಳುತ್ತಿದೆಯೇ?' ಎಂದಿದ್ದಾರೆ.

'ಯುಪಿಎ ಸರ್ಕಾರದ ಅವಧಿಯ 14ನೇ ಹಣಕಾಸು ಆಯೋಗ ನಿಗದಿಪಡಿಸಿದ್ದ ತೆರಿಗೆ ಪಾಲು ಶೇ 4.72ಕ್ಕೆ ಕತ್ತರಿ ಹಾಕಿ, ನಿಮ್ಮ ಸರ್ಕಾರದ ಅವಧಿಯ 15ನೇ ಹಣಕಾಸು ಆಯೋಗವು ಶೇ 3.64ಕ್ಕೆ ಇಳಿಸಿದೆ. ಕನ್ನಡಿಗರಿಗೆ ಸಿಗಬೇಕಿದ್ದ ₹ 45 ಸಾವಿರ ಕೋಟಿ ತೆರಿಗೆ ಹಣ ವಂಚಿಸಿದವರು ನೀವೇ ಅಲ್ಲವೇ' ಎಂದೂ ಕೇಳಿದ್ದಾರೆ.

ಪಕ್ಷದ ಬಲವರ್ಧನೆಗಾಗಿ ಚರ್ಚೆ: ಸಚಿವ ಸತೀಶ್

ಕೊಪ್ಪಳ: 'ಗೃಹ ಸಚಿವ ಜಿ. ಪರಮೇಶ್ವರ ಅವರ ಮನೆಗೆ ಊಟಕ್ಕೆ ಹೋದಾಗ ಪಕ್ಷದ ಬಲವರ್ಧನೆ ಬಗ್ಗೆ ಚರ್ಚೆಯಾಗಿದೆಯೇ ಹೊರತು ಪಕ್ಷಕ್ಕೆ ಹಾನಿಯಾಗುವ ವಿಷಯಗಳ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.



ನಗರದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿ 'ಊಟಕ್ಕೆ ಹೋಗಿದ್ದಕ್ಕೆ ರಾಜಕೀಯವಾಗಿ ವಿಶೇಷ ಅರ್ಥ ಕಲ್ಪಿಸುವುದು ಅಗತ್ಯವಿಲ್ಲ. ಅದು ಊಟದ ಕಾರ್ಯಕ್ರಮ ವಷ್ಟೇ. ಪಕ್ಷದ ವಿಷಯಗಳನ್ನು ಚರ್ಚಿಸಲು ಕಾಂಗ್ರೆಸ್ ಕಚೇರಿ ಇದೆ' ಎಂದರು. ದುಬೈ ಪ್ರವಾಸ ಕೈಗೊಂಡ ಕುರಿತ ಪ್ರಶ್ನೆಗೆ 'ಶಾಸಕರು ಹಾಗೂ ಮಾಜಿ ಶಾಸಕ ಮಿತ್ರರೊಂದಿಗೆ ನಾನು ಪ್ರವಾಸಕ್ಕೆ ಹೋಗುವುದು ಸಾಮಾನ್ಯ. ಈಗ ಹಾಲಿ ಶಾಸಕರನ್ನು ಪ್ರವಾಸಕ್ಕೆ ಕರೆದುಕೊಂಡು ಹೋದರೆ ದೊಡ್ಡ ಸುದ್ದಿಯಾಗುತ್ತದೆ. ಆದ್ದರಿಂದ ಕೆಲ ಮಾಜಿ ಶಾಸಕರನ್ನು ಮಾತ್ರ ದುಬೈಗೆ ಕರೆದುಕೊಂಡು ಹೋಗುವೆ' ಎಂದು ಪ್ರತಿಕ್ರಿಯಿಸಿದರು.

ಎರಡೂವರೆ ವರ್ಷದ ಬಳಿಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುತ್ತಾರೆ ಎನ್ನುವ ಚರ್ಚೆ ಬಗ್ಗೆ 'ಇದರ ಬಗ್ಗೆ ಪಕ್ಷ ಹಾಗೂ ಹೈಕಮಾಂಡ್ ತೀರ್ಮಾನಿಸುತ್ತದೆ. ನನ್ನ ಹಾಗೂ ಶಿವಕುಮಾರ್ ನಡುವೆ ಯಾವುದೇ ಮುನಿಸು ಇಲ್ಲ' ಎಂದು ಸ್ಪಷ್ಟಪಡಿಸಿದರು.

ಜನರ ದಿಕ್ಕು ತಪ್ಪಿಸಲು 'ಆಪರೇಷನ್ ಕಮಲ' ಮುನ್ನೆಲೆಗೆ: ಜೋಶಿ ಟೀಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಜ್ಯ ಕಾಂಗ್ರೆಸ್‌ನಲ್ಲಿ ದಿನದಿಂದ ದಿನಕ್ಕೆ ಭಿನ್ನಮತ ಹೆಚ್ಚಾಗುತ್ತಿದ್ದು, ಅಧಿಕಾರಕ್ಕಾಗಿ ಒಳಜಗಳ ಆರಂಭವಾಗಿದೆ. ಇದನ್ನು ಮರೆಮಾಚಲು ಹುಲಿ ಉಗುರಿನ ಪೆಂಡೆಂಟ್ ಹಾಗೂ ಆಪರೇಷನ್ ಕಮಲದ ವಿಷಯ ಮುನ್ನೆಲೆಗೆ ತಂದು ಜನರ ದಿಕ್ಕು ತಪ್ಪಿಸುತ್ತಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆಕ್ರೋಶ ವ್ಯಕ್ತಪಡಿಸಿದರು.

ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಶಾಸಕರನ್ನು ಒಟ್ಟಾಗಿ ಹಿಡಿದಿಟ್ಟುಕೊಳ್ಳುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಸಿದ್ದರಾಮಯ್ಯ ಹಾಗೂ ಡಿಕೆಶಿ ಅವರ ಜಗಳ ತಾರಕಕ್ಕೇರಿದ್ದು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯನ್ನು ಹೊರಗಿಟ್ಟು ಸಭೆ ನಡೆಸುತ್ತಿದ್ದಾರೆ. ಎರಡು, ಮೂರು ಡಿಸಿಎಂ ಹುದ್ದೆ ಸೃಷ್ಟಿಸುವ ವಿಷಯ ಹರಿಬಿಡುತ್ತಿದ್ದಾರೆ' ಎಂದು ಹೇಳಿದರು.



ಬೆಳೆ ವಿಮೆ; ಸುಳ್ಳು ವರದಿ: 'ಬೆಳೆ ವಿಮೆ ಪರಿಹಾರ ನೀಡಲು ಕೇಂದ್ರ ಸರ್ಕಾರ ಸಿದ್ಧವಿದೆ. ಆದರೆ, ರಾಜ್ಯ ಸರ್ಕಾರ 2022ರ ವರದಿ ತಪ್ಪಾಗಿ ನೀಡಿತ್ತು. ಸರಿಪಡಿಸಿ ಕಳುಹಿಸುವಂತೆ ಸೂಚಿಸಲಾಗಿದ್ದು, ರಾಜ್ಯದ ಮುಖ್ಯ ಕಾರ್ಯದರ್ಶಿ ಜೊತೆಯೂ ಚರ್ಚಿಸಲಾಗಿದೆ. ರಾಜ್ಯ ಸರ್ಕಾರ ಖಾಸಗಿ ವಿಮಾ ಕಂಪನಿಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಕೇಂದ್ರಕ್ಕೆ ಸುಳ್ಳು ವರದಿ ನೀಡಿದೆ. ಶೀಘ್ರವಾಗಿ ಸಮರ್ಪಕ ವರದಿ ನೀಡದಿದ್ದರೆ, ರಾಜ್ಯದಾದ್ಯಂತ ಬಿಜೆಪಿ ವತಿಯಿಂದ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಲಿದೆ' ಎಂದು ಎಚ್ಚರಿಸಿದರು.

'ದೇಶದಲ್ಲಿ ಅಗತ್ಯಕ್ಕಿಂತ ಹೆಚ್ಚು ವಿದ್ಯುತ್ ಉತ್ಪಾನೆಯಾಗುತ್ತಿದ್ದು ರಾಜ್ಯ ಸರ್ಕಾರ ಬೇಡಿಕೆ ಇಟ್ಟಷ್ಟು ವಿದ್ಯುತ್ ಪೂರೈಸಲು ನಾವು ಸಿದ್ಧರಿದ್ದೇವೆ. ಆದರೆ, ಉಚಿತ ಗ್ಯಾರಂಟಿ ಯೋಜನೆ ಜಾರಿಯಿಂದಾಗಿ ವಿದ್ಯುತ್ ಖರೀದಿಸಲು ಅವರಲ್ಲಿ ಹಣವಿಲ್ಲ. ಸುಳ್ಳು ಹೇಳುವುದರಲ್ಲಿ ಸಿದ್ದರಾಮಯ್ಯ ಮಹಾನಿಸ್ಸೀಮರು' ಎಂದು ಹರಿಹಾಯ್ದರು.

'ಮಹದಾಯಿ ಯೋಜನೆ ಅನುಷ್ಠಾನ ನಮ್ಮಿಂದಲೇ': 'ಮಹಾದಾಯಿ ಯೋಜನೆ ಕುರಿತು ಕೇಂದ್ರ ಸರ್ಕಾರವು ಪರಿಸರ ಮತ್ತು ವನ್ಯಜೀವಿ ಮಂಡಳಿಗೆ ಸಂಬಂಧಿಸಿ ರಾಜ್ಯ ಸರ್ಕಾರದಿಂದ ಕೆಲವು ಸ್ಪಷ್ಟೀಕರಣದ ವರದಿ ಕೇಳಿದೆ. ಈವರೆಗೂ ಅದು ನೀಡದ ಕಾರಣ ಯೋಜನೆ ಅನುಷ್ಠಾನ ವಿಳಂಬವಾಗುತ್ತಿದೆ' ಎಂದು ಪ್ರಲ್ಹಾದ ಜೋಶಿ ಹೇಳಿದರು.

'ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿ ಈಗಾಗಲೇ ಕೇಂದ್ರದ ಅಧಿಕಾರಿಗಳ ಜೊತೆ ಚರ್ಚಿಸಿದ್ದೇವೆ. ಸಮಗ್ರ ವಿಸ್ತ್ರತಾ ವರದಿ(ಡಿಪಿಆರ್) ಸಿದ್ಧಪಡಿಸಿ ಒಪ್ಪಿಗೆ ನೀಡಿದ್ದೇ ಬಿಜೆಪಿ ಸರ್ಕಾರ. ಅದರ ಅನುಷ್ಠಾನ ಸಹ ನಾವೇ ಮಾಡುತ್ತೇವೆ' ಎಂದು ಭರವಸೆ ನೀಡಿದರು.

'ಸಿದ್ದರಾಮಯ್ಯ ಉತ್ತಮ ಕೆಲಸ ಮಾಡುತ್ತಿದ್ದಾರೆ'

ಪ್ರಜಾವಾಣಿ ವಾರ್ತೆ

ಹಾನಗಲ್ (ಹಾವೇರಿ ಜಿಲ್ಲೆ): 'ಯಾರೇ ಮುಖ್ಯಮಂತ್ರಿಯಾಗಲಿ, ಅವರೊಂದಿಗೆ ನಾವು ಕೆಲಸ ಮಾಡುತ್ತೇವೆ. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ತಾಲ್ಲೂಕಿನ ಸಾಂವಸಗಿಯಲ್ಲಿ ಭಾನುವಾರ ನಡೆದ ವೀರರಾಣಿ ಕಿತ್ತೂರ ಚನ್ನಮ್ಮನ ಪುತ್ಥಳಿ ಅನಾವರಣ ಸಮಾರಂಭದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಾನು ಪಕ್ಷದ ಶಿಸ್ತಿನ ಸಿಪಾಯಿ. ಪಕ್ಷದ ವರಿಷ್ಠರ ನಿರ್ಣಯದಂತೆ ನಡೆದುಕೊಳ್ಳುತ್ತೇನೆ' ಎಂದರು.

'ಕಾಂಗ್ರೆಸ್ ಶಾಸಕರು ಹೇಳಿಕೆ ನೀಡಬಾರದು' ಎಂಬ ಪಕ್ಷದ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸೂಚನೆಯನ್ನು ಚಾಚೂ ತಪ್ಪದೇ ಪಾಲಿಸುತ್ತೇನೆ. ವರಿಷ್ಠರ ತೀರ್ಮಾನಕ್ಕೆ ಪಕ್ಷದ ಎಲ್ಲ ಶಾಸಕರು ಬದ್ಧರಾಗಿದ್ದೇವೆ' ಎಂದರು.

ಕಾಂಗ್ರೆಸ್ ಅಭ್ಯರ್ಥಿಗಳ ಘೋಷಣೆ

ಒಂದನೇ ಪುಟದಿಂದ...

ಈಶಾನ್ಯ ಪದವೀಧರ ಕ್ಷೇತ್ರದಿಂದ ಡಾ.ಚಂದ್ರಶೇಖರ ಬಿ.ಪಾಟೀಲ, ಬೆಂಗಳೂರು ಪದವೀಧರ ಕ್ಷೇತ್ರದಿಂದ ಎ. ದೇವೇಗೌಡ, ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ವೈ.ಎ.ನಾರಾಯಣ ಸ್ವಾಮಿ, ನೈರುತ್ಯ ಶಿಕ್ಷಕರ ಕ್ಷೇತ್ರದಿಂದ ಎಸ್.ಎಲ್.ಭೋಜೇಗೌಡ, ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ಮರಿತಿಬ್ಬೇಗೌಡ ಅವರ ಅವಧಿ 2024ರ ಜೂನ್ 21ಕ್ಕೆ ಕೊನೆ ಆಗಲಿದೆ.

ನೈರುತ್ಯ ಪದವೀಧರ ಕ್ಷೇತ್ರದ ಸದಸ್ಯರಾಗಿದ್ದ ಆಯನೂರು ಮಂಜುನಾಥ್ ರಾಜೀನಾಮೆ ನೀಡಿದ್ದರಿಂದ ಈ ಸ್ಥಾನ ಏಪ್ರಿಲ್ 19ರಿಂದ ತೆರವಾಗಿದೆ. ಈ ಸ್ಥಾನದ ಅವಧಿ 2024ರ ಜೂನ್ 21ರವರೆಗೆ ಇದೆ. ಬೆಂಗಳೂರು ಶಿಕ್ಷಕರ ಕ್ಷೇತ್ರದ ಸದಸ್ಯರಾಗಿದ್ದ ಪುಟ್ಟಣ್ಣ ಮಾರ್ಚ್16ರಂದು ರಾಜೀನಾಮೆ ನೀಡಿದ್ದರಿಂದ ತೆರವಾದ ಸ್ಥಾನದ ಅವಧಿ 2026ರ ನ. 11ರವರೆಗೆ ಇದೆ.

ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದ ಪುಟ್ಟಣ್ಣ ಅವರು ವಿಧಾನಸಭೆ ಚುನಾವಣೆಯಲ್ಲಿ ರಾಜಾಜಿನಗರ ಕ್ಷೇತ್ರದಿಂದ ಸ್ಪರ್ಧಿಸಿ ಸೋಲು ಕಂಡಿದ್ದರು. ಅವರು ಪ್ರತಿನಿಧಿಸುತ್ತಿದ್ದ ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದಲೇ ಪುಟ್ಟಣ್ಣ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸುತ್ತಿದೆ.

ಇತ್ತೀಚೆಗೆ ಬಿಜೆಪಿ ತ್ಯಜಿಸಿ 'ಕೈ' ಹಿಡಿದಿರುವ ಹಿರಿಯೂರು ಕ್ಷೇತ್ರದ ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಜೊತೆ ಕಾಂಗ್ರೆಸ್ ಸೇರ್ಪಡೆಯಾಗಿರುವ ಅವರ ಪತಿ ಡಿ.ಟಿ. ಶ್ರೀನಿವಾಸ್ ಅವರಿಗೆ ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ಟಿಕೆಟ್ ನೀಡಿದೆ. ಡಿ.ಟಿ. ಶ್ರೀನಿವಾಸ್ ಕಳೆದ ಬಾರಿ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಈ ಶಿಕ್ಷಕರ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋಲು ಕಂಡಿದ್ದರು.

ಕಂದಾಯ ಭೂಮಿ ರಕ್ಷಣೆಗೆ 'ಅರಣ್ಯ ಕಾಯ್ದೆ' ಮಾದರಿ

ಒಂದನೇ ಪುಟದಿಂದ...

ಬೆಂಗಳೂರು ನಗರ ಜಿಲ್ಲೆಯಲ್ಲಿನ ಸರ್ಕಾರಿ ಜಮೀನು ಒತ್ತುವರಿ ಕುರಿತು ಎ.ಟಿ. ರಾಮಸ್ವಾಮಿ ನೇತೃತ್ವದ ವಿಧಾನಮಂಡಲ ಜಂಟಿ ಸಮಿತಿ 2007ರಲ್ಲಿ ವರದಿ ನೀಡಿತ್ತು. ನಿವೃತ್ತ ಐಎಎಸ್ ಅಧಿಕಾರಿ ವಿ. ಬಾಲಸುಬ್ರಮಣಿಯನ್ ಅಧ್ಯಕ್ಷತೆಯಲ್ಲಿ ನೇಮಕಗೊಂಡಿದ್ದ ಸರ್ಕಾರಿ ಜಮೀನುಗಳ ಸಂರಕ್ಷಣಾ ಕಾರ್ಯಪಡೆಯು ರಾಜ್ಯದ ಉದ್ದಗಲಕ್ಕೆ ಲಕ್ಷಾಂತರ ಎಕರೆ ಸರ್ಕಾರಿ ಜಮೀನು ಒತ್ತುವರಿಯಾಗಿರುವುದನ್ನು ಪತ್ತೆಹಚ್ಚಿತ್ತು. 2011ರಲ್ಲಿ ವರದಿ ನೀಡಿದ ನಂತರ ಜಂಟಿ ಸದನ ಸಮಿತಿ, ಕಾರ್ಯಪಡೆಗಳ ಶಿಫಾರಸಿನಂತೆ ಭೂಕಬಳಿಕೆ ನಿಷೇಧ ಕಾಯ್ದೆಯನ್ನು ರೂಪಿಸಿ, ಜಾರಿಗೊಳಿಸಲಾಗಿತ್ತು. ರೈತರಿಗೆ ಕಿರುಕುಳವಾಗುತ್ತಿದೆ ಎಂಬ ಕಾರಣ ನೀಡಿ ಕಳೆದ ವರ್ಷವಷ್ಟೇ ಮತ್ತೆ ತಿದ್ದುಪಡಿ ತಂದು ಬಿಬಿಎಂಪಿ ಹಾಗೂ ರಾಜ್ಯದ ಎಲ್ಲ ನಗರ ಪಾಲಿಕೆಗಳ ವ್ಯಾಪ್ತಿಯ ಹೊರಗಿನ ಪ್ರದೇಶಗಳನ್ನು ಈ ಕಾಯ್ದೆಯ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

ಬಹಿರಂಗವಾಗದ ವರದಿ

ಗ್ರಾಮೀಣ ಪ್ರದೇಶದ ಕೃಷಿ, ಜಾನುವಾರುಗಳ ಜೀವನಾಡಿಯಾದ ಗೋಮಾಳ ಸೇರಿ ಗ್ರಾಮೀಣ ಪ್ರದೇಶದ ಸರ್ಕಾರಿ ಜಮೀನುಗಳನ್ನು ಖಾಸಗಿ ಸಂಘ–ಸಂಸ್ಥೆಗಳಿಗೆ ಮಂಜೂರು ಮಾಡುವ ಕುರಿತು ಹೊಸ ನೀತಿ ರೂಪಿಸಲು ಹಿಂದಿನ ಬಿಜೆಪಿ ಸರ್ಕಾರ ಮುಂದಾಗಿತ್ತು.

ಈ ಕುರಿತು ಪರಿಶೀಲಿಸಿ, ವರದಿ ನೀಡಲು 2022ರಲ್ಲಿ ಅಂದಿನ ಕಂದಾಯ ಸಚಿವ ಆರ್. ಅಶೋಕ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಲಾಗಿತ್ತು. ಸಮಿತಿಯ ಶಿಫಾರಸುಗಳನ್ನು ಸರ್ಕಾರ ಬಹಿರಂಗಪಡಿಸಿಲ್ಲ.

ಚಾಲ್ತಿಯಲ್ಲಿರುವ ಗೂಂಡಾ ಕಾಯ್ದೆ ಸರ್ಕಾರಿ ದಾಖಲೆ ತಿದ್ದಿ ಆರ್ಥಿಕ ವಂಚನೆ ಎಸಗುವ ಪ್ರಕರಣಗಳಿಗೆ ಸೀಮಿತವಾಗಿದೆ. ಹಾಗಾಗಿ, ಆರ್ಥಿಕ ಅಪರಾಧ ಹೊರತಾದ ಭೂ ಕಬಳಿಕೆ ತಡೆಗೆ ಸದ್ಯಕ್ಕೆ ಪ್ರಬಲ ಕಾನೂನುಗಳು ಇಲ್ಲದಂತಾಗಿದೆ.

ರಾಜ್ಯದಲ್ಲಿನ ಕಂದಾಯ ಜಮೀನುಗಳನ್ನು ಅನಧಿಕೃತವಾಗಿ ಸಾಗುವಳಿ ಮಾಡಿದ ರೈತರಿಗೆ ಭೂ ಮಂಜೂರಾತಿ ನೀಡಲು 1990–92ರಲ್ಲಿ ಮೊದಲ ಬಾರಿ ಫಾರಂ 50 ಅಡಿ ಅವಕಾಶ ಕಲ್ಪಿಸಲಾಗಿತ್ತು. ನಂತರ ಫಾರಂ 53 ಅಡಿ ಅರ್ಜಿ

ಬಗರ್‌ಹುಕುಂ ಅರ್ಜಿಗಳು

ನಮೂನೆ	ಸಲ್ಲಿಕೆಯಾದ ಅರ್ಜಿ
50	10,89,268
53	10,98,397
57	8,02,198

ಸಲ್ಲಿಕೆಗೆ ಅವಕಾಶ ನೀಡಲಾಗಿತ್ತು. 50 ಹಾಗೂ 53ರಲ್ಲಿ 20 ಲಕ್ಷಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು. ಮೊದಲ ಅರ್ಜಿಗಳಲ್ಲಿ ಶೇ 30ರಷ್ಟು ಇತ್ಯರ್ಥವಾದರೆ, ಎರಡನೇ ಅವಕಾಶದಲ್ಲಿ ಶೇ 10ರಷ್ಟೂ ಇತ್ಯರ್ಥವಾಗಿಲ್ಲ. ಇತ್ಯರ್ಥವಾಗದ ಒತ್ತುವರಿ ಭೂಮಿ 9.97 ಲಕ್ಷ

ಅಂಕಿ ಅಂಶ

- **191** ಲಕ್ಷ ಹೆಕ್ಟೇರ್ ರಾಜ್ಯದ ಭೂ ಪ್ರದೇಶ
- **65%** ಕೃಷಿ ಜಮೀನು
- **20%** ಅರಣ್ಯ ಭೂಮಿ
- **7%** ಜನವಸತಿ
- **8%** ಸಾಮೂಹಿಕ ಭೂಮಿ

ಎಕರೆ ಇದೆ. ಅರ್ಜಿಗಳನ್ನು ತಿರಸ್ಕರಿಸದೇ ಒತ್ತುವರಿ ತೆರವು ಮಾಡಲು ಈಗಿರುವ ಭೂ ಸುಧಾರಣಾ ಕಾನೂನಿನಲ್ಲಿ ಅವಕಾಶವಿಲ್ಲ.

2005 ಜನವರಿ 1ಕ್ಕೂ ಮೊದಲು ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ಭೂರಹಿತರು, ಸಣ್ಣ ರೈತರ ಜಮೀನುಗಳನ್ನು ಸಕ್ರಮಗೊಳಿಸಲು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 94 ಎ(4) ಅಡಿ ನಮೂನೆ 57ರ ಅಡಿ ಅರ್ಜಿ ಸಲ್ಲಿಸಲು 2018ರಲ್ಲಿ ಸರ್ಕಾರ ಮತ್ತೆ ಅವಕಾಶ ನೀಡಿತ್ತು. 8,57,640 ಅರ್ಜಿಗಳು ಸಲ್ಲಿಕೆಯಾಗಿವೆ. ಅರ್ಜಿ ಸಲ್ಲಿಕೆಯ ಅವಧಿಯನ್ನು ನಾಲ್ಕು ವರ್ಷಗಳಷ್ಟು ವಿಸ್ತರಿಸಿದ್ದು, ಸಾಗುವಳಿಗೆ ಸರ್ಕಾರವೇ ಉತ್ತೇಜನ ನೀಡಿದಂತಾಗಿತ್ತು.

ಈಗಾಗಲೇ ಬಹುತೇಕ ಸಾಮೂಹಿಕ ಭೂಮಿ ಕೃಷಿ ಭೂಮಿಯಾಗಿ ಪರಿವರ್ತನೆಯಾಗಿವೆ. 25 ಲಕ್ಷಕ್ಕೂ ಹೆಚ್ಚು ಕುಟುಂಬಗಳು ಸಾಗುವಳಿ ಮಾಡುತ್ತಿವೆ. ಮನೆ ಮತ್ತು ಗುಡಿಸಲು ನಿರ್ಮಿಸಿರುವವರು ನಮೂನೆ 94 ಸಿ (ಗ್ರಾಮೀಣ) ಮತ್ತು 94 ಸಿಸಿ (ನಗರ) ಅಡಿಯಲ್ಲಿ ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಪ್ರಕರಣ ಕೋರ್ಟ್ ಮೆಟ್ಟಿಲೇರಿದೆ. ಬಗರ್‌ಹುಕುಂ ಅಡಿ ಸಲ್ಲಿಕೆಯಾದ ಎಲ್ಲ ಅರ್ಜಿಗಳನ್ನೂ ಸರ್ಕಾರ ಇತ್ಯರ್ಥಗೊಳಿಸಿದರೆ ಕಂದಾಯ ಭೂಮಿ ಸಂಪೂರ್ಣ ಖಾಲಿಯಾಗಲಿದೆ. ಬಹುಶಃ ಸರ್ಕಾರಿ ಯೋಜನೆಗಳಿಗೂ ಭೂಮಿ ದೊರಕದಂತಾಗಲಿದೆ ಎಂದು ಉಪ ಸಮಿತಿ ಕಳವಳ ವ್ಯಕ್ತಪಡಿಸಿದೆ.

ರಾಜಸ್ಥಾನದ ಝುಂಝುನೂ, ಚುರು, ಸಿಕರ್ ಜಿಲ್ಲೆಗಳನ್ನು ಒಳಗೊಂಡ ಶೆಖಾವತಿ ಪ್ರದೇಶದಲ್ಲಿ ಅಸಮಾಧಾನ

ಬಿಜೆಪಿಗೆ ಸವಾಲಾಗಿ ಪರಿಣಮಿಸಿದ ಅಗ್ನಿಪಥ

ಝುಂಝುನೂ (ರಾಜಸ್ಥಾನ) (ಪಿಟಿಐ): ಸೈನಿಕರ ನೇಮಕಕ್ಕಾಗಿ ಜಾರಿಗೆ ತರಲಾಗಿರುವ ಅಗ್ನಿಪಥ ವ್ಯವಸ್ಥೆಯು ರಾಜಸ್ಥಾನದ ಶೆಖಾವತಿ ಪ್ರದೇಶದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

ಶೆಖಾವತಿ ಪ್ರದೇಶದಲ್ಲಿ ನೂರಾರು ಮಂದಿ ಯುವಕರು ನಸುಕಿನ 3.30ಕ್ಕೆ ಎದ್ದು, ಕೆಲವು ಕಿ.ಮೀ. ದೂರ ಓಡಿ ದೇಹವನ್ನು ದಂಡಿಸುವ ಅಭ್ಯಾಸ ಬೆಳೆಸಿಕೊಂಡಿದ್ದಾರೆ. ಸೈನ್ಯ ಸೇರುವ ಉದ್ದೇಶದಿಂದ ಈ ಅಭ್ಯಾಸ ಬೆಳೆಸಿಕೊಂಡಿರುವ ಇವರು ಅಗ್ನಿಪಥ ವ್ಯವಸ್ಥೆಯಿಂದಾಗಿ ನಿರಾಶರಾಗಿದ್ದಾರೆ.

ಸೇನೆ ಸೇರುವ ಬಯಕೆ ಇರುವವರು ಅಗ್ನಿಪಥ ಯೋಜನೆಯ ರಾಜಕೀಯ ಪರಿಣಾಮಗಳ ಬಗ್ಗೆ ತೀರಾ ಬಹಿರಂಗವಾಗಿ ಏನನ್ನೂ ಹೇಳುತ್ತಿಲ್ಲ. ಆದರೆ, ಸ್ಥಳೀಯರು ತಮ್ಮಲ್ಲಿ ಮಾತನಾಡಿಕೊಳ್ಳುತ್ತಿರುವುದನ್ನು ಗಮನಿಸಿದರೆ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಅತೃಪ್ತಿ ಇರುವುದು ಗೊತ್ತಾಗುತ್ತದೆ. ಬಿಜೆಪಿಯು ರಾಜಸ್ಥಾನದಲ್ಲಿ ಅಧಿಕಾರವನ್ನು ಕಾಂಗ್ರೆಸ್ಸಿನ ಕೈಯಿಂದ ಕಿತ್ತುಕೊಳ್ಳುವ ಬಯಕೆಯಲ್ಲಿದೆ.


ಸಾಂದರ್ಭಿಕ ಚಿತ್ರ

'ಅಗ್ನಿಪಥ ಯೋಜನೆಯ ವಿಚಾರವಾಗಿ ನಕಾರಾತ್ಮಕ ವಾತಾವರಣ ಇಲ್ಲ' ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಆದರೆ, ಈ ಯೋಜನೆ ವಿಚಾರವಾಗಿ ಎಲ್ಲವೂ ಸರಿಯಿಲ್ಲ, ಸೈನ್ಯ ಸೇರುವ ಬಯಕೆ ಹೊಂದಿರುವ ಹಲವರು, ನಿವೃತ್ತ ಯೋಧರು ಮತ್ತು ಸೇನೆಯಲ್ಲಿ ಈಗಲೂ ಸೇವೆ ಸಲ್ಲಿಸುತ್ತಿರುವ ಹಲವರು ಬೇಸರ ವ್ಯಕ್ತಪಡಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಹೇಳುತ್ತಿದೆ.

> **ಅಗ್ನಿಪಥ ಯೋಜನೆಯಿಂದಾಗಿ ಶೆಖಾವತಿ ಪ್ರದೇಶದಲ್ಲಿ ಭಾರಿ ಪರಿಣಾಮ ಆಗಿದೆ. ಇಲ್ಲಿನ ಜನ ಬಿಜೆಪಿಗೆ ತಕ್ಕ ಉತ್ತರ ನೀಡಲು ಸಿದ್ಧರಾಗಿದ್ದಾರೆ**
> **ದಿನೇಶ್ ಸುಂಡಾ,** ಕಾಂಗ್ರೆಸ್ ಮುಖಂಡ

> **ಅಗ್ನಿಪಥ ಯೋಜನೆಯ ವಿಚಾರವಾಗಿ ಯಾವುದೇ ನಕಾರಾತ್ಮಕತೆ ಇಲ್ಲ. ಯುವಕರು ಸಂತಸದಿಂದ ಇದ್ದಾರೆ**
> **ಪ್ರೇಮ್ ಸಿಂಗ್ ಬಜೋರ್**
> ಬಿಜೆಪಿ ಮುಖಂಡ

'ಸೇನಾ ನೇಮಕಾತಿ ರ‍್ಯಾಲಿಯಲ್ಲಿ ಪಾಲ್ಗೊಳ್ಳಲು ಬಹಳ ಕಷ್ಟಪಟ್ಟು ಸಿದ್ಧತೆ ನಡೆಸುತ್ತೇವೆ. ಕೆಲವರು ಐದರಿಂದ ಆರು ವರ್ಷ ಸಿದ್ಧತೆ ನಡೆಸುವುದೂ ಇದೆ. ಆದರೆ ಇಷ್ಟೆಲ್ಲ ಮಾಡುವುದು ಕೇವಲ ನಾಲ್ಕು ವರ್ಷಗಳ ಸೇವಾವಧಿ ಪೂರೈಸುವುದಕ್ಕೆ ಎಂಬುದು ನ್ಯಾಯಸಮ್ಮತ ಅಲ್ಲ' ಎಂದು ಪಿಟಿಐ ಜೊತೆ ಅನಿಸಿಕೆ ಹಂಚಿಕೊಂಡ ಹಲವರು ಹೇಳಿದ್ದಾರೆ.

'ನಾವು ಬೆಳಿಗ್ಗೆ 4 ಗಂಟೆಯಿಂದ ಕ್ರೀಡಾಂಗಣದಲ್ಲಿ ಓಡಲು ಶುರು ಮಾಡುತ್ತೇವೆ. ನಂತರ ಒಂದೂವರೆ ಗಂಟೆ ವ್ಯಾಯಾಮ ಮಾಡುತ್ತೇವೆ. ಸರ್ಕಾರದಿಂದ ನಿರೀಕ್ಷಿಸಲು ಇನ್ನೇನು ಉಳಿದಿದೆ? ಅದು ಅಗ್ನಿಪಥ ಯೋಜನೆಯನ್ನು ಜಾರಿ ಮಾಡಿ ಆಗಿದೆ. ನಮ್ಮಲ್ಲಿ ಕೆಲವರು ನಾಲ್ಕು ವರ್ಷ ಸಿದ್ಧತೆ ನಡೆಸಿರುತ್ತಾರೆ. ಇಷ್ಟು ವರ್ಷ ಸಿದ್ಧತೆ ನಡೆಸಿದರೆ ನಾಲ್ಕು ವರ್ಷ ಮಾತ್ರ ಸೇವಾವಧಿ ಸಿಗುತ್ತದೆ' ಎಂದು ದಿನೇಶ್ ಮೀಲ್ ಎನ್ನುವವರು ಹೇಳಿದರು.

ಚುರು, ಸಿಕರ್ ಮತ್ತು ಝುಂಝುನೂ ಜಿಲ್ಲೆಗಳನ್ನು ಒಗ್ಗೂಡಿಸಿ ಶೆಖಾವತಿ ಪ್ರದೇಶ ಎನ್ನಲಾಗುತ್ತದೆ. ಸೇನೆ ಸೇರಬೇಕು ಎಂಬ ಹಂಬಲ ಇಲ್ಲಿನ ಜನರಲ್ಲಿ ತೀವ್ರವಾಗಿರುವ ಕಾರಣಕ್ಕಾಗಿಯೇ ಈ ಪ್ರದೇಶಕ್ಕೆ ಖ್ಯಾತಿ ಬಂದಿದೆ. ಯುವಕರು ಕ್ರೀಡಾಂಗಣಗಳಲ್ಲಿ, ಹೊಲಗಳಲ್ಲಿ, ರಸ್ತೆಯ ಬದಿಯಲ್ಲಿ ನಸುಕಿನಲ್ಲಿ ಓಡುವುದು ಇಲ್ಲಿ ಸಾಮಾನ್ಯ.

'ಸೇನಾ ನೇಮಕಾತಿಗೆ ಸಿದ್ಧತೆ ನಡೆಸುವ ಯುವಕರ ಸಂಖ್ಯೆಯು ಗಮನಾರ್ಹ ಪ್ರಮಾಣದಲ್ಲಿ ಕಡಿಮೆ ಆಗಿದೆ. ಈ ಯೋಜನೆಯನ್ನು ಜಾರಿಗೆ ತಂದು ಸರ್ಕಾರವು ಯಾವ ಒಳಿತನ್ನೂ ಮಾಡಿಲ್ಲ. ಇದು ಮುಂಬರುವ ಚುನಾವಣೆಯಲ್ಲಿ ಪರಿಣಾಮ ಉಂಟುಮಾಡಲಿದೆ ಎಂಬುದು ನಮ್ಮ ಲೆಕ್ಕಾಚಾರ' ಎಂದು ಸ್ಥಳೀಯರೊಬ್ಬರು ಹೇಳಿದರು.

ಶಾಸಕರ ಅನರ್ಹತೆ ವಿವಾದ: ದೆಹಲಿಗೆ ನಾರ್ವೇಕರ್

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಸ್ಪೀಕರ್ ರಾಹುಲ್ ನಾರ್ವೇಕರ್ ಅವರು ಭಾನುವಾರ ನವದೆಹಲಿಗೆ ತೆರಳಿದ್ದು, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಜತೆ ಚರ್ಚೆ ನಡೆಸಿದ್ದಾರೆ ಎಂದು ಮೂಲಗಳು ಹೇಳಿವೆ.

ಶಿವಸೇನಾ ಪಕ್ಷ ವಿಭಜನೆಯ ನಂತರ ಎರಡೂ ಬಣಗಳು ಶಾಸಕರ ಅನರ್ಹತೆ ಕೋರಿ ಸ್ಪೀಕರ್‌ಗೆ ಸಲ್ಲಿಸಿರುವ ಅರ್ಜಿ ಮತ್ತು ಪ್ರತಿ ಅರ್ಜಿಗಳನ್ನು ಅ.30ರ ಒಳಗಾಗಿ ಇತ್ಯರ್ಥಪಡಿಸುವಂತೆ ಸ್ಪೀಕರ್ ರಾಹುಲ್ ನಾರ್ವೇಕರ್ ಅವರಿಗೆ ನಿರ್ದೇಶಿಸಿ ಸುಪ್ರೀಂ ಕೋರ್ಟ್ ಅ.17ರಂದು ಆದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಸ್ಪೀಕರ್ ನವದೆಹಲಿಗೆ ತೆರಳಿರುವುದು ಮಹತ್ವ ಪಡೆದುಕೊಂಡಿದೆ.

ರಾಷ್ಟ್ರ ರಾಜಧಾನಿಗೆ ತೆರಳುವ ವೇಳೆ ಮುಂಬೈ ವಿಮಾನ ನಿಲ್ದಾಣದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ನಾರ್ವೇಕರ್, 'ಇದು ದೆಹಲಿಗೆ ನಿಗದಿತ ಭೇಟಿಯಾಗಿದೆ. ಸಾಲಿಸಿಟರ್ ಜನರಲ್ (ಎಸ್‌ಜಿ) ಜತೆಗಿನ ಸಭೆ ಸೇರಿ ದೆಹಲಿಯಲ್ಲಿ ಒಂದೆರಡು ಸಭೆಗಳಲ್ಲಿ ಪಾಲ್ಗೊಳ್ಳುವೆ' ಎಂದು ತಿಳಿಸಿದರು.

'ಬಡವರಿಗೆ ₹10 ಲಕ್ಷದವರೆಗೆ ಉಚಿತ ಚಿಕಿತ್ಸೆ'

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭರವಸೆ • ಕೇಂದ್ರ ಸರ್ಕಾರದ ವಿರುದ್ಧ ಟೀಕೆ

ರಾಜನಂದಗಾಂವ್ (ಪಿಟಿಐ): ಛತ್ತೀಸಗಢದಲ್ಲಿ ಕಾಂಗ್ರೆಸ್ ಅಧಿಕಾರ ಉಳಿಸಿಕೊಂಡರೆ ಅಸ್ತಿತ್ವದಲ್ಲಿರುವ ಆರೋಗ್ಯ ನೆರವು ಯೋಜನೆಯ ಅಡಿ ಬಡವರಿಗೆ ₹10 ಲಕ್ಷದವರೆಗೆ ಉಚಿತವಾಗಿ ಆರೋಗ್ಯಸೇವೆ ನೀಡಲಾಗುವುದು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಭರವಸೆ ನೀಡಿದ್ದಾರೆ.

ರಾಜನಂದಗಾಂವ್ ಜಿಲ್ಲಾ ಕೇಂದ್ರದಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಭೂರಹಿತ ಕೃಷಿ ಕಾರ್ಮಿಕರಿಗೆ (ಗ್ರಾಮೀಣ ಪ್ರದೇಶಗಳಲ್ಲಿ) ವರ್ಷಕ್ಕೆ ₹10,000 ಸಹಾಯಧನ ನೀಡಲಾಗುವುದು ಎಂದರು. ಈಗ ವರ್ಷಕ್ಕೆ ₹7,000 ನೀಡಲಾಗುತ್ತಿದೆ. ಬಡವರು, ಕಾರ್ಮಿಕರು, ರೈತರು, ಹಿಂದುಳಿದ ವರ್ಗಗಳು, ಬುಡಕಟ್ಟು ಜನಾಂಗದವರು ಮತ್ತು ದಲಿತರಿಗಾಗಿ ಕಾಂಗ್ರೆಸ್ ಕೆಲಸ ಮಾಡುತ್ತದೆ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಅದಾನಿಯಂತಹ ಶತಕೋಟ್ಯಾಧಿಪತಿಗಳಿಗಾಗಿ ಕೆಲಸ ಮಾಡುತ್ತದೆ ಎಂದು ಟೀಕಿಸಿದರು.


ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೆಲ್ ಅವರು ಛತ್ತೀಸಗಢದಲ್ಲಿ ಗದ್ದೆಯೊಂದರಲ್ಲಿ ಕೆಲಸ ಮಾಡುತ್ತಿದ್ದವರ ಜೊತೆ... –ಪಿಟಿಐ ಚಿತ್ರ

'ಮುಖ್ಯಮಂತ್ರಿ ಭೂಪೇಶ್ ಬಘೆಲ್ ಮತ್ತು ನಾನು ರೈತರು ಮತ್ತು ಕಾರ್ಮಿಕರೊಂದಿಗೆ ಸಂವಾದ ನಡೆಸಿದೆವು. ರಾಜೀವ್ ಗಾಂಧಿ ಭೂಮಿಹೀನ್ ಕಿಸಾನ್ ನ್ಯಾಯ್ ಯೋಜನೆಯ ಅಡಿಯಲ್ಲಿ ನೀಡುತ್ತಿರುವ ₹7 ಸಾವಿರ ಸಹಾಯಧನ ಕಡಿಮೆ ಎಂಬ ಅಭಿಪ್ರಾಯ ಸಂವಾದದಲ್ಲಿ ವ್ಯಕ್ತವಾಯಿತು. ನಾವು ಚರ್ಚೆ ನಡೆಸಿ, ಅದನ್ನು ₹10 ಸಾವಿರಕ್ಕೆ ಹೆಚ್ಚಿಸಲು ನಿರ್ಧರಿಸಿದ್ದೇವೆ' ಎಂದು ಹೇಳಿದರು.

ಛತ್ತೀಸಗಢದಲ್ಲಿ ಸರ್ಕಾರ ರಚಿಸಿದ ದಿನದಿಂದಲೇ ಕಾಂಗ್ರೆಸ್ ಪಕ್ಷವು ಜಾತಿ ಗಣತಿಯ ಕೆಲಸ ಶುರು ಮಾಡಲಿದೆ. ಕರ್ನಾಟಕದಲ್ಲಿ ಮತ್ತು ರಾಜಸ್ಥಾನದಲ್ಲಿ ಪಕ್ಷವು ಈ ಕೆಲಸ ಮಾಡಿದೆ. ಜಾತಿ ಗಣತಿಯ ನಂತರದಲ್ಲಿ ಹಿಂದುಳಿದ ವರ್ಗಗಳು, ದಲಿತರು ಮತ್ತು ಆದಿವಾಸಿಗಳ ಹೊಸ ಅಧ್ಯಾಯವೊಂದನ್ನು ಬರೆಯಲಾಗುತ್ತದೆ ಎಂದಿದ್ದಾರೆ.

'ಕಾಂಗ್ರೆಸ್ ಆರೂ ಭರವಸೆ ಈಡೇರಿಸಲಿದೆ'

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಪಕ್ಷವು ಅಧಿಕಾರಕ್ಕೆ ಬಂದರೆ ತಾನು ನೀಡಿರುವ ಆರೂ ಭರವಸೆಗಳನ್ನು ಜಾರಿಗೆ ತರಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸಂಗಾರೆಡ್ಡಿ ಕ್ಷೇತ್ರದಲ್ಲಿ ಸಾರ್ವಜನಿಕ ಸಭೆಯಲ್ಲಿ ಮಾತನಾಡಿ, 'ಕಾಂಗ್ರೆಸ್ ಪಕ್ಷವು ಕರ್ನಾಟಕದ ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸಿದೆ' ಎಂದರು. ತೆಲಂಗಾಣದ ಆಡಳಿತಾರೂಢ ಬಿಆರ್‌ಎಸ್ ವಿರುದ್ಧ ಹರಿಹಾಯ್ದ ಖರ್ಗೆ, 'ನೀವು (ಬಿಆರ್‌ಎಸ್) ಮತಗಳಿಗಾಗಿ ಭರವಸೆ ನೀಡಿ, ನಂತರ ಹೊರಟು ಹೋಗುತ್ತೀರಿ' ಎಂದರು.

ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಕೆಸಿಆರ್ ನೇತೃತ್ವದ ಸರ್ಕಾರದಲ್ಲಿ ಯಾರಿಗೆ ಲಾಭವಾಗಿದೆ? ವಿದ್ಯಾರ್ಥಿಗಳು, ಮಹಿಳೆಯರು ಮತ್ತು ರೈತರು ಪ್ರಯೋಜನ ಪಡೆದಿದ್ದಾರೆಯೇ? ಅದಕ್ಕಾಗಿಯೇ ರಾಜ್ಯಕ್ಕೆ ಕಾಂಗ್ರೆಸ್ ಆರು ಭರವಸೆ ಗಳನ್ನು ನೀಡುತ್ತಿದೆ' ಎಂದು ಹೇಳಿದರು.

ಬಿಆರ್‌ಎಸ್ ಮತ್ತು ಬಿಜೆಪಿ ಒಟ್ಟಾಗಿ ಕೆಲಸ ಮಾಡುತ್ತಿವೆ ಎಂದು ಆರೋಪಿಸಿದ ಖರ್ಗೆ, '70 ವರ್ಷಗಳಲ್ಲಿ ಕಾಂಗ್ರೆಸ್ ಏನು ಮಾಡಿದೆ ಎಂದು ಬಿಜೆಪಿ ಮತ್ತು ಮೋದಿ ಪ್ರಶ್ನಿಸುತ್ತಾರೆ. ಅದರ 'ಬಿ' ಟೀಂ ಬಿಆರ್‌ಎಸ್ ಸಹ ಅದೇ ಮಾತನ್ನು ಹೇಳುತ್ತಿದೆ. ಇಬ್ಬರೂ ರಹಸ್ಯ ಒಪ್ಪಂದ ಮಾಡಿಕೊಂಡಿದ್ದಾರೆ ಮತ್ತು ಅವರಿಗೆ ಪ್ರಯೋಜನವಾಗುವ ಕೆಲಸಗಳನ್ನು ಮಾತ್ರ ಮಾಡುತ್ತಾರೆ' ಎಂದರು.

ಬಿಆರ್‌ಎಸ್ ಸರ್ಕಾರವು ತನ್ನ ಆಡಳಿತದ ಕೊನೆಯ ಒಂಬತ್ತು ವರ್ಷಗಳಲ್ಲಿ ತೆಲಂಗಾಣವನ್ನು ₹5 ಲಕ್ಷ ಕೋಟಿಗಿಂತ ಹೆಚ್ಚಿನ ಸಾಲದ ಬಲೆಗೆ ತಳ್ಳಿದೆ ಎಂದು ಅವರು ಆರೋಪಿಸಿದರು.


ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಛತ್ತೀಸಗಢದಲ್ಲಿ ಭಾನುವಾರ ಚುನಾವಣಾ ರ‍್ಯಾಲಿಯಲ್ಲಿ ಪಾಲ್ಗೊಂಡರು –ಪಿಟಿಐ ಚಿತ್ರ

'ಬಘೆಲ್ ಸರ್ಕಾರದಿಂದ ಭ್ರಷ್ಟಾಚಾರ'

ರಾಯಪುರ (ಪಿಟಿಐ): ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೆಲ್ ನೇತೃತ್ವದ ಸರ್ಕಾರವು ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು, ಅಧಿಕಾರದಲ್ಲಿ ಮುಂದುವರೆಯುವ ಹಕ್ಕು ಕಾಂಗ್ರೆಸ್ ಸರ್ಕಾರಕ್ಕೆ ಇಲ್ಲ ಎಂದು ಹೇಳಿದ್ದಾರೆ.

ರಾಯಪುರ ಗ್ರಾಮೀಣ ಕ್ಷೇತ್ರದಲ್ಲಿ ನಡೆದ 'ಬೂತ್ ವಿಜಯ ಸಂಕಲ್ಪ ಅಭಿಯಾನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರತಿ ಮನೆಗೂ ತೆರಳಿ ಮತ ಚಲಾಯಿಸುವಂತೆ ಜನರಿಗೆ ಮನವಿ ಮಾಡಬೇಕು ಎಂದು ಅವರು ಬಿಜೆಪಿ ಕಾರ್ಯಕರ್ತರಿಗೆ ಕರೆ ನೀಡಿದರು.

ಬಘೆಲ್ ನೇತೃತ್ವದ ಸರ್ಕಾರವು ಮದ್ಯ ನಿಷೇಧಿಸುವುದಾಗಿ ಹೇಳಿತ್ತು. ಆದರೆ, ನಿಷೇಧಿಸುವ ಬದಲು ಅಕ್ರಮ ಎಸಗಿತು. ಸರ್ಕಾರಿ ಹುದ್ದೆಗಳ ನೇಮಕಾತಿ ವಿಚಾರದಲ್ಲೂ ಹಗರಣ ನಡೆಸಿದೆ. ಗೋವು, ಸಗಣಿಯನ್ನೂ ಬಿಡದೇ ಹಗರಣ ನಡೆಸಿದೆ ಎಂದರು.

ಬಿಜೆಪಿ ನಾಯಕ ರಾಜೀನಾಮೆ

ಜಬಲಪುರ (ಪಿಟಿಐ): ಮಧ್ಯಪ್ರದೇಶದ ಜಬಲಪುರ ನಗರದ ಬಿಜೆಪಿ ಮುಖ್ಯಸ್ಥ ಪ್ರಭಾತ್ ಸಾಹು ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಬಿಜೆಪಿಯಿಂದ ಟಿಕೆಟ್ ನಿರಾಕರಣೆಗೊಳಗಾಗಿದ್ದ ಅಭ್ಯರ್ಥಿಯೊಬ್ಬರ ಬೆಂಬಲಿಗರು ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರ ಕಚೇರಿ ಎದುರು ಅಕ್ಟೋಬರ್ 21ರಂದು ಗಲಾಟೆ ಮಾಡಿದ್ದರು. ಅವರ ವಿರುದ್ಧ ಪಕ್ಷದ ನಾಯಕತ್ವವು ಯಾವುದೇ ಕ್ರಮ ಕೈಗೊಳ್ಳದ ಕಾರಣ ರಾಜೀನಾಮೆ ನೀಡಿರುವುದಾಗಿ ಸಾಹು ಅವರು ಹೇಳಿದ್ದಾರೆ.

'ಮನ್ ಕಿ ಬಾತ್' ಬಾನುಲಿ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಘೋಷಣೆ

ನಾಳೆ 'ಮೇರಾ ಯುವ ಭಾರತ್'ಗೆ ಚಾಲನೆ

ನವದೆಹಲಿ (ಪಿಟಿಐ): ರಾಷ್ಟ್ರ ನಿರ್ಮಾಣದ ವಿವಿಧ ಕಾರ್ಯಗಳಲ್ಲಿ ಮಹತ್ವದ ಪಾತ್ರ ವಹಿಸುವಂತೆ ಯುವಜನರಿಗೆ ಅವಕಾಶ ಕಲ್ಪಿಸುವ ಸಲುವಾಗಿ ಅ.31 ರಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜನ್ಮದಿನದಂದು ರಾಷ್ಟ್ರವ್ಯಾಪಿ 'ಮೇರಾ ಯುವ ಭಾರತ್' ವೇದಿಕೆ ಪ್ರಾರಂಭಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಘೋಷಿಸಿದ್ದಾರೆ.

'ಮನ್ ಕಿ ಬಾತ್' ಬಾನುಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಮೇರಾ ಯುವ ಭಾರತ್' ವೆಬ್‌ಸೈಟ್ ಸಹ ಪ್ರಾರಂಭಿಸಲಾಗುವುದು. ಯುವಕರು MYBharat.Gov.inನಲ್ಲಿ ನೋಂದಾಯಿಸಿಕೊಳ್ಳಬೇಕು ಎಂದು ಹೇಳಿದರು.

'ಮೈಭಾರತ್ ದೇಶದ ಯುವಕರಿಗೆ ರಾಷ್ಟ್ರ ನಿರ್ಮಾಣದ ವಿವಿಧ ಕಾರ್ಯಗಳಲ್ಲಿ ಸಕ್ರಿಯ ಪಾತ್ರ ವಹಿಸಲು ಅವಕಾಶ ಕಲ್ಪಿಸಲಿದೆ. ಇದು ಅಭಿವೃದ್ಧಿ ಹೊಂದಿದ ಭಾರತ ನಿರ್ಮಿಸುವಲ್ಲಿ ದೇಶದ ಯುವ ಶಕ್ತಿಯನ್ನು ಸಂಯೋಜಿಸುವ ಒಂದು ಅನನ್ಯ ಪ್ರಯತ್ನ' ಎಂದು ಪ್ರಧಾನಿ ಹೇಳಿದರು.

ಅ.31ರಂದು ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಪುಣ್ಯತಿಥಿ ಸಹ ಇದೆ ಎಂದು ಸ್ಮರಿಸಿದ ಮೋದಿ, ಇಂದಿರಾ ಗಾಂಧಿಯವರಿಗೆ 'ಮನ್ ಕಿ ಬಾತ್'ನಲ್ಲಿ ಶ್ರದ್ಧಾಂಜಲಿ ಸಲ್ಲಿಸಿದರು.

ಸ್ಥಳೀಯತೆಯನ್ನು ಉತ್ತೇಜಿಸುವ ತಮ್ಮ 'ವೋಕಲ್ ಫಾರ್ ಲೋಕಲ್' ಹೇಳಿಕೆ ಪುನರುಚ್ಚರಿಸಿದ ಮೋದಿ, 'ಪ್ರತಿ ಬಾರಿಯಂತೆ ಈ ಬಾರಿಯೂ ಹಬ್ಬ ಹರಿದಿನಗಳಲ್ಲಿ 'ವೋಕಲ್' ಫಾರ್ ಲೋಕಲ್‌ಗೆ ಆದ್ಯತೆ ನೀಡಬೇಕು. ನೀವು ಪ್ರವಾಸ ಅಥವಾ ತೀರ್ಥಯಾತ್ರೆಗೆ ಹೋದ ಕಡೆಗಳಲ್ಲೆಲ್ಲಾ ಸ್ಥಳೀಯ ಕುಶಲಕರ್ಮಿಗಳಿಂದ ತಯಾರಿಸಿದ ಉತ್ಪನ್ನಗಳು ಖರೀದಿಸಿ' ಎಂದು ಮನವಿ ಮಾಡಿದರು.

ಗಾಂಧಿ ಜಯಂತಿ ವೇಳೆ ಖಾದಿ ಉತ್ಪನ್ನಗಳು ದಾಖಲೆ ಪ್ರಮಾಣದಲ್ಲಿ ಮಾರಾಟವಾಗಿವೆ. ಕನಾಟ್‌ನ ಮಳಿಗೆಯೊಂದರಲ್ಲೇ ಒಂದೇ ದಿನದಲ್ಲಿ ₹1.25 ಕೋಟಿ ಮೊತ್ತದ ಉತ್ಪನ್ನಗಳು ಮಾರಾಟವಾಗಿವೆ. ಖಾದಿ ಉತ್ಪನ್ನಗಳ ಮಾರಾಟವು ಈ ಹಿಂದೆ ಕೇವಲ ₹30,000 ಕೋಟಿ ಇತ್ತು. ಈಗ ಅದು ಸುಮಾರು ₹1.25 ಲಕ್ಷ ಕೋಟಿಗೆ ಏರಿದೆ ಎಂದು ಅವರು ಹೇಳಿದರು.

ಬರುವ ದೀಪಾವಳಿ ಹಬ್ಬದಲ್ಲಿ ಸ್ಥಳೀಯ ಉತ್ಪನ್ನಗಳನ್ನು ಖರೀದಿಸುವುದರಿಂದ ಕುಶಲಕರ್ಮಿಗಳ ಜೀವನದಲ್ಲೂ ಹಬ್ಬದ ಹೊಳಪು ಕಾಣಿಸುತ್ತದೆ ಎಂದು ಮೋದಿ ಹೇಳಿದರು.

ಇದೇ ವೇಳೆ ಅವರು, ವಹಿವಾಟಿಗೆ ಯುಪಿಐ ಡಿಜಿಟಲ್ ಪಾವತಿ ವ್ಯವಸ್ಥೆಯನ್ನೇ ಬಳಸುವಂತೆ ಇತರರಿಗೂ ಸಲಹೆ ನೀಡಬೇಕೆಂದು ಜನತೆಯಲ್ಲಿ ಮನವಿ ಮಾಡಿದರು.

'ರಾಜಧಾನಿಯಲ್ಲಿ ಅಮೃತ ವಾಟಿಕಾ ನಿರ್ಮಾಣ'

ಸ್ವಾತಂತ್ರ್ಯದ ಅಮೃತ ಮಹೋತ್ಸವದ (ಆಜಾದಿ ಕಾ ಅಮೃತ ಮಹೋತ್ಸವ) ನಿಮಿತ್ತ ದೇಶದಾದ್ಯಂತ ಮಣ್ಣು ಸಂಗ್ರಹಿಸಲು ಅಮೃತ ಕಲಶ ಯಾತ್ರೆಗಳನ್ನು ಆಯೋಜಿಸಲಾಗಿತ್ತು. ಈ ಯಾತ್ರೆಗಳು ಇದೀಗ ದೆಹಲಿ ತಲುಪುತ್ತಿದ್ದು, ಸಂಗ್ರಹಿಸಿದ ಮಣ್ಣನ್ನು ಅಮೃತ ವಾಟಿಕಾ ನಿರ್ಮಾಣಕ್ಕೆ ಬಳಸಲಾಗುವುದು ಎಂದು ಮೋದಿ ತಿಳಿಸಿದರು.

ಕ್ರೀಡಾಪಟುಗಳಿಗೆ ಪ್ರಶಂಸೆ: ಬರ್ಲಿನ್‌ನಲ್ಲಿ ನಡೆದ ಒಲಿಂಪಿಕ್ಸ್ ವರ್ಲ್ಡ್ ಸಮ್ಮರ್ ಗೇಮ್ಸ್‌ನಲ್ಲಿ ಭಾರತವು 75 ಚಿನ್ನ ಸೇರಿ 200 ಕ್ಕೂ ಹೆಚ್ಚು ಪದಕಗಳನ್ನು ಗೆದ್ದಿರುವ ಬಗ್ಗೆ ಪ್ರಶಂಸಿಸಿದ ಮೋದಿ, ಅಂಗವಿಕಲರ ಕ್ರೀಡಾಕೂಟದಲ್ಲಿ ದೇಶದ ಹಲವು ಕ್ರೀಡಾಪಟುಗಳು ಅದ್ಭುತ ಪ್ರದರ್ಶನ ನೀಡಿದರು ಎಂದು ಶ್ಲಾಘಿಸಿದ್ದಾರೆ.

ಬಿರ್ಸಾ ಮುಂಡಾ ಸ್ಮರಿಸಿದ ಮೋದಿ: ಆದಿವಾಸಿ ಜನರ ಆರಾಧ್ಯ ನಾಯಕ ಬಿರ್ಸಾ ಮುಂಡಾ ಅವರಿಗೂ 'ಮನ್ ಕಿ ಬಾತ್'ನಲ್ಲಿ ಗೌರವ ನಮನ ಸಲ್ಲಿಸಿದ ಪ್ರಧಾನಿ, ನ.15 ರಂದು ಮುಂಡಾ ಅವರ ಜನ್ಮದಿನವನ್ನು 'ಜನಜಾತಿಯ ಗೌರವ ದಿವಸ'ವಾಗಿ ಆಚರಿಸಲಾಗುತ್ತದೆ. ಬುಡಕಟ್ಟು ಸಮಾಜಕ್ಕೆ ಸ್ಫೂರ್ತಿ ನೀಡಿದ ರಾಣಿ ದುರ್ಗಾವತಿ ಅವರ 500ನೇ ಜಯಂತಿಯನ್ನು ದೇಶವು ಪ್ರಸ್ತುತ ಆಚರಿಸುತ್ತಿದೆ ಎಂದು ತಿಳಿಸಿದರು.

'ವೇಸ್ಟ್ ಟು ವೆಲ್ತ್' ಸೃಷ್ಟಿಗೂ ಸಲಹೆ

ಗುಜರಾತಿನ ಪ್ರಸಿದ್ಧ ಯಾತ್ರಾಸ್ಥಳ ಅಂಬಾ ಜಿ ಮಂದಿರ ಉಲ್ಲೇಖಿಸಿದ ಪ್ರಧಾನಿ, ರದ್ದಿ ತುಣುಕುಗಳಿಂದ ಮಾಡಿದ ಶಿಲ್ಪಗಳು ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಗಮನ ಸೆಳೆಯುತ್ತವೆ. ಈ ಪ್ರತಿಮೆಗಳು ಭಕ್ತರ ಆಕರ್ಷಣೀಯ ಕೇಂದ್ರವೂ ಆಗಿವೆ ಎಂದರು. ತ್ಯಾಜ್ಯದಿಂದ ಕಲಾಕೃತಿಗಳನ್ನು ತಯಾರಿಸುವಲ್ಲಿ ಪ್ರಾವೀಣ್ಯತೆ ಸಾಧಿಸಿರುವವವರನ್ನು ಆಹ್ವಾನಿಸಿ, ಸ್ಪರ್ಧೆ ಆಯೋಜಿಸುವಂತೆ ಗುಜರಾತ್ ಸರ್ಕಾರಕ್ಕೆ ಸಲಹೆ ನೀಡಿದರು. ಇದು ದೇಶದಾದ್ಯಂತ 'ವೇಸ್ಟ್ ಟು ವೆಲ್ತ್ (ತ್ಯಾಜ್ಯದಿಂದ ಸಂಪತ್ತು)' ಅಭಿಯಾನಕ್ಕೆ ಜನರನ್ನು ಪ್ರೇರೇಪಿಸುತ್ತದೆ ಎಂದು ಅವರು ಹೇಳಿದರು.

ಚುನಾವಣಾ ಕಣ

ಮಧ್ಯಪ್ರದೇಶ: ಎಲ್ಲ ಕ್ಷೇತ್ರಗಳಿಗೂ ಅಭ್ಯರ್ಥಿ ಘೋಷಿಸಿದ ಬಿಜೆಪಿ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಗುನಾ ಮತ್ತು ವಿದಿಶಾ ವಿಧಾನಸಭಾ ಕ್ಷೇತ್ರಗಳಿಗೆ ತನ್ನ ಅಭ್ಯರ್ಥಿಗಳನ್ನು ಬಿಜೆಪಿ ಭಾನುವಾರ ಘೋಷಿಸಿದೆ. ಈ ಮೂಲಕ ರಾಜ್ಯದ ಎಲ್ಲ 230 ವಿಧಾನಸಭಾ ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಘೋಷಿಸಿದಂತಾಗಿದೆ.

ರಾಜ್ಯದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರ ಆಪ್ತ ಎಂದು ಗುರುತಿಸಿಕೊಂಡಿರುವ ಮುಖೇಶ್ ಟಂಡನ್ ಅವರಿಗೆ ವಿದಿಶಾ ಕ್ಷೇತ್ರದಿಂದ ಮತ್ತು ಪನ್ನಾಲಾಲ್ ಶಕ್ಯಾ ಅವರಿಗೆ ಗುನಾ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ.

ಕಣದಲ್ಲಿರುವುದು ಕೇವಲ ಎರಡು ಪಕ್ಷಗಳು: ದಿಗ್ವಿಜಯ್ ಸಿಂಗ್

ಭೋಪಾಲ್ (ಪಿಟಿಐ): 'ಮಧ್ಯಪ್ರದೇಶದ ಚುನಾವಣಾ ಕಣದಲ್ಲಿ ಇರುವುದು ಕೇವಲ ಎರಡು ರಾಜಕೀಯ ಪಕ್ಷಗಳು. ಕಾಂಗ್ರೆಸ್ ಅಥವಾ ಬಿಜೆಪಿ ಪೈಕಿ ಒಂದು ಪಕ್ಷ ಸರ್ಕಾರ ರಚಿಸುತ್ತದೆ. ಚಿಕ್ಕ ಪಕ್ಷಗಳು ಬೀಸುವ ಬಲೆಗೆ ಬೀಳಬೇಡಿ. ಅವು ಸರ್ಕಾರ ರಚಿಸುವುದಿಲ್ಲ' ಎಂದು ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಅವರು ರಾಜ್ಯದ ಮತದಾರರಿಗೆ ಭಾನುವಾರ ಕರೆ ನೀಡಿದ್ದಾರೆ.

'ಎಕ್ಸ್' ವೇದಿಕೆಯಲ್ಲಿ ಅವರು ಹೀಗೆ ಪೋಸ್ಟ್ ಮಾಡಿದ್ದಾರೆ. 'ಕಾಂಗ್ರೆಸ್‌ಗೆ ಜನರ ಬಲವಿದೆ. ಬಿಜೆಪಿಗೆ ದುಡ್ಡಿನ ಬಲವಿದೆ. ನಾವು ಒಗ್ಗೂಡಿ ಕೆಲಸ ಮಾಡಿ ಬಿಜೆಪಿಯನ್ನು ಮಣಿಸುತ್ತೇವೆ' ಎಂದಿದ್ದಾರೆ.

ಎಎಪಿ, ಸಮಾಜವಾದಿ ಪಕ್ಷ (ಎಸ್‌ಪಿ), ಬಹುಜನ ಸಮಾಜ ಪಕ್ಷ (ಬಿಎಸ್‌ಪಿ) ಮತ್ತು ಗೊಂಡವಾನಾ ಗಣತಂತ್ರ ಪಕ್ಷ (ಜಿಜಿಪಿ) ಸೇರಿ ಹಲವು ಪಕ್ಷಗಳು ಮಧ್ಯಪ್ರದೇಶ ಚುನಾವಣಾ ಕಣದಲ್ಲಿವೆ. ಎಸ್‌ಪಿ, ಬಿಎಸ್‌ಪಿ, ಜಿಜಿಪಿ ಪಕ್ಷಗಳು ಕಳೆದ ಚುನಾವಣೆಗಳಲ್ಲಿ ಕೆಲವು ಸ್ಥಾನಗಳನ್ನು ಗೆದ್ದಿವೆ.

'ಕಮಲ್ ನಾಥ್ ಜೊತೆ ಭಿನ್ನಾಭಿಪ್ರಾಯವಿಲ್ಲ'

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್ ನಾಥ್ ಅವರ ಜೊತೆ ತಮಗೆ ಭಿನ್ನಾಭಿಪ್ರಾಯ ಇರುವ ಕುರಿತ ವರದಿಗಳನ್ನು ಪಕ್ಷದ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಅವರು ತಳ್ಳಿಹಾಕಿದ್ದಾರೆ. ಈ ಬಗೆಯ ವರದಿಗಳು ಆಡಳಿತಾರೂಢ ಬಿಜೆಪಿಯ ಪ್ರಚಾರದ ಭಾಗ ಎಂದು ಹೇಳಿದ್ದಾರೆ.

ಕಮಲ್ ನಾಥ್ ಅವರ ಜೊತೆಗಿನ ಅಸಮಾಧಾನದ ಕಾರಣದಿಂದಾಗಿ ದಿಗ್ವಿಜಯ್ ಅವರು ಝಾಬುವಾ ಮತ್ತು ಖಾತೆಗಾಂವ್ ಕ್ಷೇತ್ರಗಳಿಗೆ ಭೇಟಿ ನೀಡುವುದನ್ನು ರದ್ದುಪಡಿಸಿದ್ದಾರೆ ಎಂದು ಹಲವು ಸುದ್ದಿ ಪತ್ರಿಕೆಗಳು ವರದಿ ಮಾಡಿದ್ದವು. ಈ ಹಿನ್ನೆಲೆಯಲ್ಲಿ ದಿಗ್ವಿಜಯ್ ಸಿಂಗ್ ಅವರು ಸ್ಪಷ್ಟನೆ ನೀಡಿದ್ದಾರೆ.

ಮುಖ್ಯಮಂತ್ರಿ ಗಾದಿಗೆ ಬಘೆಲ್ ಪ್ರಥಮ ಆಯ್ಕೆ: ಸಿಂಹದೇವ್

ನವದೆಹಲಿ (ಪಿಟಿಐ): 'ಛತ್ತೀಸಗಢದ ಕಾಂಗ್ರೆಸ್ ಘಟಕವು ಒಂದು ಕುಟುಂಬದಂತಿದೆ. ರಾಜ್ಯದಲ್ಲಿ ಪಕ್ಷ ಗೆದ್ದು ಸರ್ಕಾರ ರಚಿಸಿದರೆ, ಮುಖ್ಯಮಂತ್ರಿ ಸ್ಥಾನದ ಆಯ್ಕೆಯಲ್ಲಿ ಭೂಪೇಶ್ ಬಘೆಲ್ ಅವರೇ ಮೊದಲಿಗರಾಗುತ್ತಾರೆ' ಎಂದು ರಾಜ್ಯದ ಉಪ ಮುಖ್ಯಮಂತ್ರಿ ಸಿಂಹದೇವ್ ಅವರು ಭಾನುವಾರ ಹೇಳಿದ್ದಾರೆ.

ಸುದ್ದಿಸಂಸ್ಥೆಗೆ ಸಂದರ್ಶನ ನೀಡಿದ ಅವರು, 'ರಾಜ್ಯದಲ್ಲಿ ಕೇವಲ ಐದು ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರವು ಭಾರಿ ವೇಗದಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡಿದೆ. ಚುನಾವಣೆಯಲ್ಲಿ ಪಕ್ಷಕ್ಕೆ ಮೂರನೇ ಎರಡರಷ್ಟು ಬಹುಮತ ಬರದಿದ್ದರೆ ತಮಗೆ ಭಾರಿ ನಿರಾಸೆಯಾಗಲಿದೆ' ಎಂದು ಹೇಳಿದ್ದಾರೆ.

ಛತ್ತೀಸಗಢ ಸರ್ಕಾರವು ಭಾರಿ ಭ್ರಷ್ಟಾಚಾರ ನಡೆಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಾಡಿರುವ ಆರೋಪದ ಕುರಿತು ಪ್ರತಿಕ್ರಿಯಿಸಿರುವ ಅವರು, 'ರಾಜ್ಯ ಸರ್ಕಾರವು ಭ್ರಷ್ಟಾಚಾರದಲ್ಲಿ ತೊಡಗಿದ್ದರೆ ಆ ಕುರಿತು ಕ್ರಮ ಕೈಗೊಳ್ಳಲು ಪ್ರಧಾನಿಗೆ ಅವಕಾಶವಿದೆ. ಆದರೆ ಪ್ರಧಾನಿ ಅಥವಾ ಕೇಂದ್ರ ಗೃಹ ಸಚಿವರು ಆರೋಪಗಳನ್ನು ಮಾಡುವುದು ಸರಿಯಲ್ಲ' ಎಂದಿದ್ದಾರೆ. ಬಘೆಲ್ ಮತ್ತು ಸಿಂಹದೇವ್ ಅವರು ಅಧಿಕಾರಾವಧಿಯನ್ನು ಎರಡೂವರೆ ವರ್ಷಗಳಂತೆ ಹಂಚಿಕೊಳ್ಳಬೇಕು ಎಂದು ಒತ್ತಡವು ಇಬ್ಬರ ಬೆಂಬಲಿಗರಿಂದಲೂ ಇದೆ ಎನ್ನಲಾಗಿದೆ.

'ಕಾಂಗ್ರೆಸ್ ವೈಫಲ್ಯ ತಿಳಿಯಲು ಕರ್ನಾಟಕಕ್ಕೆ ಹೋಗಬೇಕಿಲ್ಲ'

ಹೈದರಾಬಾದ್ (ಪಿಟಿಐ): 'ಕರ್ನಾಟಕದ ಕಾಂಗ್ರೆಸ್ ಆಡಳಿತದ ವೈಫಲ್ಯವನ್ನು ತಿಳಿಯಲು ಅಲ್ಲಿಗೇ ಹೋಗಬೇಕಿಲ್ಲ' ಎಂದು ಬಿಆರ್‌ಎಸ್ ಕಾರ್ಯಕಾರಿ ಅಧ್ಯಕ್ಷ ಕೆ.ಟಿ. ರಾಮರಾವ್ ಹೇಳಿದ್ದಾರೆ.

ತೆಲಂಗಾಣದಲ್ಲಿ ಕಾಂಗ್ರೆಸ್ ಪರ ಪ್ರಚಾರ ನಡೆಸಿದ ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಕರ್ನಾಟಕದಲ್ಲಿ ಚುನಾವಣೆಗೂ ಮೊದಲು ನೀಡಿದ್ದ ಭರವಸೆಗಳನ್ನು ಕಾಂಗ್ರೆಸ್ ಪಕ್ಷವು ಯಶಸ್ವಿಯಾಗಿ ಜಾರಿ ಮಾಡಿರುವ ಕುರಿತು ತಿಳಿಯಲು ರಾಜ್ಯಕ್ಕೆ ಬರುವಂತೆ ಮತದಾರರಿಗೆ ಆಹ್ವಾನ ನೀಡಿದ್ದರು. 'ಕಾಂಗ್ರೆಸ್ ನೇತೃತ್ವದ ಸರ್ಕಾರದಿಂದ ಮೋಸಕ್ಕೆ ಈಡಾದ ಕರ್ನಾಟಕದ ರೈತರು ಇಲ್ಲಿಗೆ ಬಂದು ನಿಮ್ಮ ಸರ್ಕಾರದ ವಂಚನೆ ಕುರಿತು ಮಾತನಾಡಿದ್ದಾರೆ. ಕಾಂಗ್ರೆಸ್ ತಂದೊಡ್ಡುವ ಕೆಡುಕುಗಳ ಕುರಿತು ಅವರೇ ತೆಲಂಗಾಣದ ಜನರನ್ನು ಎಚ್ಚರಿಸಿದ್ದಾರೆ' ಎಂದು ರಾಮರಾವ್ ಹೇಳಿದ್ದಾರೆ.

ತೆಲಂಗಾಣದಲ್ಲಿ ಮೋದಿ ಪ್ರಚಾರ

ಹೈದರಾಬಾದ್ (ಪಿಟಿಐ): ತೆಲಂಗಾಣದಲ್ಲಿ ಬಿಜೆಪಿಯು ನವೆಂಬರ್ 3ರಿಂದ ಪ್ರಚಾರಕಾರ್ಯ ಚುರುಕುಗೊಳಿಸಲಿದೆ. ಪ್ರಧಾನಿ ನರೇಂದ್ರ ಮೋದಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹಾಗೂ ರಾಜನಾಥ ಸಿಂಗ್, ಅಮಿತ್ ಶಾ, ನಿತಿನ್ ಗಡ್ಕರಿ ಸೇರಿ ಹಲವು ಕೇಂದ್ರ ಸಚಿವರು ರಾಜ್ಯದಲ್ಲಿ ಪ್ರಚಾರ ರ‍್ಯಾಲಿ ನಡೆಸಲಿದ್ದಾರೆ ಎಂದು ಪಕ್ಷದ ರಾಜ್ಯ ಘಟಕ ಅಧ್ಯಕ್ಷ ಜಿ. ಕೃಷ್ಣ ರೆಡ್ಡಿ ಭಾನುವಾರ ತಿಳಿಸಿದರು.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿಯನ್ನು ಮುಖ್ಯಮಂತ್ರಿಯನ್ನಾಗಿಸುವ ಐತಿಹಾಸಿಕ ನಿರ್ಧಾರ ತೆಗೆದುಕೊಳ್ಳಲಿದೆ. ಜೊತೆಗೆ, ಮುಸ್ಲಿಮರಿಗೆ ನೀಡಿರುವ ಮೀಸಲಾತಿಯನ್ನು ಹಿಂಪಡೆದು ಪರಿಶಿಷ್ಟ ವರ್ಗಗಳು, ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಮೀಸಲಾತಿಯನ್ನು ಹೆಚ್ಚಿಸಲಾಗುವುದು ಎಂದು ಕೃಷ್ಣ ರೆಡ್ಡಿ ತಿಳಿಸಿದರು.

ಮರಾಠ ಮೀಸಲಾತಿ: ಇಂದು ಉನ್ನತ ಮಟ್ಟದ ಸಭೆ

ಮುಂಬೈ: ಮರಾಠ ಸಮುದಾಯಕ್ಕೆ ಮೀಸಲಾತಿಗೆ ಒತ್ತಾಯಿಸಿ ಉಪವಾಸ ಸತ್ಯಾಗ್ರಹ ಕೈಗೊಂಡಿರುವ ಜಲ್ನಾ ಮೂಲದ ಹೋರಾಟಗಾರ ಮನೋಜ್ ಜರಾಂಗೆ ಪಾಟೀಲ ಅವರ ಆರೋಗ್ಯ ಸ್ಥಿತಿ ಹದಗೆಡುತ್ತಿದ್ದು, ಈ ಕಾರಣದಿಂದಾಗಿ ಉದ್ಭವಿಸಬಹುದಾದ ಪರಿಸ್ಥಿತಿ ಈ ಕುರಿತು ಚರ್ಚಿಸಲು ಮಹಾರಾಷ್ಟ್ರ ಸರ್ಕಾರವು ಸೋಮವಾರ ಉನ್ನತ ಮಟ್ಟದ ತುರ್ತು ಸಭೆ ಕರೆದಿದೆ.

ಮರಾಠ ಸಮುದಾಯದ ಮೀಸಲಾತಿಗಾಗಿ ಅಕ್ಟೋಬರ್‌ನಲ್ಲಿ ಜರಾಂಗೆ ಪಾಟೀಲ ಅವರ ಕೈಗೊಂಡಿರುವ ಆಮರಣಾಂತ ಉಪವಾಸ ಸತ್ಯಾಗ್ರಹ ಭಾನುವಾರ 5ನೇ ದಿನಕ್ಕೆ ಕಾಲಿಟ್ಟಿದ್ದು, ಅವರ ಆರೋಗ್ಯ ಹದಗೆಡುತ್ತಿದೆ. ಆದರೆ, ಸರ್ಕಾರಿ ವೈದ್ಯರಿಂದ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಲು ಅವರು ನಿರಾಕರಿಸುತ್ತಿದ್ದಾರೆ. ಇವರಿಗೆ ಬೆಂಬಲ ವ್ಯಕ್ತಪಡಿಸಿ ರಾಜ್ಯದ ಇತರೆ ಭಾಗಗಳಲ್ಲೂ ಹಲವರು ಉಪವಾಸ ಮತ್ತು ಪ್ರತಿಭಟನೆ ನಡೆಸುತ್ತಿದ್ದಾರೆ. ಇದರಿಂದಾಗಿ ಸರ್ಕಾರವು ತುರ್ತು ಸಭೆ ಕರೆದಿದೆ ಎನ್ನಲಾಗಿದೆ.

ಗಾಜಾಪಟ್ಟಿ: ಶಾಂತಿಗೆ ಪ್ರಧಾನಿ ಮೋದಿ ಸಹಮತ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ಆದಷ್ಟು ಶೀಘ್ರವಾಗಿ ಶಾಂತಿ ಸ್ಥಾಪಿಸುವ ಅಗತ್ಯವಿದೆ ಎಂಬ ವಿಚಾರದಲ್ಲಿ ಭಾರತವು ಈಜಿಪ್ಟ್ ಜೊತೆ ಸಹಮತ ಹೊಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಗಾಜಾ ಪಟ್ಟಿಯಲ್ಲಿ ಮಾನವೀಯ ನೆಲೆಯಲ್ಲಿ ಕದನ ವಿರಾಮ ಘೋಷಿಸಬೇಕು ಎಂಬ ನಿರ್ಣಯಕ್ಕೆ ವಿಶ್ವಸಂಸ್ಥೆಯಲ್ಲಿ ಬೆಂಬಲ ವ್ಯಕ್ತಪಡಿಸದ ಕಾರಣಕ್ಕೆ ಕೇಂದ್ರವು ವಿರೋಧ ಪಕ್ಷಗಳ ಆಕ್ರೋಶಕ್ಕೆ ಗುರಿಯಾಗಿದೆ.

'ಭಯೋತ್ಪಾದನೆ, ಹಿಂಸಾಚಾರ ಮತ್ತು ನಾಗರಿಕರ ಜೀವ ಹಾನಿಯ ವಿಚಾರದಲ್ಲಿ ನಾವು ಸಮಾನ ಕಳವಳ ಹೊಂದಿದ್ದೇವೆ' ಎಂದು ಮೋದಿ ಅವರು, ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತಾ ಎಲ್–ಸಿಸಿ ಅವರ ಜೊತೆ ಶನಿವಾರ ನಡೆಸಿದ ಮಾತುಕತೆಯನ್ನು ಉಲ್ಲೇಖಿಸಿ 'ಎಕ್ಸ್' ವೇದಿಕೆಯಲ್ಲಿ ಬರೆದಿದ್ದಾರೆ.

ವಿಶ್ವಸಂಸ್ಥೆಯ ಮಹಾಸಭೆಯ ನಿರ್ಣಯದ ಮೇಲಿನ ಮತದಾನದಿಂದ ಭಾರತವು ದೂರ ಉಳಿದಿತ್ತು. ಇದಾದ ನಂತರ ಮೋದಿ ಅವರು ಸಿಸಿ ಅವರ ಜೊತೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು. ಮತದಾನದಿಂದ ದೂರ ಉಳಿಯುವ ಭಾರತದ ತೀರ್ಮಾನದಿಂದಾಗಿ ಅಸಮಾಧಾನಗೊಂಡಿರುವ ಅರಬ್ ನಾಯಕರನ್ನು ಮತ್ತೆ ವಿಶ್ವಾಸಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದ ಮೋದಿ ಅವರು ಸಿಸಿ ಅವರಿಗೆ ಕರೆ ಮಾಡಿದ್ದರು ಎನ್ನಲಾಗಿದೆ.

ಪ್ಯಾಲೆಸ್ಟೀನ್ ವಿಚಾರದಲ್ಲಿ ಭಾರತವು ಹಿಂದಿನಿಂದಲೂ ತಾಳಿರುವ, ನೈತಿಕ ನೆಲೆಗಟ್ಟಿನ ನಿಲುವನ್ನು ಮೋದಿ ಅವರು ಸಿಸಿ ಅವರಲ್ಲಿ ಪುನರುಚ್ಚರಿಸಿದ್ದಾರೆ.

ಗಾಜಾ ಜನರಲ್ಲಿ ಹತಾಶೆ: ವಿಶ್ವಸಂಸ್ಥೆಯ ನೆರವು ಏಜೆನ್ಸಿಯ ಪ್ರತಿನಿಧಿ ಹೇಳಿಕೆ

ವಿಶ್ವಸಂಸ್ಥೆಯ ಗೋದಾಮು ಲೂಟಿ



ಗಾಜಾ ಪಟ್ಟಿ (ಎಪಿ): ಹಿಟ್ಟು ಹಾಗೂ ನೈರ್ಮಲ್ಯ ಕಾಪಾಡಿಕೊಳ್ಳಲು ಬಳಸುವ ಕೆಲವು ಅಗತ್ಯ ವಸ್ತುಗಳನ್ನು ಪಡೆದುಕೊಳ್ಳಲು ಗಾಜಾದಲ್ಲಿ ಜನರು ವಿಶ್ವಸಂಸ್ಥೆಯ ಗೋದಾಮಿಗೆ ನುಗ್ಗಿದ್ದಾರೆ. ಇಲ್ಲಿನ ಜನರು ಹತಾಶರಾಗುತ್ತಿರುವುದನ್ನು ಇದು ಸೂಚಿಸುತ್ತಿದೆ.

ಕಳೆದ ಒಂದು ದಿನದಲ್ಲಿ ಹಮಾಸ್ ಬಂಡುಕೋರರಿಗೆ ಸೇರಿದ 450ಕ್ಕೂ ಹೆಚ್ಚಿನ ಸ್ಥಳಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಮಿಲಿಟರಿ ತಿಳಿಸಿದೆ. ಭಾನುವಾರ ಕೂಡ ಇಸ್ರೇಲ್ ಭೂದಾಳಿ ಮುಂದುವರಿಸಿದೆ.

'ಜನರು ಹತಾಶರಾಗಿದ್ದಾರೆ, ಭೀತರಾಗಿದ್ದಾರೆ. ಗೋದಾಮಿಗೆ ನುಗ್ಗಿ ಅಗತ್ಯ ವಸ್ತುಗಳನ್ನು ಕೊಂಡೊಯ್ದಿರುವ ಪ್ರಸಂಗವು ಇಲ್ಲಿನ ನಾಗರಿಕ ವ್ಯವಸ್ಥೆಯು ಕುಸಿದುಬೀಳಲು ಶುರುವಾಗಿದೆ ಎಂಬುದನ್ನು ತೋರಿಸುತ್ತಿದೆ' ಎಂದು ವಿಶ್ವಸಂಸ್ಥೆಯ ನೆರವು ಏಜೆನ್ಸಿಯ ಪ್ರತಿನಿಧಿಯೊಬ್ಬರು ಹೇಳಿದ್ದಾರೆ.

ಈಜಿಪ್ಟ್‌ಗೆ ಹೊಂದಿಕೊಂಡಿರುವ ಗಡಿಯ ಮೂಲಕ ಬಂದ ಕೆಲವು ಅಗತ್ಯ ವಸ್ತುಗಳನ್ನು ಸಂಗ್ರಹಿಸಿ ಇರಿಸಿದ್ದ ಗೋದಾಮಿಗೆ ಜನ ನುಗ್ಗಿ, ವಸ್ತುಗಳನ್ನು ಹೊತ್ತೊಯ್ದಿದ್ದಾರೆ.

ಗಾಜಾ ನಗರದಲ್ಲಿ ಇರುವ ಕೆಲವು ಆಸ್ಪತ್ರೆಗಳು ತಮ್ಮಲ್ಲಿರುವ ನಿರಾಶ್ರಿತರನ್ನು, ರೋಗಿಗಳನ್ನು ಬೇರೆಡೆ ಕಳುಹಿಸಬೇಕು ಎಂದು ಇಸ್ರೇಲ್ ಭಾನುವಾರ ತಿಳಿಸಿದೆ ಎಂದು ಪ್ಯಾಲೆಸ್ಟೀನ್ ರೆಡ್ ಕ್ರೆಸೆಂಟ್ ಸಂಸ್ಥೆ ಹೇಳಿದೆ. ಆದರೆ ಸ್ಥಳಾಂತರಕ್ಕೆ ಆಸ್ಪತ್ರೆಗಳು ಒಪ್ಪುತ್ತಿಲ್ಲ.

ಬಿಡುಗಡೆಗೆ ಹೆಚ್ಚಿದ ಒತ್ತಡ: ಹಮಾಸ್ ಬಂಡುಕೋರರ ವಶದಲ್ಲಿ ಇರುವ ಒತ್ತೆಯಾಳುಗಳನ್ನು ಸುರಕ್ಷಿತವಾಗಿ ಮರಳಿ ಕರೆತರಬೇಕು ಎಂದು ಇಸ್ರೇಲ್ ಸರ್ಕಾರದ ಮೇಲೆ ಒತ್ತಡ ಹೆಚ್ಚಾಗುತ್ತಿದೆ.

ಹಮಾಸ್‌ನ ಪ್ರಮುಖ ನಾಯಕ ಯಾಹ್ಯಾ ಸಿನ್ವರ್, 'ಇಸ್ರೇಲ್ ತನ್ನ ಜೈಲುಗಳಲ್ಲಿರುವ ಸಹಸ್ರಾರು ಮಂದಿ ಪ್ಯಾಲೆಸ್ಟೀನಿಯನ್ನರನ್ನು ಬಿಡುಗಡೆ ಮಾಡಿದರೆ, ಇಸ್ರೇಲ್ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲು ಸಿದ್ಧರಿದ್ದೇವೆ' ಎಂದು ಹೇಳಿದ್ದಾರೆ. ಆದರೆ ಈ ಪ್ರಸ್ತಾವಕ್ಕೆ ಇಸ್ರೇಲ್ ಒಪ್ಪಿಲ್ಲ.


ವಿಶ್ವಸಂಸ್ಥೆಯ ನೆರವು ಸಾಮಗ್ರಿಗಳ ಸಂಗ್ರಹಾಗಾರದಿಂದ ಅಗತ್ಯ ವಸ್ತುಗಳನ್ನು ಪ್ಯಾಲೆಸ್ಟೀನ್ ನಾಗರಿಕರು ಹೊತ್ತೊಯ್ದರು –ಎಎಫ್‌ಪಿ ಚಿತ್ರ

ಭೂದಾಳಿಯ ವ್ಯಾಪ್ತಿಯನ್ನು ಹಿಗ್ಗಿಸುತ್ತಿರುವ ಕಾರಣ ಒತ್ತೆಯಾಳುಗಳನ್ನು ಬಿಡಿಸಿಕೊಂಡುವ ಬರಲು ಸಾಧ್ಯವಾಗುತ್ತದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ. 'ಹಮಾಸ್‌ನ ಮಿಲಿಟರಿ ಮತ್ತು ಆಡಳಿತವನ್ನು ನಾಶಮಾಡಿ, ಒತ್ತೆಯಾಳುಗಳನ್ನು ವಾಪಸ್ ಕರೆತರುವ ಉದ್ದೇಶದ ಎರಡನೆಯ ಹಂತದ ಯುದ್ಧ ಇದು' ಎಂದು ನೆತನ್ಯಾಹು ಹೇಳಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸದ್ಯಕ್ಕೆ ನಿಮ್ಮ ಬಳಿ ಇರುವುದನ್ನು ಗೌರವಿಸಲು ನೀವು ವಿಫಲರಾದರೆ, ಸಂತೋಷ ಎಂದಿಗೂ ನಿಮ್ಮ ಬಳಿ ಬರುವುದಿಲ್ಲ.

–ಗೌತಮ ಬುದ್ಧ

'ಇಂಡಿಯಾ' ಮತ್ತು 'ಭಾರತ' ಮಕ್ಕಳ ಮೇಲೆ ಹೇರಿಕೆ ಬೇಡ

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿಯ (ಎನ್‌ಸಿಇಆರ್‌ಟಿ) ಕೆಲಸ ಸಂಶೋಧನೆಗಳನ್ನು ಕೈಗೊಳ್ಳುವುದು ಹಾಗೂ ಸೂಕ್ತವಾದ ಪಾಠವನ್ನು ರೂಪಿಸುವುದು. ಆದರೆ ಭಾರತವೆಂಬ ಹೆಸರಿನ ದೇಶವನ್ನು, 'ಭಾರತ' ಎಂದು ಕರೆಯಬೇಕೇ 'ಇಂಡಿಯಾ' ಎಂದು ಕರೆಯಬೇಕೇ ಎಂಬ ವಿಚಾರದಲ್ಲಿ ಮಂಡಳಿಯು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ರಾಜಕೀಯಪ್ರೇರಿತ ನಡೆಯಿಂದ ಪ್ರೇರಣೆ ಪಡೆದಿರುವಂತೆ ಕಾಣುತ್ತಿದೆ. ಮೋದಿ ನೇತೃತ್ವದ ಸರ್ಕಾರವು ಈಚೆಗೆ ದೇಶದಲ್ಲಿ ನಡೆದ ಜಿ20 ಶೃಂಗದ ಸಂದರ್ಭದಲ್ಲಿ, ರಾಜಕೀಯ ಉದ್ದೇಶಗಳಿಂದಾಗಿ, ಅಧಿಕೃತ ಸಂವಹನಗಳಲ್ಲಿ 'ಇಂಡಿಯಾ' ಬದಲು 'ಭಾರತ' ಪದವನ್ನು ಬಳಸಿತ್ತು. ಆದರೆ, ಸಂವಿಧಾನದಲ್ಲಿ ಹೇಳಿರುವ 'ಇಂಡಿಯಾ, ಅಂದರೆ ಭಾರತ' ಎಂಬುದಕ್ಕೆ ತನ್ನ ಬದ್ಧತೆ ಇದೆ ಎಂಬ ನಿಲುವನ್ನು ಕೇಂದ್ರವು ನಂತರದಲ್ಲಿ ವ್ಯಕ್ತಪಡಿಸಿದೆ. ಹೀಗಿದ್ದರೂ, ಮಂಡಳಿಯು ರಚಿಸಿದ್ದ ಸಮಿತಿಯೊಂದು ಶಾಲೆಯ ಪಠ್ಯಪುಸ್ತಕಗಳಲ್ಲಿ 'ಇಂಡಿಯಾ' ಪದದ ಬದಲಿಗೆ 'ಭಾರತ' ಪದವನ್ನು ಬಳಸಬೇಕು ಎಂದು ಶಿಫಾರಸು ಮಾಡಿದೆ. ಎನ್‌ಸಿಇಆರ್‌ಟಿಯ 2022ನೇ ಸಾಲಿನ ಸಮಾಜವಿಜ್ಞಾನ ಸಮಿತಿಯ ಅಧ್ಯಕ್ಷ ಪ್ರೊ. ಸಿ.ಐ.ಐಸಕ್ ಅವರು, ಮುಂದಿನ ಶೈಕ್ಷಣಿಕ ವರ್ಷದಿಂದ ಶಿಫಾರಸುಗಳು ಜಾರಿಗೆ ಬರುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ. ಎಲ್ಲ ವಿಷಯಗಳ ಪಠ್ಯಕ್ರಮದಲ್ಲಿ ಭಾರತೀಯ ಜ್ಞಾನ ವ್ಯವಸ್ಥೆಯನ್ನು (ಐಕೆಎಸ್) ಅಳವಡಿಸಬೇಕು ಎಂದು ಕೂಡ ಸಮಿತಿಯು ಶಿಫಾರಸು ಮಾಡಿದೆ. ಭಾರತದ 'ಪುರಾತನ ಇತಿಹಾಸ'ದ ಬದಲು 'ಶಾಸ್ತ್ರೀಯ ಇತಿಹಾಸ'ವನ್ನು ಅಳವಡಿಸಬೇಕು ಎಂಬುದು ಶಿಫಾರಸಿನ ಒಂದು ಭಾಗ. ಹಿಂದುತ್ವದ ಕಡೆ ಒಲವು ಹೊಂದಿರುವ ಪ್ರೊ. ಐಸಕ್ ಅವರು, ಸಮಿತಿಯು ಸರ್ಕಾರದಿಂದ ಪ್ರಭಾವಿತ ಆಗಿಲ್ಲ ಎಂದು ಹೇಳಿದ್ದಾರೆ. ಆದರೆ ಇಂತಹ ಶಿಫಾರಸುಗಳು ಯಾರ ಪ್ರಭಾವವೂ ಇಲ್ಲದೆ ಜೀವ ಪಡೆದುಕೊಳ್ಳುವುದಿಲ್ಲ ಎಂಬುದು ಗೊತ್ತಿರುವ ಸಂಗತಿಯೇ.



ಒಂದು ಹೆಸರನ್ನು ಕೈಬಿಟ್ಟು, ಇನ್ನೊಂದು ಹೆಸರಿಗೆ ಉತ್ತೇಜನ ನೀಡುವುದು ಸರಿಯಾದ ನಡೆ ಅಲ್ಲ

'ಭಾರತ' ಪದವನ್ನು ವ್ಯಾಪಕವಾಗಿ ಬಳಕೆ ಮಾಡಲು ಕೇಂದ್ರ ಸರ್ಕಾರವು ಈಚಿನ ದಿನಗಳಲ್ಲಿ ಯತ್ನಿಸಿದೆ. 'ಭಾರತ' ಎಂಬುದು ಈ ದೇಶದ ಮೂಲ ಹೆಸರು, 'ಇಂಡಿಯಾ' ಎಂಬುದು ವಸಾಹತುಶಾಹಿ ಕಾಲದ ಪದ ಎಂಬ ವಾದವನ್ನು ಅದು ಜನರ ಮುಂದಿರಿಸಿದೆ. ರಾಷ್ಟ್ರಪತಿಯವರು ರವಾನಿಸುವ ಆಹ್ವಾನ ಪತ್ರಿಕೆಗಳಲ್ಲಿ 'ಪ್ರೆಸಿಡೆಂಟ್ ಆಫ್ ಇಂಡಿಯಾ' ಎಂದು ಉಲ್ಲೇಖಿಸುವುದು ವಾಡಿಕೆ. ಆದರೆ ಈಚೆಗೆ ದೇಶದಲ್ಲಿ ನಡೆದ ಜಿ20 ಶೃಂಗಸಭೆಗೆ ಸಂಬಂಧಿಸಿದ ಔತಣಕೂಟದ ಆಹ್ವಾನ ಪತ್ರಿಕೆಯಲ್ಲಿ 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ಬರೆಯಲಾಗಿತ್ತು. ಅದಾದ ನಂತರದಲ್ಲಿ, ಬೇರೆ ಕೆಲವು ಸಂದರ್ಭಗಳಲ್ಲಿಯೂ 'ಭಾರತ' ಪದವನ್ನು ಕೇಂದ್ರವು ಬಳಸಿದೆ. ತಾನು ಹೆಚ್ಚು ಬಯಸುವ ಹಾಗೂ ದೇಶದ ಅಧಿಕೃತವಾದ ಹೆಸರು ಇದು ಎಂಬ ಚಿತ್ರಣವನ್ನು ನೀಡಲು ಕೂಡ ಕೇಂದ್ರವು ಯತ್ನಿಸಿದೆ. ದೇಶದ 'ನಿಜವಾದ' ಹಾಗೂ 'ಅಧಿಕೃತವಾದ' ಪ್ರತಿನಿಧಿ ತಾನು ಎಂದು ಬಿಂಬಿಸಿಕೊಂಡು, ಅದರ ರಾಜಕೀಯ ಲಾಭವನ್ನು ಪಡೆದುಕೊಳ್ಳುವುದು ಈ ಯತ್ನದ ಹಿಂದಿರುವ ಉದ್ದೇಶ. ಇಲ್ಲಿ ಇನ್ನೊಂದು ರಾಜಕೀಯ ಉದ್ದೇಶವೂ ಇದೆ. ಬಿಜೆಪಿಯನ್ನು ವಿರೋಧಿಸುವ ರಾಜಕೀಯ ಪಕ್ಷಗಳು ತಮ್ಮ ಒಕ್ಕೂಟದ ಹೆಸರಿನ ಸಂಕ್ಷಿಪ್ತ ರೂಪವು 'ಇಂಡಿಯಾ' ಎಂದು ಬರುವಂತೆ ನೋಡಿಕೊಂಡಿವೆ. ಈ ಹೆಸರಿಟ್ಟುಕೊಂಡಿದ್ದನ್ನು ಪ್ರಧಾನಿ ಮೋದಿ ಟೀಕಿಸಿದ್ದಾರೆ. ಬಿಜೆಪಿ ಕೂಡ ಟೀಕಿಸಿದೆ.

ಕೇಂದ್ರದ ಎಲ್ಲ ಯತ್ನಗಳ ಮುಂದುವರಿದ ಭಾಗ, ಎನ್‌ಸಿಇಆರ್‌ಟಿ ರಚಿಸಿದ್ದ ಸಮಿತಿಯ ಶಿಫಾರಸು. 'ಭಾರತ' ಎಂಬುದು ಈ ದೇಶದ ನಿಜವಾದ ಹೆಸರು ಎಂಬ ಆಲೋಚನೆಯು ಮಕ್ಕಳ ಮನಸ್ಸಿನಲ್ಲಿ ಬೆಳೆಯುವಂತೆ ಮಾಡುವುದು ಇದರ ಉದ್ದೇಶ. ದೇಶದ ಸಂವಿಧಾನವು ಈ ನೆಲವನ್ನು 'ಇಂಡಿಯಾ, ಅಂದರೆ ಭಾರತ' ಎಂದು ಕರೆದಿದೆ. ಒಂದು ಹೆಸರನ್ನು ಕೈಬಿಟ್ಟು, ಇನ್ನೊಂದು ಹೆಸರಿಗೆ ಉತ್ತೇಜನ ನೀಡುವುದು ಸರಿಯಾದ ನಡೆ ಅಲ್ಲ. 'ಇಂಡಿಯಾ' ಎಂಬ ಪದವು ವಸಾಹತುಶಾಹಿ ಅವಧಿಯಲ್ಲಿ ಜನ್ಮತಾಳಿದ್ದು ಎಂದಷ್ಟೇ ಹೇಳುವುದು ಸರಿಯಲ್ಲ; ಈ ಪದವು ಇತಿಹಾಸದಲ್ಲಿ ವಿಕಾಸ ಹೊಂದುತ್ತಾ ಬಂದಿದೆ, ದೇಶದ ಅಸ್ಮಿತೆಯೊಂದಿಗೆ ಬೆರೆತಿದೆ, ಅರ್ಥವನ್ನು ಹಿಗ್ಗಿಸಿಕೊಂಡಿದೆ. ಹೆಸರುಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳಲು ಆರಂಭಿಸಿದರೆ, 'ಭಾರತ' ಎಂಬ ಪದವೂ ಕೆಲವರಿಗೆ ಆಗಿಬರದಿರಬಹುದು. ಆ ಪದವು ಉತ್ತರ ಭಾರತದ ಒಂದು ರಾಜಮನೆತನದಿಂದ ಪಡೆದಿದ್ದು ಎಂದು ಕೆಲವರು ವಾದಿಸಬಹುದು. 'ಇಂಡಿಯಾ' ಪದದ ಬದಲು 'ಭಾರತ' ಎಂಬ ಪದವನ್ನು ಬಳಸಬೇಕು ಎನ್ನುವ ಶಿಫಾರಸನ್ನು ವಿರೋಧಿಸುವುದಾಗಿ ಕರ್ನಾಟಕ ಮತ್ತು ಕೇರಳ ಹೇಳಿವೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಈ ದೇಶದ ಬಗ್ಗೆ ತಾನು ಹೊಂದಿರುವ ಸೀಮಿತ ದೃಷ್ಟಿಕೋನವನ್ನು ದೇಶದ ಮಕ್ಕಳ ಮೇಲೆ ಹೇರುವ ಕೆಲಸ ಮಾಡಬಾರದು.

ದಿನದ ಟ್ವೀಟ್

ವಿಶ್ವಸಂಸ್ಥೆ ಬಲಯುತವಾಗಲಿ



ಆ್ಯಂಟೊನಿಯೊ ಗುಟೆರಸ್ ಅವರೇ, ನಿಮಗೆ ಗೌರವ ಸಲ್ಲಿಸುತ್ತೇನೆ. ನೀವು, ಮಾನವೀಯತೆಯ ಅಂತಃಸಾಕ್ಷಿ ಸಂರಕ್ಷಣೆಯ ಹೊಣೆ ಹೊತ್ತ ಸ್ಥಾನದಲ್ಲಿದ್ದೀರಿ. ಗಾಜಾದಲ್ಲಿ ನರಳುತ್ತಿರುವವರಿಗೆ ಕದನವಿರಾಮವನ್ನು ಮತ್ತು ಮಾನವೀಯ ನೆರವನ್ನು ಖಾತರಿಗೊಳಿಸುವುದು ಇಂದಿನ ಅತ್ಯಂತ ಪ್ರಮುಖವಾದ ಆದ್ಯತೆಯಾಗಿದೆ. ಹಾಗೆಯೇ, ವಿಶ್ವಸಂಸ್ಥೆಗೆ ಬಲ ತುಂಬಲು ಇದು ಸೂಕ್ತ ಸಮಯವಾಗಿದೆ.

ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

ಕಿಡಿನುಡಿ



ರಾಜ್ಯದಲ್ಲಿನ ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ಉರುಳಿಸುವ ಯೋಚನೆ ಬಿಜೆಪಿಗಿಲ್ಲ. ರಾಜ್ಯದ ಜನ ಅವರಿಗೆ ಅಧಿಕಾರ ನೀಡಿದ್ದಾರೆ. ಐದು ವರ್ಷ ಆಡಳಿತ ನಡೆಸಲಿ. ಆದರೆ, ಸಿದ್ದರಾಮಯ್ಯ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಬಾಲಿಶ ಹೇಳಿಕೆ, ಇಲ್ಲಸಲ್ಲದ ಆರೋಪ ಮಾಡುವುದನ್ನು ಬಿಡಲಿ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 30-10-1998

• **ಶಿರಾ ಹಿಂಸಾಚಾರ: ಸರ್ಕಾರ ತರಾಟೆಗೆ**

ಬೆಂಗಳೂರು, ಅ. 29– ತುಮಕೂರು ಜಿಲ್ಲೆ ಶಿರಾದಲ್ಲಿ ರೈತ ಚಳವಳಿಯ ಸಂದರ್ಭದಲ್ಲಿ ನಿನ್ನೆ ಹಿಂಸಾಚಾರ ಭುಗಿಲೆದ್ದು, ಗೋಲಿಬಾರ್‌ನಿಂದ ಹಲವರು ಸತ್ತ ಪ್ರಕರಣ ಇಂದು ವಿಧಾನಸಭೆಯ ಉಭಯ ಸದನಗಳಲ್ಲಿ ಪ್ರತಿಧ್ವನಿಸಿ, ವಿರೋಧ ಪಕ್ಷಗಳು ಈ ನಿಟ್ಟಿನಲ್ಲಿ ಸರ್ಕಾರದ ವೈಫಲ್ಯವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆಯಿತು.

ಘಟನೆ ಬಗೆಗಿನ ಪರಿಶೀಲನೆಗಾಗಿ ಸ್ಥಳಕ್ಕೆ ಭೇಟಿ ನೀಡಲು ಸದನ ಸಮಿತಿ ರಚಿಸುವಂತೆ ಕಾಂಗ್ರೆಸ್ ಆಗ್ರಹಪಡಿಸಿದರೆ, ಸರ್ವಪಕ್ಷಗಳ ನಿಯೋಗವನ್ನು ಅಲ್ಲಿಗೆ ಕಳುಹಿಸಬೇಕು ಎಂದು ಬಿಜೆಪಿ ಒತ್ತಾಯಿಸಿತು.

ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ವಿಧಾನಸಭೆಯಲ್ಲಿ ಘಟನೆ ಬಗ್ಗೆ ವಿವರಿಸಿ, 'ಈಗ ಪರಿಸ್ಥಿತಿ ಹತೋಟಿಗೆ ಬಂದಿದೆ. ಪುನಃ ಪ್ರಚೋದನಾತ್ಮಕ ಹೇಳಿಕೆಗಳನ್ನು ನೀಡುವುದರ ಮೂಲಕ ಪರಿಸ್ಥಿತಿ ಮತ್ತೆ ವಿಕೋಪಕ್ಕೆ ಹೋಗಲು ಯಾರೂ ಅವಕಾಶ ಮಾಡಿಕೊಡಬಾರದು' ಎಂದು ವಿರೋಧ ಪಕ್ಷಗಳ ಸದಸ್ಯರಲ್ಲಿ ವಿನಂತಿಸಿಕೊಂಡರು.

• **ಗೌಡರ ಬೆಂಬಲಿಗ ಮಂತ್ರಿಗಳ ವಜಾಕ್ಕೆ ಹೆಗಡೆ ಕರೆ**

ನವದೆಹಲಿ, ಅ. 29– ಮುಖ್ಯಮಂತ್ರಿ ಜೆ.ಎಚ್.ಪಟೇಲ್ ನೇತೃತ್ವದ ಸರ್ಕಾರ ಅಪಾಯಕ್ಕೆ ಸಿಕ್ಕಿದರೆ ಅದನ್ನು ಪಾರು ಮಾಡಲು ಈಗಾಗಲೇ ಅಭಯ ಹಸ್ತ ನೀಡಿರುವ ಲೋಕಶಕ್ತಿಯ ನಾಯಕ ರಾಮಕೃಷ್ಣ ಹೆಗಡೆ, ಸಂಪುಟದಲ್ಲಿ ತಮ್ಮ ವಿರುದ್ಧ ಕೆಲಸ ಮಾಡುತ್ತಿರುವ ದೇವೇಗೌಡ ಬೆಂಬಲಿಗ ಸಚಿವರನ್ನು ವಜಾ ಮಾಡುವಂತೆ ಮುಖ್ಯಮಂತ್ರಿಗೆ ಕರೆ ನೀಡಿದರು.

50 ವರ್ಷಗಳ ಹಿಂದೆ

ಮಂಗಳವಾರ, 30-10-1973

• **ಕರ್ನಾಟಕದ ಭಾಗ್ಯದ ಬಾಗಿಲು ತೆರೆವ ಕಾಳಿ ಯೋಜನೆಗೆ ಶಿಲಾನ್ಯಾಸ**

ಸೂಪ, ಅ. 29– ಸಹ್ಯಾದ್ರಿಯಲ್ಲಿ ಹುಟ್ಟಿ ಅಲ್ಲೇ ಓಡಾಡಿ, ಅರಬ್ಬಿ ಸಮುದ್ರವನ್ನು ಸೇರುತ್ತಿರುವ ಪುಟ್ಟ ಕಾಳಿ, ಕರ್ನಾಟಕದಾದ್ಯಂತ ಬೆಳಕು ಬೀರಿ, ಜನಜೀವನವನ್ನು ಬೆಳಗುವಂತೆ, ಮನವೊಲಿಸುವ ಮಹಾಕಾರ್ಯದ ಆರಂಭ ಶಿಲೆಯನ್ನು ಇಂದು ಇಲ್ಲಿ ಪ್ರಧಾನಿ ಇಂದಿರಾ ಗಾಂಧಿ ಅವರು ಸ್ಥಾಪಿಸಿದರು.

ವಿದ್ಯುತ್ ಉತ್ಪತ್ತಿ ಮಾಡುವ ಈ ಯೋಜನೆ ಕರ್ನಾಟಕದ ಕಲ್ಯಾಣಕ್ಕೆ ಕಾರಣವಾಗಲಿ ಎಂದು ಪ್ರಧಾನಿ ಹಾರೈಸಿದರು.

ಸುಮಾರು ನೂರು ಮೈಲಿ ಉದ್ದ ಹರಿಯುವ ಕಾಳಿ, ಮಳೆಗಾಲದಲ್ಲಿ ಕಾಳಿಯೇ. ತುಂಬು ಹಾಗೂ ರಭಸದ ಓಟ. ಇನ್ನು ಮುಂದೆ ಹರಿಯುವುದು ಕೇವಲ ನೀರಲ್ಲ; ಜತೆಗೆ ಬೆಳಕು. ಕಾಳಿ ನದಿಯ ಈ ಬೆಳಕಿನ ಪ್ರವಾಹ, ಸಂಪತ್ತು-ಸಮೃದ್ಧಿಯ ಜನಕ-ಸಾಧಕ.

• **ಕಳ್ಳಸಾಗಾಣಿಕೆ ತಡೆಗಟ್ಟಲು 2 ಕೋಟಿ ರೂಪಾಯಿ ಯೋಜನೆ**

ಪರಡಾಲ, ಅ. 29– ಅರಬ್ ರಾಜ್ಯಗಳಿಂದ ಪಶ್ಚಿಮ ಕರಾವಳಿಗೆ ಬಂಗಾರ ಮತ್ತಿತರ ವಸ್ತುಗಳ ಕಳ್ಳಸಾಗಾಣಿಕೆಯನ್ನು ತಡೆಗಟ್ಟಲು ಸಾಧ್ಯವಾಗುವಂತೆ ಕಡಲ ಸುಂಕದ ಇಲಾಖೆಯವರು 2 ಕೋಟಿ ರೂಪಾಯಿ ವೆಚ್ಚದ ಹೊಸ ಯೋಜನೆ ತಯಾರಿಸಿರುವುದಾಗಿಯೂ, ಕೇಂದ್ರ ಸರ್ಕಾರ ಅದನ್ನು ಅಂಗೀಕರಿಸಿರುವುದಾಗಿಯೂ ವರದಿಯಾಗಿದೆ.

ಯುದ್ಧವು ಉದ್ದಿಮೆಯಾದಾಗ ಶಸ್ತ್ರಗಳ ಜೊತೆಗೆ ಉನ್ಮಾದವನ್ನೂ ಉತ್ಪಾದಿಸಲಾಗುತ್ತದೆ

ಕದನ ವ್ಯಾಪಾರ ನಿರಂತರ



ವಿಶ್ಲೇಷಣೆ

ಸಬಿತಾ ಬನ್ನಾಡಿ

'ಯುದ್ಧದಲ್ಲಿ ತೊಡಗಿದ ಇರಾಕ್ ಮತ್ತು ಇರಾನ್ ಎರಡು ದೇಶಗಳಿಗೂ ನೀನೇ ಶಸ್ತ್ರಾಸ್ತ್ರ ಸರಬರಾಜು ಮಾಡಿದ್ದೆಯಲ್ಲವೇ?' ಎಂದು ಸೈಮನ್ ವೀಜ್‌ಗೆ ಕೇಳುವ ಯೂರಿ ಓರ್ಲೋವ್, ತಾನು ಕೂಡಾ ಇಸ್ರೇಲ್-ಲೆಬನಾನ್ ಯುದ್ಧವಾದಾಗ ಎರಡೂ ದೇಶಗಳಿಗೆ ಶಸ್ತ್ರಾಸ್ತ್ರ ಸರಬರಾಜು ಮಾಡುತ್ತಾನೆ. 'ಅದು ನನಗೆ ಸಂಬಂಧಿಸಿದ ಸಂಗತಿಯಲ್ಲ. ನಾನು ಮಾಡುತ್ತಿರುವುದು ವ್ಯಾಪಾರ ಮಾತ್ರ' ಎಂದು ತಣ್ಣಗೆ ಹೇಳಬಲ್ಲ ಅವನು ಹೇಳುವ ಮಾತೊಂದು ಹೀಗಿದೆ: 'ವಿಶ್ವದೆಲ್ಲೆಡೆ ವ್ಯಾಪಾರ ಆಗಿರುವ ಒಟ್ಟು ಶಸ್ತ್ರಾಸ್ತ್ರಗಳ ಸಂಖ್ಯೆಯನ್ನು ವಿಭಾಗಿಸಿದಾಗ, ಪ್ರತಿ ಹನ್ನೆರಡು ಜನರಲ್ಲಿ ಒಬ್ಬರ ಬಳಿ ಶಸ್ತ್ರ ಇದೆ. ಈಗ ಪ್ರಶ್ನೆ ಇರುವುದು, ಉಳಿದ ಹನ್ನೊಂದು ಜನರೂ ಗನ್ ಹಿಡಿಯುವಂತೆ ಮಾಡುವುದು ಹೇಗೆ?' ಇದು, ಭೂಮಿ ಮೇಲಿನ ಅತಿದೊಡ್ಡ ಶಸ್ತ್ರಾಸ್ತ್ರ ಡೀಲರ್‌ಗಳ ಕತೆಯಿಂದ ಪ್ರೇರಿತವಾದ 'ಲಾರ್ಡ್ ಆಫ್ ವಾರ್' ಸಿನಿಮಾದ ಸ್ವಗತದ ಮಾತು.

ಜಗತ್ತಿನಲ್ಲಿ ಅತಿ ಹೆಚ್ಚು ಶಸ್ತ್ರಾಸ್ತ್ರ ಉತ್ಪಾದನೆಯನ್ನು ಮಾಡುವ ಮೊದಲ ಐದು ದೇಶಗಳಾದ ಅಮೆರಿಕ, ಬ್ರಿಟನ್, ರಷ್ಯಾ, ಚೀನಾ ಮತ್ತು ಫ್ರಾನ್ಸ್ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯ ರಾಷ್ಟ್ರಗಳೂ ಆಗಿರುವುದನ್ನು ವ್ಯಂಗ್ಯ ಎನ್ನಬೇಕೋ ವಿಪರ್ಯಾಸ ಎನ್ನಬೇಕೋ ದುರಂತ ಎನ್ನಬೇಕೋ ಗೊತ್ತಿಲ್ಲ. ಈ ಐದರಲ್ಲಿ ರಷ್ಯಾ, ಚೀನಾ ಒಂದು ಕಡೆಗೆ ಇದ್ದರೆ, ಉಳಿದವುಗಳ ಜೊತೆಗೆ ಇತರ ಕೆಲವು ದೇಶಗಳೂ ಸೇರಿಕೊಂಡು, ಜಗತ್ತಿನಲ್ಲಿ ಎಲ್ಲೇ ಯುದ್ಧವಾಗಲಿ ಅಲ್ಲಿ ತಮ್ಮ ಮೂಗು ತೂರಿಸುತ್ತವೆ. ಶಸ್ತ್ರಾಸ್ತ್ರ ಸರಬರಾಜು ತಕ್ಷಣ ಶುರುವಾಗಿಬಿಡುತ್ತದೆ. ಆದರೆ ತಮ್ಮನ್ನು ತಾವು 'ಶಾಂತಿದೂತರು' ಎಂದು ಬಿಂಬಿಸಿಕೊಳ್ಳುತ್ತವೆ. ಇವು ಯಾರನ್ನು ಖಳನಾಯಕರು ಎಂದು ಚಿತ್ರಿಸುತ್ತವೋ ಅದನ್ನು ಇತರರು ನಂಬುವಂತೆ ಮಾಡುತ್ತವೆ. ಒಟ್ಟಿನಲ್ಲಿ ಮುಖ್ಯವಾಗಿ ಆಗಬೇಕಿರುವುದು ಏನೆಂದರೆ ಯುದ್ಧ!

ಅದಕ್ಕೆ ಪ್ರಜಾಪ್ರಭುತ್ವದ ಮುಖವಾಡವಿದೆ. ನಾಗರಿಕತೆಯ ನಾಜೂಕು ಇದೆ. ತಮ್ಮ ಜೊತೆಗೆ ಕೈಜೋಡಿಸದವರು, ತಮ್ಮ ಹಿಂಬಾಲಕರಾಗದವರು ಅನಾಗರಿಕರೂ ಪಾಶವಿ ಸೈದ್ಧಾಂತಿಕತೆಯವರೂ ಆಗಿಬಿಡುತ್ತಾರೆ! ಹಾಗೆ ಮಾಡುವುದಕ್ಕೆ ಸದಾ ಸನ್ನದ್ಧ. ಅಫ್ಗನ್‌ನ ತಾಲಿಬಾನೀಯರನ್ನಾಗಲೀ ಒಸಾಮ ಬಿನ್ ಲಾಡೆನ್‌ನನ್ನಾಗಲೀ ಹಮಾಸ್ ಬಂಡುಕೋರರನ್ನಾಗಲೀ ಪಾಕಿಸ್ತಾನದ ಭಯೋತ್ಪಾದಕರನ್ನಾಗಲೀ ಮೂಲದಲ್ಲಿ ಹುಟ್ಟುಹಾಕಿದವರು ಯಾರು? ಅಮೆರಿಕದಂತಹ ದೇಶಗಳ ಆರ್ಥಿಕ ಸಹಾಯ ಇಲ್ಲದೇ ಇವರೆಲ್ಲ ತಮ್ಮಷ್ಟಕ್ಕೆ ತಾವೇ ಬೆಳೆದರೇ?

ತನ್ನನ್ನು ತಾನು 'ದಿವಾಳಿಯಾಗಿದ್ದೇನೆ' ಎಂದು ಘೋಷಿಸಿಕೊಂಡಿದ್ದ ಪಾಕಿಸ್ತಾನ, ಇದ್ದಕ್ಕಿದ್ದಂತೆ ಭಾರತದ ಕಾರ್ಗಿಲ್ ಮೇಲೆ ದಾಳಿ ಮಾಡಿದ್ದು ಹೇಗೆ? ಇದೆಲ್ಲವನ್ನೂ ಕಣ್ಣಾರೆ ಕಂಡೂ ನಾವು ಆ ದೇಶಗಳನ್ನೇ ಆರಾಧಿಸುತ್ತಾ ಮಾರುಹೋಗುವುದು ಮತ್ತು ಅವರು ನಮಗಾಗಿ ಸೃಷ್ಟಿಸಿಕೊಟ್ಟ ಶತ್ರುಗಳೆಡೆಗೆ ಮಾತ್ರ ಗುರಿಯಿಡುವುದು ನಡೆಯುತ್ತಲೇ ಇದೆ. ತಮ್ಮದೇ ಶ್ರೀಮಂತ ಸಂಸ್ಕೃತಿ, ಪ್ರಕೃತಿ, ಜೀವನಕ್ರಮಗಳಿಂದ ಬದುಕುತ್ತಿದ್ದ ದೇಶಗಳನ್ನು ವಸಾಹತುಗಳನ್ನಾಗಿ ಆಕ್ರಮಿಸಿ, ಅಲ್ಲಿನ ಸಂಪತ್ತನ್ನು ದೋಚಿ, ಅಲ್ಲಿನ ಜನರಲ್ಲಿ ಕೀಳರಿಮೆ ತುಂಬಿ, ಇಂದಿಗೂ ತಾನೇ ಶ್ರೇಷ್ಠ ಎಂದು ಬೀಗುವ ಬ್ರಿಟನ್ ಮತ್ತಿತರ ಯುರೋಪಿಯನ್ ದೇಶಗಳು, ಮೂಲ ರೆಡ್ ಇಂಡಿಯನ್ನರನ್ನು ನಿರ್ನಾಮ ಮಾಡಿ ಆಕ್ರಮಿಸಿಕೊಂಡು ಹುಟ್ಟಿದ ಅಮೆರಿಕ ಇಂದಿಗೂ ತನ್ನ ಸಂಪತ್ತು ಹೆಚ್ಚಿಸಿಕೊಳ್ಳಲು, ಉಳಿಸಿಕೊಳ್ಳಲು ಮಾಡುತ್ತಿರುವುದು ಇದೇ ತಣ್ಣಗಿನ ಕ್ರೌರ್ಯವನ್ನೇ. ಇದಕ್ಕಾಗಿ ಇವು ಜಗತ್ತನ್ನು ಧರ್ಮದ ಆಧಾರದಲ್ಲಿ ವಿಭಜಿಸ ಹೊರಟಿವೆ.

ಮೇಲಿನ ಸಿನಿಮಾದಲ್ಲಿ ಇನ್ನೊಂದು ಮಾತು ಬರುತ್ತದೆ. ಅಮೆರಿಕ ಮತ್ತು ಸೋವಿಯತ್ ನಡುವಣ ಶೀತಲಯುದ್ಧವು ಕೊನೆಗೊಂಡಾದ ಮೇಲೆ 'ಇನ್ನೇನಿದ್ದರೂ ದೇಶದೊಳಗಿನ ಜನರನ್ನು ಎಡ, ಬಲ ಎಂದು ವಿಭಜಿಸಿ ಕದನಕ್ಕೆ ಅಣಿಗೊಳಿಸಬೇಕು' ಎಂದು ಯೂರಿ ಹೇಳುತ್ತಾನೆ. ಈ ರಾಜಕಾರಣದ ಬಿಸಿ ಈಗ ನಮ್ಮ ದೇಶಕ್ಕೂ ವ್ಯಾಪಿಸಿದೆ. ಆದರೆ ನಾವು ಈ ಕದನಕ್ಕೆ ಬಹಳ ಉತ್ಸುಕರಾಗಿದ್ದೇವೆ. ಮನೆ ಮನೆಗಳಲ್ಲೂ ಮಾತಿನ ಕದನ ಈಗ ಸಾಮಾನ್ಯ ಸಂಗತಿಯೇ ಆಗಿದೆ. ಹಮಾಸ್ ಬಂಡುಕೋರರ ಮೂರ್ಖ ದಾಳಿಯನ್ನು ಮಧ್ಯಪ್ರಾಚ್ಯದ ರಾಜಕೀಯ ಚಿತ್ರಣವನ್ನೇ ಬದಲಿಸಲು ಬಳಸಿಕೊಳ್ಳುವ ಅವಕಾಶ ಎಂಬ ಉಮೇದಿನಲ್ಲಿ ಇಸ್ರೇಲ್ ಪ್ರತಿದಾಳಿ ಆರಂಭಿಸಿತು. ನಮ್ಮ ದೇಶದ ಹಲವಾರು ಸಾಮಾನ್ಯ ಜನರೂ ಪ್ಯಾಲೆಸ್ಟೀನಿಯನ್ನರು ಸರ್ವನಾಶವಾಗಲಿ ಎಂದು ಹಪಹಪಿಸಿದರು. ಮೊದಲೆಲ್ಲಾ 'ಛೇ, ಅಯ್ಯೋ ಪಾಪ, ಮಕ್ಕಳುಮರಿ ಎಲ್ಲ ಸಾಯ್ತಾರಲ್ಲಾ' ಅಂತ ಮರುಗುವುದನ್ನು ನೋಡಿದ್ದೆವು. ಆದರೆ ಈಗ ಕರುಣೆಯ ಪಸೆ ಆರಿಹೋಗತೊಡಗಿದೆ. ಬದಲಿಗೆ, ಯುದ್ಧೋನ್ಮಾದದ ಶೌರ್ಯ ವಿಪರೀತ ಅಡರಿಕೊಂಡಿದೆ. ಇದು 'ಅನ್ಯ'ರ ಬಗೆಗೆ ಮಾತ್ರ ಇರುವುದಲ್ಲ. 'ತಮ್ಮವರೇ' ಆಗಿದ್ದು ತಮ್ಮ ಸಿದ್ಧಾಂತ ಒಪ್ಪದವರು ಸತ್ತರೆ ಪಟಾಕಿ ಹಚ್ಚುವವರ ಸಂತತಿಯೂ ಬೆಳೆಯುತ್ತಿದೆ. ಹೀಗಾದ ಮೇಲೆ ಶತ್ರುಗಳೂ ಹೆಚ್ಚುತ್ತಲೇ ಹೋಗಬೇಕಲ್ಲವೇ?



ಜಗತ್ತಿನಲ್ಲೇ ಅತ್ಯಂತ ಬಲಿಷ್ಠ ಸೈನ್ಯವನ್ನು ಹೊಂದಿರುವ ಇಸ್ರೇಲ್ ತನ್ನ ಯಶಸ್ಸಿನಿಂದ ಎಷ್ಟು ಕೊಬ್ಬಿದೆಯೆಂದರೆ, ತನ್ನ ಪ್ರಜೆಗಳಿಗೆ ಬೇಕಾದ ಎಲ್ಲ ಸುರಕ್ಷತೆಯನ್ನೂ ತಾನು ಮಾಡಿಕೊಟ್ಟಿದ್ದೇನೆ ಎಂದು ಭ್ರಮಿಸಿದೆ. ಪ್ರತಿ ಕಟ್ಟಡದಲ್ಲೂ ಭೇದಿಸಲಾಗದ ಬಂಕರ್‌ಗಳನ್ನು ನಿರ್ಮಿಸಿದೆ. ಅಪಾಯದ ಸೈರನ್ ಮೊಳಗಿದ ಕೂಡಲೇ ಜನ ಬಂಕರ್‌ಗಳ ಒಳಗೆ ಸುರಕ್ಷಿತವಾಗಿ ಇರಬಹುದು ಎನ್ನುತ್ತದೆ. ಆದರೆ ಇನ್ನೊಬ್ಬರ ನೆಲವನ್ನು ಆಕ್ರಮಿಸಿ ದುರಾಚಾರ ಮಾಡಿದ ಮೇಲೆ ಅಪಾಯದ ಸೈರನ್ ಅನ್ನು ನಿಲ್ಲಿಸಲು ಸಾಧ್ಯವೇ?

ಯಾರಿಗೇ ಆದರೂ ಬೇಕಿರುವುದು ಬಲಿಷ್ಠ ಬಂಕರ್ ಅಲ್ಲ, ಸುರಕ್ಷಿತ ಬಯಲು. ಪ್ರತಿ ಪ್ರಜೆಗೂ ಸುರಕ್ಷಿತ ಬಯಲನ್ನು ಒದಗಿಸುವ ದೇಶವೇ ಅತಿ ಬಲಿಷ್ಠ ದೇಶವಾಗಿರುತ್ತದೆ. ಈ ಚಿಂತನೆಯೇ ಭಾರತದ ಮೂಲ ಸತ್ವ. ಭಾರತದಲ್ಲಿ ಹುಟ್ಟಿದ ಬೌದ್ಧ, ಜೈನ, ಶರಣ, ದಾಸ, ಸೂಫಿಯಂತಹ ಹಲವು ಸಂತ ಪರಂಪರೆಗಳು ಬಯಲನ್ನೇ ಆಲಯವಾಗಿಸಿಕೊಂಡವು. ಆಲಯವು ಬೃಹತ್ ಆಗಿ ಬೆಳೆದಾಗ ಅದರೊಳಗನ್ನು ಬಯಲು ಮಾಡಿದವು. ಹಾಗೆ ನೋಡಹೋದರೆ, ಗಾಂಧಿ ಸ್ವಾತಂತ್ರ್ಯ ಹೋರಾಟಕ್ಕೆ ಜನರನ್ನು ಬಯಲಿಗೆ ತರುವ ಅಹಿಂಸಾ ಪಥವನ್ನು ಪ್ರಯೋಗಿಸದೇ ಹೋಗಿದ್ದರೆ, ಅವರನ್ನು ಇವತ್ತು ಯಾರೂ ನೆನಪಿನಲ್ಲಿ ಇಟ್ಟುಕೊಳ್ಳುತ್ತಲೇ ಇರಲಿಲ್ಲ.

ಶಸ್ತ್ರವೇ ಇಲ್ಲದೆ ಬಯಲಿಗೆ ಬಂದ ಬೃಹತ್ ಜನಸಮೂಹದಿಂದಲೇ ಭಾರತವು ಸ್ವಾತಂತ್ರ್ಯ ಪಡೆಯಲು ಸಾಧ್ಯವಾಯಿತು. ಇದನ್ನೇ ನಾವೀಗ ಜಗತ್ತಿಗೆ ಹೇಳ ಹೊರಡಬೇಕಿದೆ. ಆ ಅರ್ಥದಲ್ಲಿ ನಾವು ವಿಶ್ವನಾಯಕರಾಗಬೇಕಿದೆ. ಆದರೆ ನಾವದನ್ನು ಮರೆತು ಹಿಂಸೆಯ ಪ್ರೇರೇಪಕರೂ ಹಿಂಬಾಲಕರೂ ಸಮರ್ಥಕರೂ ಆಗುವುದಾದರೆ, ನಮ್ಮ ಮನೆಮನೆಯ ಶಾಂತಿಯನ್ನು ನಾಶ ಮಾಡಿಕೊಳ್ಳುವುದರ ಜೊತೆಗೆ, ನಮಗಿರುವ ನೈತಿಕ ಶಕ್ತಿಯ ಮೂಲಕ ಜಗತ್ತು ನಮಗೆ ತಲೆಬಾಗುವ ಅವಕಾಶವನ್ನು ಕಳೆದುಕೊಳ್ಳಬೇಕಾಗುತ್ತದೆ ಎನ್ನುವುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.ಹಿಂಸೆಗೆ ಮುಖವೇ ಇರುವುದಿಲ್ಲ. ಅದು ಚಕ್ರಾಕಾರದಲ್ಲಿ ಸುತ್ತುತ್ತಲೇ ಇರುತ್ತದೆ ವಿನಾ ಕೊನೆಯೆಂಬುದಿಲ್ಲ.

'ಲಾರ್ಡ್ ಆಫ್ ವಾರ್' ಸಿನಿಮಾದ ಯೂರಿಯನ್ನು ಅತ್ಯಂತ ಪ್ರಾಮಾಣಿಕನಾದ ಇಂಟರ್‌ಪೋಲ್ ಅಧಿಕಾರಿ ವಾಲೆಂಟೈನ್ ಕೊನೆಗೂ ಬಂಧಿಸುತ್ತಾನೆ. ಆಗ ಯೂರಿ ಹೇಳುತ್ತಾನೆ: 'ಇನ್ನೆರಡೇ ನಿಮಿಷಗಳಲ್ಲಿ ನಿನ್ನ ಮೇಲಧಿಕಾರಿ ಬಂದು ನನ್ನನ್ನು ಬಿಡುಗಡೆಗೊಳಿಸುತ್ತಾನೆ. ನಿನ್ನ ಪ್ರಕಾರ ನಾನು ವಿಲನ್ ಆಗಿರಬಹುದು. ಆದರೆ ಜಗತ್ತಿನ ಭಯಾನಕ ವ್ಯಕ್ತಿಗಳ ಜೊತೆಗೆ ನಾನು ವ್ಯವಹರಿಸುವುದರಿಂದ ಅಮೆರಿಕ ಸರ್ಕಾರಕ್ಕೆ ನಾನೇ ಬೇಕಿರುವುದು' ಎನ್ನುತ್ತಾನೆ. ತಮಾಷೆಯೆಂದರೆ, ಅವನು ತನ್ನ ಬಿಡುಗಡೆಗಾಗಿ ಸೂಟ್‌ಕೇಸ್ ತುಂಬಾ ಹಣವನ್ನೂ ಪಡೆಯುತ್ತಾನೆ. ಆತ ಕೊನೆಯಲ್ಲಿ ಹೇಳುವ ಮಾತು ಹೀಗಿದೆ: 'ಶಸ್ತ್ರಾಸ್ತ್ರ ಮಾರುವವನು ಮಾತ್ರ ಅಂತಿಮವಾಗಿ ಉಳಿಯುವುದು. ಇನ್ನುಳಿದವರೆಲ್ಲಾ ಪರಸ್ಪರ ಕಾದಾಡುವುದರಲ್ಲಿ ಬ್ಯುಸಿಯಾಗಿರ್ತಾರೆ' ಜಗದ ಕಿವಿ ಇನ್ನೂ ಪೂರ್ತಿ ಕಿವುಡಾಗಿಲ್ಲ ಎಂದು ಆಶಿಸಲೇ?

ಚುರುಮುರಿ



ಸರ್ಕಾರಿ ಗಿಫ್ಟ್

• ಮಣ್ಣೆರಾಜು

ಸರ್ಕಾರದ ಕ್ರಮದಿಂದಾಗಿ ಶಂಕ್ರಿ ತನ್ನ ಹೆಂಡತಿ, ಮಕ್ಕಳನ್ನು ಹೋಟೆಲ್ ಊಟಕ್ಕೆ ಕರೆದುಕೊಂಡು ಬರುವಂತಾಗಿತ್ತು.

'ಮಂತ್ರಿಗಳಿಗೆ ಸರ್ಕಾರ ಹೊಸ ಐಷಾರಾಮಿ ಕಾರು ಗಿಫ್ಟ್ ಕೊಟ್ಟಿದೆ, ನೀವು ನಮಗೆ ದಸರಾ ಗಿಫ್ಟ್ ಕೊಡಲಿಲ್ಲ' ಎಂದು ಹೆಂಡತಿ, ಮಕ್ಕಳು ಆಕ್ಷೇಪ ಮಾಡಿದ್ದರು.

'ಸರ್ಕಾರದ ಬಳಿ ಬಹಳಷ್ಟು ದುಡ್ಡಿದೆ, ಕಾರು, ಬಂಗಲೆಯನ್ನೆಲ್ಲಾ ಕೊಡಿಸುತ್ತದೆ. ನನಗೆ ಆ ಶಕ್ತಿಯಿಲ್ಲ' ಎಂದು ಶಂಕ್ರಿ ಕಷ್ಟ ಹೇಳಿಕೊಂಡಿದ್ದ. 'ಸರ್ಕಾರಕ್ಕೂ ಕಷ್ಟಗಳಿವೆ, ಕಷ್ಟದ ನಡುವೆಯೂ ಗಿಫ್ಟ್ ಕೊಟ್ಟು ಖುಷಿಪಡಿಸುತ್ತದೆ' ಎಂದಿದ್ದಳು ಸುಮಿ.

'ಸರ್ಕಾರ ನಿನಗೆ ಭಾಗ್ಯಲಕ್ಷ್ಮಿ ದುಡ್ಡು ಕೊಡ್ತದೆ, ನಿರುದ್ಯೋಗಿ ಮಕ್ಕಳಿಗೆ ಭತ್ಯೆ ಕೊಡಲಿದೆ, ಸರ್ಕಾರ ನನಗೇನೂ ಕೊಟ್ಟಿಲ್ಲ...' ಎಂದು ಹೇಳಿ ಸಂಸಾರದ ಶಾಂತಿ ಕದಡಿದ್ದ ಶಂಕ್ರಿ.

ಅಡುಗೆ ಮಾಡದೆ ಮಕ್ಕಳ ಜೊತೆ ಉಪವಾಸ ಸತ್ಯಾಗ್ರಹ ಆರಂಭಿಸಿದ್ದಳು ಸುಮಿ. ಪರಿಸ್ಥಿತಿ ವಿಕೋಪಕ್ಕೆ ತಿರುಗಿದ್ದರಿಂದ ಶಾಂತಿ, ಸೌಹಾರ್ದ ಕಾಪಾಡಲು ಹೋಟೆಲ್ ಊಟಕ್ಕೆ ಕರೆತಂದಿದ್ದ. ಹೋಟೆಲ್‌ನಲ್ಲಿ ಕ್ಯಾಂಡಲ್ ಲೈಟ್ ಡಿನ್ನರ್ ವ್ಯವಸ್ಥೆ ಇತ್ತು. ಹೆಂಡತಿ, ಮಕ್ಕಳು ಆನಂದಪಟ್ಟರು.

ಆರ್ಡರ್ ಪಡೆಯಲು ಸಪ್ಲೈಯರ್ ಬಂದರು. 'ಊಟದ ಬಿಲ್ ಜೊತೆ ಕ್ಯಾಂಡಲ್ ಲೈಟಿನ ಬಿಲ್ಲನ್ನೂ ಸೇರಿಸ್ತೀರಾ?' ಸುಮಿ ಕೇಳಿದಳು.

'ಇಲ್ಲಾ ಮೇಡಂ, ನಮ್ಮಲ್ಲಿ ಕ್ಯಾಂಡಲ್ ಲೈಟ್‌ಗೆ ಜೀರೊ ಬಿಲ್...'

'ಕ್ಯಾಂಡಲ್ ಲೈಟ್ ಸೇವೆ ಚೆನ್ನಾಗಿದೆ' ಶಂಕ್ರಿನೂ ಆನಂದಪಟ್ಟ.

'ಸರ್ಕಾರದ ಗಿಫ್ಟ್ ಸಾರ್, ವಿದ್ಯುತ್ ಕಡಿತ ಶುರುವಾದಮೇಲೆ ಕ್ಯಾಂಡಲ್ ಹಚ್ಚಬೇಕಾಯಿತು'.

'ಸರ್ಕಾರಕ್ಕೂ ಕರೆಂಟಿನ ಕಷ್ಟ ಇದೆ ಕಣ್ರೀ...' ಅಂದಳು ಸುಮಿ.

'ಸರ್ಕಾರದ ಕ್ರಮದಿಂದ ನಮಗೆ ಒಳ್ಳೆಯದೇ ಆಗಿದೆ ಮೇಡಂ, ಕ್ಯಾಂಡಲ್ ಲೈಟ್ ಸೇವೆಯನ್ನು ಗ್ರಾಹಕರು ಇಷ್ಟಪಡ್ತಿದ್ದಾರೆ. ನಮ್ಮ ಬಿಸಿನೆಸ್ ಇಂಪ್ರೂವ್ ಆಗ್ತಿದೆ...' ಎಂದು ಸಪ್ಲೈಯರ್ ಆರ್ಡರ್ ತಗೊಂಡು ಹೊರಟರು.

ಸಂಗತ

ಇದು ಜೀವಜಲ, ಇರಲಿ ಎಚ್ಚರ

ನೀರು ಸೋರಿಕೆ ಹಾಗೂ ಅನಧಿಕೃತ ಕೊಳವೆ ಮಾರ್ಗಗಳ ಸಂಪರ್ಕ ನಿಯಂತ್ರಣಕ್ಕೆ ಜಲಮಂಡಳಿ ತುರ್ತಾಗಿ ಗಮನಹರಿಸಬೇಕಿದೆ

• ಡಾ. ಕೆ.ಎಸ್.ಚೈತ್ರಾ

ಕಾವೇರಿ ನೀರಿನ ವಿವಾದ ಮುಂದುವರಿದಿದೆ. ಮಳೆಯೂ ಮುನಿಸಿಕೊಂಡು, ಬಿಸಿಲೂ ಜೋರಾಗಿ, ಕಾವೇರಿ ನೀರನ್ನೇ ಆಧಾರವಾಗಿ ಹೊಂದಿರುವ ರಾಜಧಾನಿ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಮಹಾನಗರಿಯಾದ ಬೆಂಗಳೂರಿನಲ್ಲಿ ಕಂಡಲ್ಲೆಲ್ಲ ಬಹುಅಂತಸ್ತಿನ ವಾಸದ ಮನೆಗಳು ಅಂದರೆ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ಗಳು. ನಗರಪ್ರದೇಶದಲ್ಲಿಯೇ ಸುಮಾರು 10 ಲಕ್ಷ ವಸತಿ ಸಮುಚ್ಚಯಗಳಿದ್ದು, 40 ಲಕ್ಷಕ್ಕೂ ಹೆಚ್ಚು ಜನ ಇಲ್ಲಿ ವಾಸಿಸುತ್ತಿದ್ದಾರೆ. ಇವರೆಲ್ಲರೂ ಪ್ರಮುಖವಾಗಿ ಕಾವೇರಿ ನೀರನ್ನು ಅವಲಂಬಿಸಿದ್ದಾರೆ.

ಪತ್ರಿಕೆಗಳಲ್ಲಿ ವರದಿಯಾದಂತೆ, ಇಂತಹ ಅಪಾರ್ಟ್‌ಮೆಂಟ್‌ಗಳಿಂದಲೇ ಶೇ 50ರಷ್ಟು ಕಾವೇರಿ ನೀರು ಪೋಲಾಗುತ್ತಿದೆ ಎನ್ನುವ ಗಂಭೀರ ಆರೋಪ ಕೇಳಿಬಂದಿದೆ. ಇವುಗಳಲ್ಲಿ ಬೋರ್‌ವೆಲ್ ವ್ಯವಸ್ಥೆಯನ್ನು ಮಾಡಲಾಗಿದ್ದರೂ ಇಲ್ಲಿನ ಜನ ಕುಡಿಯುವುದಕ್ಕಷ್ಟೇ ಅಲ್ಲ ಎಲ್ಲ ಕೆಲಸಗಳಿಗೂ ಕಾವೇರಿ ನೀರನ್ನು ಬಳಸುತ್ತಿದ್ದಾರೆ. ಕಟ್ಟಡದ ಸುತ್ತ ಇರುವ ಉದ್ಯಾನಕ್ಕೆ ಅಗತ್ಯವಾದ ನೀರು, ಕಾರು ತೊಳೆಯುವುದು, ಪಾತ್ರೆ, ಬಟ್ಟೆ ಸ್ವಚ್ಛಗೊಳಿಸುವುದೂ ಸೇರಿದಂತೆ ಎಲ್ಲದಕ್ಕೂ ಬೇಕಾಬಿಟ್ಟಿಯಾಗಿ ನೀರು ಬಳಕೆಯಾಗುತ್ತಿದೆ. ಇವೆಲ್ಲದರ ಬಗ್ಗೆ ಗಮನ ಹರಿಸುವವರೇ ಇಲ್ಲ ಎನ್ನುವುದು ಪ್ರಮುಖ ದೂರು.

ಆದರೆ ಈ ವಸತಿಸಮುಚ್ಚಯಗಳಲ್ಲಿ ವಾಸಿಸುವವರು ಹೇಳುವುದು ಬೇರೆಯೇ ಕಥೆ: 'ವಾರಕ್ಕೆ ಒಂದು ಅಥವಾ ಹೆಚ್ಚೆಂದರೆ ಎರಡು ದಿನ ಮಾತ್ರ ಕಾವೇರಿ ನೀರಿನ ಸರಬರಾಜು, ಅದೂ ಸೀಮಿತ ಅವಧಿಗೆ ಮಾತ್ರ ಇರುತ್ತದೆ. ಅಪಾರ್ಟ್‌ಮೆಂಟ್‌ಗಳಲ್ಲಿ ಬೋರ್‌ವೆಲ್ ಇದ್ದರೂ ಮಳೆ ಸರಿಯಾಗಿ ಬೀಳುತ್ತಿಲ್ಲ, ಬಿಸಿಲಿನ ಪ್ರಮಾಣ ದಿನೇದಿನೇ ಹೆಚ್ಚುತ್ತಿದೆ. ಪೈಪೋಟಿಗೆ ಬಿದ್ದು ಬೋರ್‌ವೆಲ್‌ಗಳನ್ನು ಆಳವಾಗಿ ಕೊರೆಯಲಾಗುತ್ತಿದೆ. ಇದರಿಂದ ಅಂತರ್ಜಲ ಮಟ್ಟ ಕುಸಿದು ಬೋರ್‌ವೆಲ್‌ಗಳಲ್ಲಿ ನೀರು ಬತ್ತಿಹೋಗಿದೆ. ಹೀಗಾಗಿ, ಬೋರ್‌ವೆಲ್ ಇದ್ದರೂ ಕಾವೇರಿ ನೀರನ್ನೇ ಸಂಪೂರ್ಣವಾಗಿ ಅವಲಂಬಿಸಿದ್ದೇವೆ'.

'ಇತ್ತ ಕಾವೇರಿ ನೀರು ಅಗತ್ಯಕ್ಕೆ ತಕ್ಕಷ್ಟು ಪೂರೈಕೆಯಾಗದೆ, ಅತ್ತ ಬೋರ್‌ವೆಲ್ ನೀರೂ ಸಾಕಾಗದೆ ಟ್ಯಾಂಕರ್ ನೀರಿಗೆ ಮೊರೆ ಹೋಗುತ್ತಿದ್ದೇವೆ. ನಮ್ಮ ಸಂಕಷ್ಟ ಅರಿತಿರುವ ನೀರು ಪೂರೈಕೆ ಟ್ಯಾಂಕರ್‌ಗಳದ್ದು ದೊಡ್ಡ ದಂಧೆಯೇ ಆಗಿದೆ. ಇವುಗಳಿಂದ ಶುದ್ಧವಾದ ನೀರು ಕೂಡ ದೊರಕುತ್ತಿಲ್ಲ. ಹೀಗಾಗಿ, ಕೂದಲು ಉದುರುವಿಕೆ, ಅಲರ್ಜಿ, ಚರ್ಮರೋಗದಂತಹ ಕಾಯಿಲೆಗಳು ಉಂಟಾಗುತ್ತಿವೆ. ಟ್ಯಾಂಕರ್‌ಗಳ ನೀರು ಪೂರೈಕೆಯ ದರ ಕೂಡಾ ಹೆಚ್ಚುತ್ತಲೇ ಇದೆ. ಐದು ಸಾವಿರ ಲೀಟರ್‌ಗೆ ಸುಮಾರು ₹ 700 ದರವಿದ್ದು, ಅದರ ಜೊತೆಗೆ, ಹೋಗಿ ಬರುವ ಖರ್ಚನ್ನು ಕೂಡ ಸೇರಿಸಲಾಗುತ್ತಿದೆ. ಹೀಗಿರುವಾಗ, ನೀರನ್ನು ಪೋಲು ಮಾಡುವ ಪ್ರಶ್ನೆಯೇ ಇಲ್ಲ'.

ಜಲಮಂಡಳಿಯ ಅಧಿಕಾರಿಗಳು ಹೇಳುವ ಪ್ರಕಾರ, ಕಾವೇರಿಯಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದ್ದರೂ ಮೂರು ನಾಲ್ಕು ವರ್ಷಗಳಿಂದ ಪೂರೈಸಲಾಗುತ್ತಿರುವ ನೀರಿನ ಪ್ರಮಾಣದಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ. ನೀರು ಉಳಿತಾಯಕ್ಕೆ ಜಲಮಂಡಳಿಯಿಂದ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ನೀರು ಸಂಸ್ಕರಣಾ ಘಟಕಗಳನ್ನು ಅಳವಡಿಸುವಂತೆ ಐದು ವರ್ಷಗಳ ಹಿಂದೆಯೇ ಆದೇಶ ನೀಡಲಾಗಿತ್ತು. ಈ ಘಟಕಗಳು ಹಾಳಾಗಿದ್ದರೆ ಅಂತಹ ಅಪಾರ್ಟ್‌ಮೆಂಟ್‌ಗಳ ವಿರುದ್ಧ ದೂರು ನೀಡಲಾಗುವುದು. ಈ ಸಂಸ್ಕರಣಾ ಘಟಕಗಳು ಇಲ್ಲದಿದ್ದಲ್ಲಿ, ಪೂರೈಸಲಾಗುವ ಕಾವೇರಿ ನೀರಿನ ಪ್ರಮಾಣವನ್ನು ಕಡಿಮೆ ಮಾಡಲು ಅವಕಾಶವಿದೆ. ಮಳೆನೀರು ಸಂಗ್ರಹ ವ್ಯವಸ್ಥೆಯನ್ನು ಅಳವಡಿಸಿಕೊಳ್ಳದ ಕಟ್ಟಡಗಳಿಗೆ ದಂಡ ವಿಧಿಸುವ ಕ್ರಮ ಜಾರಿಯಲ್ಲಿತ್ತು. ಆದರೆ ಅದರಿಂದ ಪ್ರಯೋಜನವಿಲ್ಲವೆಂದು ಕಾವೇರಿ ನೀರಿನ ಪೂರೈಕೆಯ ಪ್ರಮಾಣವನ್ನೇ ಕಡಿಮೆ ಮಾಡಲು ನಿರ್ಧರಿಸಲಾಗಿತ್ತು. ಸರ್ಕಾರದ ಕ್ರಮಗಳಿಗೆ ಎಲ್ಲರೂ ಸ್ಪಂದಿಸಿದರೆ ಯಶಸ್ಸು ಸಾಧ್ಯ.



ಇವೆಲ್ಲವೂ ಒಳ್ಳೆಯ ಕ್ರಮಗಳು ಸರಿ. ಆದರೆ, ಎಷ್ಟರಮಟ್ಟಿಗೆ ಜಾರಿಯಾಗಿವೆ ಎಂಬುದು ಮುಖ್ಯ! ಅದೂ ಅಲ್ಲದೆ, ಈ ರೀತಿ ನೀರು ಸಂಸ್ಕರಣಾ ಘಟಕಗಳನ್ನು ಹೊಂದಿರುವಂತಹ ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳಲ್ಲಿ ಘಟಕಗಳು ಸರಿಯಾಗಿ ಕೆಲಸ ಮಾಡುತ್ತಿದ್ದರೂ ಸಂಸ್ಕರಿಸಿದ ನೀರಿನ ಸಂಗ್ರಹ ಮತ್ತು ಮರುಬಳಕೆ ದೊಡ್ಡ ಸಮಸ್ಯೆಯಾಗಿದೆ. ಸಂಸ್ಕರಿಸಿದ ನೀರಿನಲ್ಲಿ ಶೇಕಡ 50ರಷ್ಟು ಬಳಕೆಯಾದರೆ, ಉಳಿದ ನೀರನ್ನು ಹತ್ತಿರದ ಕೆರೆಗಳಿಗೆ, ಒಳಚರಂಡಿ ವ್ಯವಸ್ಥೆಗೆ ಹರಿಸುವಂತಿಲ್ಲ. ಕೈಗಾರಿಕೆಗಳು ಅದನ್ನು ಬಳಸಲು ಸಿದ್ಧವಿಲ್ಲ. ಇದರಿಂದಾಗಿ ದಿನಕ್ಕೆ ಏಳು ಲಕ್ಷಕ್ಕೂ ಹೆಚ್ಚು ಲೀಟರ್ ನೀರು ವ್ಯರ್ಥವಾಗುತ್ತಿದೆ. ನೀರು ಸಂಸ್ಕರಣಾ ಘಟಕ ಸ್ಥಾಪನೆಯನ್ನು ಕಡ್ಡಾಯಗೊಳಿಸುವ ಮೊದಲು ಅದರ ಸಂಗ್ರಹ ಮತ್ತು ಬಳಕೆಗೆ ಸೂಕ್ತ ಮಾರ್ಗ ಕಂಡುಕೊಳ್ಳುವುದು ಅಗತ್ಯ ಎನ್ನುವುದು ಈ ಅಸೋಸಿಯೇಶನ್‌ನವರ ಅಭಿಪ್ರಾಯ.

ಇದಲ್ಲದೆ, ನಗರದ ಕೇಂದ್ರ ಪ್ರದೇಶಗಳಲ್ಲಿರುವ ಕೆಲವು ಕೊಳವೆ ಮಾರ್ಗಗಳು 80 ವರ್ಷದಷ್ಟು ಹಳೆಯವಾಗಿವೆ. ಅವುಗಳಲ್ಲಿ ಸೋರುವಿಕೆ ಸಾಮಾನ್ಯ. ಅನಧಿಕೃತವಾಗಿ ಕೇಬಲ್ ಅಳವಡಿಕೆ, ರಸ್ತೆ ನಿರ್ಮಾಣದಂತಹ ಕೆಲಸಗಳಿಗಾಗಿ ನೆಲವನ್ನು ಅಗೆದಾಗ, ಈ ಕೊಳವೆಗಳಿಗೆ ಹಾನಿಯಾಗಿ ನೀರು ನಿರಂತರವಾಗಿ ಒಳಗೊಳಗೆ ಸೋರುತ್ತಲೇ ಇರುತ್ತದೆ.

ನೀರಿಲ್ಲದೇ ಬದುಕಿಲ್ಲ. ಹಾಗಾಗಿ, ಪ್ರತಿಯೊಬ್ಬರೂ ತಮಗಾಗಿ ಮತ್ತು ಇತರರಿಗಾಗಿ ನೀರಿನ ಬಗ್ಗೆ ಎಚ್ಚರ ವಹಿಸಲೇಬೇಕು!

ವಾಚಕರ ವಾಣಿ

ಕರ್ನಾಟಕ: ಹೆಸರಿಟ್ಟವರ ಮರೆಯುವುದು ಸರಿಯೇ?

'ಕರ್ನಾಟಕ' ಎಂಬ ಹೆಸರು ಅಸ್ತಿತ್ವಕ್ಕೆ ಬಂದದ್ದರ ಸುವರ್ಣ ಮಹೋತ್ಸವವನ್ನು ಅದ್ಧೂರಿಯಿಂದ ಆಚರಿಸಲು ಹೊರಟಿರುವ ರಾಜ್ಯ ಸರ್ಕಾರ, ಕನ್ನಡ ಮಣ್ಣಿನ ಮಕ್ಕಳಲ್ಲಿ ಹೊಸ ಸಂಭ್ರಮಕ್ಕೆ ಮುನ್ನುಡಿ ಬರೆದಿದೆ. ಇಂತಹ ಸಮಯದಲ್ಲಿ, 'ಮೈಸೂರು ರಾಜ್ಯ'ಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿದವರನ್ನು ಮರೆತಿದೆಯೇ ಎಂಬ ಅನುಮಾನ ಕಾಡುತ್ತಿದೆ. ಏಕೀಕರಣದ ಹೋರಾಟ ತೀವ್ರಗೊಂಡಿದ್ದರ ಫಲವಾಗಿ, ಹರಿದು ಹಂಚಿಹೋಗಿದ್ದ ಕನ್ನಡ ನಾಡು ಒಟ್ಟಾಗಿ ಮೈಸೂರು ರಾಜ್ಯದ ಉದಯವಾಯಿತು. ಆದರೆ ಮೈಸೂರು ರಾಜ್ಯ ಎಂಬ ಹೆಸರು ನಿರ್ದಿಷ್ಟ ಪ್ರಾಂತ್ಯವನ್ನು ಪ್ರತಿನಿಧಿಸುತ್ತದೆ ಎಂಬ ಅಪಸ್ವರ ಇದ್ದೇ ಇತ್ತು. ಇಂತಹ ಕೊರಗನ್ನು ದೂರಮಾಡುವ ಸಂದರ್ಭಕ್ಕಾಗಿ ಕನ್ನಡಿಗರು ಚಾತಕ ಪಕ್ಷಿಗಳಂತೆ ಕಾದರು. ಅದೂ ಎಲ್ಲಿಯವರೆಗೆ ಎಂದರೆ, ದೇವರಾಜ ಅರಸು ಅವರು ಮುಖ್ಯಮಂತ್ರಿ ಆಗುವವರೆಗೆ. ಅರಸು ಅವರು ಜನರ ನಾಡಿಮಿಡಿತ ಅರಿತಿದ್ದ ಜನನಾಯಕ. 'ಕರ್ನಾಟಕ' ರಾಜ್ಯ ಎಂಬ ನಾಮಕರಣಕ್ಕೆ ವಿರೋಧ ಇದ್ದಾಗ್ಯೂ ಅದನ್ನು ಅವರು ಮೆಟ್ಟಿ ನಿಂತರು. 1973ರಲ್ಲಿ ಅಖಂಡ ರೂಪದಲ್ಲಿ 'ಕರ್ನಾಟಕ' ರಾಜ್ಯ ಎಂಬ ನಾಮಕರಣ ಆಯಿತು. ಆ ಒಂದು ಕ್ಷಣ ಅಂದಿನ ಮುಕ್ಕೋಟಿ ಕನ್ನಡಿಗರಲ್ಲಿ ರೋಮಾಂಚನ ಮೂಡಿಸಿದ್ದಷ್ಟೇ ಅಲ್ಲ 'ನಾವೆಲ್ಲರೂ ಒಂದಾದೆವು' ಎಂಬ ಐಕ್ಯತಾಭಾವ ಮೂಡಿಸಿತು.

ಈಗ ಸರ್ಕಾರವು ಸುವರ್ಣ ಸಂಭ್ರಮವನ್ನು ನ. 1ರಿಂದ ಇಡೀ ವರ್ಷ ಆಚರಿಸಲಿದೆ. ಆದರೆ ಆ ಹೆಸರಿನ ನಾಮಕರಣಕ್ಕೆ ಮುಂದಾದ ಅರಸು ಅವರ ಹೆಸರನ್ನು ಪ್ರಚುರಪಡಿಸಲು ಹಿಂದೇಟು ಹಾಕುತ್ತಿದೆ ಎಂಬ ಗ್ರಹಿಕೆ ಜನಮಾನಸದಲ್ಲಿದೆ. ಸರ್ಕಾರ ಅದನ್ನು ತೊಡೆದುಹಾಕಬೇಕು. ಈ ನಾಮಕರಣಕ್ಕೆ ಅರಸು ಅವರು ನೀಡಿದ ಕೊಡುಗೆಯನ್ನು ಸ್ಮರಿಸುವ ಮೂಲಕ ಅವರ ಹೆಸರು ಸಹ ಮುಂಚೂಣಿಯಲ್ಲಿ ಇರುವಂತೆ ಗಮನಹರಿಸಬೇಕು.

ಡಿ.ಎಸ್.ಚೌಗಲೆ, ಬೆಳಗಾವಿ, **ಎಂ.ಜಿ.ಈಶ್ವರಪ್ಪ,** ದಾವಣಗೆರೆ, **ಸಿ.ಬಸವಲಿಂಗಯ್ಯ,** ಮೈಸೂರು, **ಪ್ರಕಾಶ ಗರುಡ,** ಧಾರವಾಡ, **ಆರ್.ಎಚ್.ನಟರಾಜ್, ಆರ್.ಜಿ.ಹಳ್ಳಿ ನಾಗರಾಜ, ಸೂರಜ್ ಸ್ಟೀಫನ್ ಡಿಸೋಜ, ರಾಜಶೇಖರ ಮಠಪತಿ,** ಬೆಂಗಳೂರು, **ಭಾಗ್ಯಜ್ಯೋತಿ ಹಿರೇಮಠ,** ಗುಡಗೇರಿ, **ಯಲ್ಲಪ್ಪ ಹಿಮ್ಮಡಿ,** ರಾಯಬಾಗ

ಆಡುನುಡಿಯ ರೂಪ ತಪ್ಪಲ್ಲ

'ಚಂದನ' ಕನ್ನಡ ವಾಹಿನಿಯಲ್ಲಿ ಮೈಸೂರು ದಸರಾದ ನಿರೂಪಣೆಯ ಸಂದರ್ಭದಲ್ಲಿ 'ಹಾಸನ'ವನ್ನು 'ಆಸನ', 'ಹಿಂದೆ' ಎಂಬುದನ್ನು 'ಇಂದೆ' ಎಂದೆಲ್ಲ ಉಚ್ಚಾರಣೆ ಮಾಡಿದ್ದು ಕನ್ನಡ ನಾಡಿನ ಪ್ರೇಕ್ಷಕರಿಗೆ, ಕೇಳುಗರಿಗೆ ಅಸಹನೀಯವಾಗಿತ್ತು ಎಂಬ ಆತಂಕವನ್ನು ಜಗದೀಶ ನೂಲಿನವರ ಅವರು ವ್ಯಕ್ತಪಡಿಸುತ್ತ (ವಾ.ವಾ., ಅ. 28), 'ಕನ್ನಡದ ಉಚ್ಚಾರಣೆಯನ್ನು ಸ್ಪಷ್ಟವಾಗಿ ಮಾಡಲು ಬಾರದವರನ್ನು ನಿರೂಪಣೆಗಾಗಿ ನೇಮಿಸಿದರೆ ಹೇಗೆ?' ಎಂದು ಪ್ರಶ್ನಿಸಿದ್ದಾರೆ.

'ಹ'ಕಾರದಿಂದ ಮೊದಲಾಗುವ ಪದಗಳನ್ನು ಮಾತಿನ ಸನ್ನಿವೇಶಗಳಲ್ಲಿ 'ಅ'ಕಾರವಾಗಿ ಉಚ್ಚಾರಣೆ ಮಾಡುವ ಕೋಟಿಗಟ್ಟಲೆ ಕನ್ನಡಿಗರು ನಾಡಿನಾದ್ಯಂತ ಇದ್ದಾರೆ. ಕನ್ನಡಿಗರು ನಿತ್ಯ ಆಡುತ್ತಿರುವ ಕನ್ನಡ ಪದಗಳ ರೂಪದಲ್ಲಿ ಹಲವಾರು ಬಗೆಯ ಪ್ರಾದೇಶಿಕ ಮತ್ತು ಸಾಮಾಜಿಕ ಒಳನುಡಿಗಳಿವೆ. ಈ ಒಳನುಡಿಗಳಲ್ಲಿ ಬಳಕೆಯಾಗುವ ಮಾತಿನ ಧ್ವನಿಗಳಲ್ಲಿ ಇಂತಹ ವ್ಯತ್ಯಾಸಗಳು ಕಂಡುಬರುವುದು ಕನ್ನಡ ನುಡಿಯ ಉಚ್ಚಾರಣಾ ಪ್ರಭೇದವೇ ವಿನಾ ಅಸಹನೀಯವಲ್ಲ. ಕನ್ನಡವನ್ನೂ ಒಳಗೊಂಡಂತೆ ಜಗತ್ತಿನಲ್ಲಿರುವ ಭಾಷೆಗಳ ಪದಗಳು ಆಡುರೂಪ ಮತ್ತು ಬರಹದ ರೂಪದಲ್ಲಿ ಬಳಕೆಯಾಗುತ್ತವೆ. ಬರಹದ ರೂಪದಲ್ಲಿ 'ಹಾಸನ' ಎಂಬುದನ್ನು 'ಆಸನ' ಎಂದು ಬರೆದರೆ, ಅದು ತಪ್ಪಾಗುತ್ತದೆ. ಆಡುರೂಪದಲ್ಲಿ ತಪ್ಪಾಗುವುದಿಲ್ಲ. ಅಂತಹ ಉಚ್ಚಾರಣೆಯು ಮಾತನಾಡಿದವರ ಪ್ರಾದೇಶಿಕ ಇಲ್ಲವೇ ಸಾಮಾಜಿಕ ಉಪಭಾಷೆಯ ಪ್ರಕಾರವನ್ನು ಸೂಚಿಸುತ್ತದೆ.

ಸಿ.ಪಿ.ನಾಗರಾಜ, ಬೆಂಗಳೂರು

ಜನರ ಅಭಿಪ್ರಾಯ ಕೇಳುವವರು ಯಾರು?

ರಾಮನಗರವನ್ನು ಬೆಂಗಳೂರು ದಕ್ಷಿಣ ಎಂದು ಮಾಡುವ 'ಪ್ರತಿಜ್ಞೆ' ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರದು. ಅದು ಹಾಗೆ ಆಗಕೂಡದು ಎಂಬ 'ಹಟ' ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಅವರದು. ಇಬ್ಬರೂ ಹೆಸರಿನ ಪರ ಹಾಗೂ ವಿರುದ್ಧವಾಗಿ ಪರಸ್ಪರ ಪ್ರಯೋಗಿಸುತ್ತಿರುವ ಮೂದಲಿಕೆಯ ವಾಗ್ಬಾಣಗಳನ್ನು ಸಹಿಸಿಕೊಳ್ಳಬೇಕಾದ ದುರಂತ ಕನ್ನಡ ಜನತೆಯದು. ತಾವು ಮಾಡುವ ಕೆಲಸ, ಆಡುವ ಮಾತು ಎಲ್ಲವೂ ಜನರಿಗಾಗಿ, ತಮ್ಮ ಮಾತು, ನಡವಳಿಕೆಗಳು ತಾವು ಪ್ರತಿನಿಧಿಸುವ ಕ್ಷೇತ್ರದ ಜನರದೇ ಆಗಿರುತ್ತವೆ ಎಂಬ ಅಬದ್ಧ ತಿಳಿವಳಿಕೆಯೇ ಈಗಿನ ಎಲ್ಲ ಅನಗತ್ಯ ಸಮಸ್ಯೆಗಳಿಗೆ ಕಾರಣ. ಅಷ್ಟಕ್ಕೂ ಹೆಸರು ಬದಲಾವಣೆ ಮಾಡಲೇಬೇಕಾದ ತುರ್ತಾದರೂ ಏನೆನ್ನುವುದೇ ತಿಳಿಯುವುದಿಲ್ಲ. ಕಾಕತಾಳೀಯವಾದರೂ ಒಂದು ಸಂಗತಿಯನ್ನು ಗಮನಿಸಬೇಕು. 2007ರಲ್ಲಿ ಬಿಜೆಪಿ- ಜೆಡಿಎಸ್ ಮೈತ್ರಿ ಸರ್ಕಾರವಿದ್ದಾಗ ರಾಮನಗರ ಜಿಲ್ಲೆ ರೂಪುಗೊಂಡದ್ದು. ಅಂದು ಮುಖ್ಯಮಂತ್ರಿಯಾಗಿದ್ದವರು ಎಚ್.ಡಿ. ಕುಮಾರಸ್ವಾಮಿ. ಈಗ 2023ರಲ್ಲಿ ಬಿಜೆಪಿ- ಜೆಡಿಎಸ್ ಪಕ್ಷಗಳು ಮೈತ್ರಿ ಮಾಡಿಕೊಂಡಿರುವ ಸಮಯದಲ್ಲೇ ಆಗಿನ ಹೆಸರನ್ನು ಈಗ ಬದಲಾಯಿಸುವ ಛಲ! ಈ ಮಧ್ಯೆ, ರಾಮನಗರ ಜಿಲ್ಲೆಯ ಜನರ ಅಭಿಪ್ರಾಯ ಕೇಳುವವರು ಯಾರು?

ಸಾಮಗ ದತ್ತಾತ್ರಿ, ಬೆಂಗಳೂರು

ಕಾಂಗ್ರೆಸ್ ಮುಖಂಡರು ವಾಸ್ತವ ಅರಿಯಲಿ

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಗಳಿಸಿ ಅಧಿಕಾರದ ಗದ್ದುಗೆ ಏರಿದ ಕಾಂಗ್ರೆಸ್ ಪಕ್ಷವು ಆಂತರಿಕ ಕಚ್ಚಾಟದಿಂದ ತನ್ನ ಸಮಾಧಿಯನ್ನು ತಾನೇ ತೋಡಿಕೊಳ್ಳಲು ಹೊರಟಿದೆಯೇ ಎಂಬ ಅನುಮಾನ, ಆ ಪಕ್ಷದೊಳಗೆ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸುತ್ತಿರುವ ಜನರನ್ನು ಕಾಡತೊಡಗಿದೆ. ಬಿಜೆಪಿ ನೇತೃತ್ವದ ಸರ್ಕಾರದ ದುರಾಡಳಿತದಿಂದ ಬೇಸತ್ತ ಜನ ಹಲವಾರು ನಿರೀಕ್ಷೆಗಳನ್ನು ಇಟ್ಟುಕೊಂಡು ಕಾಂಗ್ರೆಸ್ ನೇತೃತ್ವದ ಸರ್ಕಾರವನ್ನು ಅಸ್ತಿತ್ವಕ್ಕೆ ತಂದರು. ಆದರೆ ಜನರ ಆ ನಿರೀಕ್ಷೆಗಳು ಹುಸಿಯಾಗುತ್ತಿವೆಯೇ?

ರಾಜ್ಯದಲ್ಲಿ ಬರ ಪರಿಸ್ಥಿತಿ ಉಂಟಾಗಿ ಮುಂದೇನು ಎಂಬ ಆತಂಕದಲ್ಲಿ ಜನ ಇದ್ದಾರೆ. ಅಭಿವೃದ್ಧಿ ಕಾರ್ಯಗಳು ಹೆಚ್ಚೂಕಮ್ಮಿ ಸ್ಥಗಿತಗೊಂಡಂತೆ ಆಗಿವೆ. ಭ್ರಷ್ಟಾಚಾರ ನಿಯಂತ್ರಣಕ್ಕೆ ಬಂದಿಲ್ಲ. ಅಧಿಕಾರಿವರ್ಗ ಹಿಂದಿನ ಗುಂಗಿನಿಂದ ಹೊರಬರುವ ಲಕ್ಷಣಗಳು ಗೋಚರಿಸುತ್ತಿಲ್ಲ. ಕಾಂಗ್ರೆಸ್ ಕಾರ್ಯಕರ್ತರ ಅವಿರತ ಶ್ರಮದ ಫಲವಾಗಿ ಸಿಕ್ಕಿದ ಒಂದು ಉತ್ತಮ ಅವಕಾಶವನ್ನು ಆ ಪಕ್ಷದ ನಾಯಕರೇ ಪರಸ್ಪರ ಕಾಲನ್ನು ಎಳೆದುಕೊಳ್ಳುವ ಮೂಲಕ ಹಾಳುಮಾಡಿಕೊಳ್ಳುತ್ತಿದ್ದಾರೆ ಎನಿಸುತ್ತಿದೆ. ಇಂಥ ಪರಿಸ್ಥಿತಿಯಲ್ಲಿ, ಸರ್ಕಾರವು ರಾಜ್ಯದ ಸಮಸ್ಯೆಗಳ ನಿವಾರಣೆಯತ್ತ ಮುಖಮಾಡದಿದ್ದರೆ ಜನ ಖಂಡಿತಾ ಕ್ಷಮಿಸಲಾರರು ಎಂಬ ವಾಸ್ತವವನ್ನು ಆ ಪಕ್ಷದ ನಾಯಕರು ಬೇಗ ಅರಿತುಕೊಳ್ಳಬೇಕಾಗಿದೆ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಮಾಸ್–ಇಸ್ರೇಲ್: ಕದನ ವಿರಾಮ ನಿರ್ಣಯ

ಜಗತ್ತು ಒಂದು ಬಣ ಮೂರು



ಯುದ್ಧದಲ್ಲಿ ಮಕ್ಕಳು ಮತ್ತು ಮಹಿಳೆಯರ ಮೇಲೆ ದಾಳಿ ನಡೆಸುವುದು ಯುದ್ಧಾಪರಾಧ ಎಂದು ಅಂತರರಾಷ್ಟ್ರೀಯ ಯುದ್ಧ ನಿಯಮಗಳು ಹೇಳುತ್ತವೆ. ಜಗತ್ತಿನ ಎಲ್ಲಾ ದೇಶಗಳು ಈ ನಿಯಮಗಳನ್ನು ಒಪ್ಪಿಕೊಂಡಿವೆ. ಗಾಜಾಪಟ್ಟಿಯ ಮೇಲೆ ಇಸ್ರೇಲ್ ಇದೇ 24ರಂದು ನಡೆಸಿದ ವಾಯುದಾಳಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ತನ್ನ ಮಗುವನ್ನು ಎದಗವಚಿಕೊಂಡು ಕೂತಿದ್ದ ಪ್ಯಾಲೆಸ್ಟೀನಿ ತಂದೆ

ಪ್ರಜಾವಾಣಿ ವಾರ್ತೆ

ಪ್ಯಾಲೆಸ್ಟೀನ್‌ನ ಹಮಾಸ್ ಮತ್ತು ಇಸ್ರೇಲ್ ನಡುವಣ ಯುದ್ಧದಲ್ಲಿ ಈವರೆಗೆ 8,500ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಇದರಲ್ಲಿ ಪ್ಯಾಲೆಸ್ಟೀನಿಯನ್ನರ ಸಂಖ್ಯೆಯೇ 7,000 ಮೀರುತ್ತದೆ. ಯುದ್ಧದ ಭಾಗವಾಗಿ ಪ್ಯಾಲೆಸ್ಟೀನ್‌ನ ಗಾಜಾಪಟ್ಟಿಗೆ ಆಹಾರ, ವಿದ್ಯುತ್ ಮತ್ತು ನೀರು ಪೂರೈಕೆಯನ್ನು ಇಸ್ರೇಲ್ ಸಂಪೂರ್ಣವಾಗಿ ಸ್ಥಗಿತಗೊಳಿಸಿದೆ. ವಿಶ್ವ ಸಂಸ್ಥೆ ಸೇರಿದಂತೆ ಹಲವು ಸಂಸ್ಥೆಗಳು ಗಾಜಾಪಟ್ಟಿಗೆ ನೆರವು ಸೇವೆ ಮತ್ತು ಸರಕುಗಳನ್ನು ಪೂರೈಸದಂತೆ ಗಡಿಯನ್ನು ಇಸ್ರೇಲ್ ಮುಚ್ಚಿದೆ.

ಗಾಜಾಪಟ್ಟಿಯಲ್ಲಿ ಮಾನವೀಯ ನೆರವು ಒದಗಿಸಲು ಅವಕಾಶ ಮಾಡಿಕೊಡಬೇಕು ಎಂದು ಹಲವು ದೇಶಗಳು ಇಸ್ರೇಲ್ ಅನ್ನು ಒತ್ತಾಯಿಸಿದ್ದವು. ಈ ಸಂಬಂಧ ವಿಶ್ವ ಸಂಸ್ಥೆಯ 'ಭದ್ರತಾ ಮಂಡಳಿ'ಯಲ್ಲಿ ನಾಲ್ಕು ನಿರ್ಣಯಗಳನ್ನು ಮಂಡಿಸಲಾಗಿತ್ತು. ಆದರೆ ಅಮೆರಿಕ ಮತ್ತು ರಷ್ಯಾ ತಮ್ಮ ವಿಟೋ ಅಧಿಕಾರ ಬಳಸಿದ್ದರಿಂದ ಈ ನಿರ್ಣಯಗಳು ಬಿದ್ದುಹೋದವು. ಪ್ಯಾಲೆಸ್ಟೀನ್–ಇಸ್ರೇಲ್ ಮಧ್ಯೆ ಕದನ ವಿರಾಮ ತರುವಲ್ಲಿ ಭದ್ರತಾ ಮಂಡಳಿ ವಿಫಲವಾಯಿತು. ಈ ಕಾರಣದಿಂದಲೇ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಜೋರ್ಡನ್ ನಿರ್ಣಯವೊಂದನ್ನು ಮಂಡಿಸಿತು.

ಗಾಜಾಪಟ್ಟಿಯಲ್ಲಿ ನಾಗರಿಕರ ಮೇಲೆ ದಾಳಿ ನಡೆಸಲಾಗುತ್ತಿದೆ. ಅಂತರರಾಷ್ಟ್ರೀಯ ಯುದ್ಧನೀತಿಗಳನ್ನು ಉಲ್ಲಂಘಿಸಿ ನಾಗರಿಕ ಪ್ರದೇಶಗಳು, ಆಸ್ಪತ್ರೆ, ಶಾಲೆ ಮತ್ತು ನಿರಾಶ್ರಿತರ ಶಿಬಿರಗಳ ಮೇಲೆ ದಾಳಿ ನಡೆಸಲಾಗುತ್ತಿದೆ. ಅಗತ್ಯ ವಸ್ತುಗಳ ಪೂರೈಕೆಯನ್ನು ಸ್ಥಗಿತಗೊಳಿಸಿ, ನಾಗರಿಕರ ವಿರುದ್ಧ ಪರೋಕ್ಷ ಯುದ್ಧ ನಡೆಸಲಾಗುತ್ತಿದೆ. ಇವೆಲ್ಲವೂ ನಿಲ್ಲಬೇಕು. ಯಾರೋ ಮಾಡಿದ ದಾಳಿಗೆ ನಾಗರಿಕರನ್ನು ಈ ರೀತಿ ಅಮಾನವೀಯವಾಗಿ ಶಿಕ್ಷಿಸುವುದನ್ನು ನಿಲ್ಲಿಸಬೇಕು. ಯುದ್ಧವನ್ನು ನಿಲ್ಲಿಸಬೇಕು ಮತ್ತು ಶಾಂತಿ ಮಾತುಕತೆಯ ಮೂಲಕ ಪರಿಹಾರ ಕಂಡುಕೊಳ್ಳಬೇಕು ಎಂಬುದೇ ಈ ನಿರ್ಣಯದ ಉದ್ದೇಶವಾಗಿತ್ತು. ನಿರ್ಣಯವನ್ನು ಮಂಡಿಸುವ ಮೊದಲೇ 40ಕ್ಕೂ ಹೆಚ್ಚು ದೇಶಗಳು ನಿರ್ಣಯಕ್ಕೆ ಸಹಿ ಹಾಕಿದ್ದವು.

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಿರ್ಣಯವನ್ನು ಮಂಡಿಸಿ, ಅದನ್ನು ಚರ್ಚೆಗೆ ಎತ್ತಿಕೊಳ್ಳಲಾಗಿತ್ತು. ಕೆನಡಾವು ಅದಕ್ಕೆ ಕೆಲವು ಬದಲಾವಣೆಗಳನ್ನು ಸೂಚಿಸಿತ್ತು. 'ನಿರ್ಣಯದಲ್ಲಿ ಹಮಾಸ್ ದಾಳಿ ನಡೆಸಿದೆ ಎಂಬುದನ್ನು ಉಲ್ಲೇಖಿಸಿಲ್ಲ. ಆ ಅಂಶವನ್ನು ಸೇರಿಸಬೇಕು' ಎಂದು ತಿದ್ದುಪಡಿ ಮಂಡಿಸಿತು. ಈ ತಿದ್ದುಪಡಿಯ ವಿರುದ್ಧವಾಗಿಯೇ ಹೆಚ್ಚಿನ ಮತಗಳು ಬಂದಿದ್ದರಿಂದ, ತಿದ್ದುಪಡಿ ಬಿದ್ದುಹೋಯಿತು. 'ಹಮಾಸ್ ದಾಳಿ ನಡೆಸಿದೆ ಎಂಬ ಉಲ್ಲೇಖವು ನಿರ್ಣಯದಲ್ಲಿ ಇಲ್ಲ. ಅದೇ ರೀತಿ ಇಸ್ರೇಲ್ ದಾಳಿ ನಡೆಸಿದೆ ಎಂಬ ಉಲ್ಲೇಖವೂ ಇಲ್ಲ. ಸೇರಿಸಿದರೆ ಎರಡೂ ಹೆಸರುಗಳನ್ನು ಸೇರಿಸಬೇಕು' ಎಂಬುದು ತಿದ್ದುಪಡಿಯನ್ನು ವಿರೋಧಿಸಿದವರ ಪ್ರತಿಪಾದನೆಯಾಗಿತ್ತು.

ಯುದ್ಧವನ್ನು ನಿಲ್ಲಿಸಬೇಕು ಎಂದು ಜೋರ್ಡನ್ ಮಂಡಿಸಿದ್ದ ನಿರ್ಣಯವನ್ನು ಮತಕ್ಕೆ ಹಾಕಲಾಯಿತು. ಸಭೆಯಲ್ಲಿ ಹಾಜರಿದ್ದ 179 ದೇಶಗಳಲ್ಲಿ 121 ದೇಶಗಳು ನಿರ್ಣಯದ ಪರವಾಗಿ ಮತ ಚಲಾಯಿಸಿದವು. ಇಸ್ರೇಲ್, ಅಮೆರಿಕ ಸೇರಿ 14 ದೇಶಗಳು ನಿರ್ಣಯದ ವಿರುದ್ಧ ಮತ ಚಲಾಯಿಸಿದವು. ಭಾರತವೂ ಸೇರಿ 44 ದೇಶಗಳು ಮತದಾನದಿಂದ ದೂರ ಉಳಿದವು. ಆದರೆ ಬಹುಮತ ದೊರೆತ ಕಾರಣದಿಂದ, ಯುದ್ಧ ನಿಲ್ಲಿಸಬೇಕು ಎಂಬ ನಿರ್ಣಯಕ್ಕೆ ಗೆಲುವಾಯಿತು.

ಆದರೆ, ಯುದ್ಧ ನಿಲ್ಲಿಸಬೇಕಾದ ಇಸ್ರೇಲ್ ಮತ್ತು ಇಸ್ರೇಲ್‌ಗೆ ಬೆಂಬಲ ನೀಡುತ್ತಿರುವ ಅಮೆರಿಕ ನೇತೃತ್ವದ ದೇಶಗಳು ನಿರ್ಣಯದ ವಿರುದ್ಧವಾಗಿಯೇ ಇವೆ. ಹೀಗಾಗಿ ಈ ನಿರ್ಣಯವು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ಬರುತ್ತದೆ ಎಂಬುದನ್ನು ಕಾದು ನೋಡಬೇಕು.

'ಯುದ್ಧವನ್ನು ನಿಲ್ಲಿಸಿ'

ನಾವು ಇಲ್ಲಿ ಮಾತನಾಡುವ ಹೊತ್ತಿಗೆ ಗಾಜಾದಲ್ಲಿ ಜನರನ್ನು ಕೊಲ್ಲಲಾಗುತ್ತಿದೆ. ಆಸ್ಪತ್ರೆಗಳು ಸ್ಥಗಿತಗೊಳ್ಳುತ್ತಿವೆ, ಎಲ್ಲೂ ಸುರಕ್ಷಿತ ತಾಣವಿಲ್ಲದೆ, ಜನರು ಒಂದು ಸ್ಥಳದಿಂದ ಇನ್ನೊಂದೆಡೆಗೆ ವಲಸೆ ಹೋಗುತ್ತಿದ್ದಾರೆ. ನಮ್ಮವರಿಗೆ ಅಳುವುದಕ್ಕೂ ಸಮಯ ಸಿಗುತ್ತಿಲ್ಲ. ಸತ್ತವರಿಗಾಗಿ ಈ ಯುದ್ಧವನ್ನು ನಿಲ್ಲಿಸದಿದ್ದರೂ ಜನರನ್ನು ಉಳಿಸುವುದಕ್ಕಾದರೂ ಈ ಯುದ್ಧವನ್ನು ನಿಲ್ಲಿಸಿ.

ಪ್ರತಿ ದಿನ ಪ್ಯಾಲೆಸ್ಟೀನ್‌ನ 1000 ಜನರನ್ನು ಹತ್ಯೆ ಮಾಡಲಾಗುತ್ತಿದೆ. ಹತ್ಯೆಯನ್ನು ಕೊನೆಗಾಣಿಸುವ ತುರ್ತು ಇದೆ ಎನ್ನುವುದನ್ನು ಯಾಕಾಗಿ ಯಾರೂ ಅರಿಯುತ್ತಿಲ್ಲ. ಇಸ್ರೇಲ್ ಈಗ ಏನು ಮಾಡುತ್ತಿದೆಯೊ ಅದನ್ನು ಸಮರ್ಥಿಸಲು ನಮ್ಮನ್ನು ನೀವು 80 ವರ್ಷಗಳ ಹಿಂದಕ್ಕೆ ತಳ್ಳುತ್ತಿದ್ದೀರ. ಪ್ಯಾಲೆಸ್ಟೀನಿಯರು ಇಸ್ರೇಲ್‌ನ ಅತಿಕ್ರಮಣವನ್ನು ದಶಕಗಳಿಂದ ಅನುಭವಿಸುತ್ತಿದ್ದಾರೆ. ಗಾಜಾಪಟ್ಟಿಯಲ್ಲಿನ ದಿಗ್ಬಂಧನವನ್ನು ಕಳೆದ 16 ವರ್ಷಗಳಿಂದ ಅನುಭವಿಸುತ್ತಿದ್ದೇವೆ.

ಯುದ್ಧದ ಕರಾಳತೆಯಿಂದ ಮುಂದಿನ ಪೀಳಿಗೆಯನ್ನು ರಕ್ಷಿಸಲು ವಿಶ್ವಸಂಸ್ಥೆಯ ಸದಸ್ಯರು ಸಹಕರಿಸಿ. ಹತ್ಯೆಯನ್ನು ನಿಲ್ಲಿಸಲು ಮತ ನೀಡಿ, ಹುಚ್ಚುತನವನ್ನು ಕೊನೆಗಾಣಿಸಲು ಮತ ನೀಡಿ

– ಜೋರ್ಡನ್ ನಿರ್ಣಯದ ಮೇಲಿನ ಚರ್ಚೆಯ ವೇಳೆ ಪ್ಯಾಲೆಸ್ಟೀನ್‌ನ ಮನವಿ

'ಇತಿಹಾಸದ ಕರಾಳ ದಿನ'

ನಿರ್ಣಯ ಮಂಡಿಸಿದ ಈ ದಿನವನ್ನು ಕರಾಳ ದಿನವನ್ನಾಗಿ ದೂಷಿಸುವಂತಾಗುತ್ತದೆ. ವಿಶ್ವಸಂಸ್ಥೆಗೆ ಒಂದಿಷ್ಟೂ ನ್ಯಾಯಪರತೆ ಇಲ್ಲ ಎಂಬುದು ಸಾಬೀತಾಗಿದೆ. ಇಸ್ರೇಲ್‌ಗೆ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕೂ ಇಲ್ಲ ಎಂದು ವಿಶ್ವಸಂಸ್ಥೆ ಅಭಿಪ್ರಾಯಪಡುತ್ತಿದೆ.

ಹಮಾಸ್‌ನೊಂದಿಗೆ ಯಾವ ಮಾತುಕತೆಯೂ, ಚರ್ಚೆಯು ಬೇಕಿಲ್ಲ. ಹಮಾಸ್‌ನವರು ದೌರ್ಜನ್ಯ ನಡೆಸಲು ಮುಂದಾದರೆ ಇಸ್ರೇಲ್ ಸುಮ್ಮನೆ ಕೂರುವುದಿಲ್ಲ. ಹಮಾಸ್ ಹೆಸರನ್ನು ಎಲ್ಲಿಯೂ ನಮೂದಿಸದೆ, ಯುದ್ಧವು ಒಮ್ಮಿಂದೊಮ್ಮೆಲೆ ಪ್ರಾರಂಭವಾಯಿತು ಎನ್ನುವಂತಿದೆ ವಿಶ್ವಸಂಸ್ಥೆಯ ಈ ನಿರ್ಣಯ.ಇಲ್ಲಿ ಏನಾಗುತ್ತಿದೆ? ಇಸ್ರೇಲ್ ಕೈಯನ್ನು ಕಟ್ಟಿಹಾಕುವ ಗುರಿಯನ್ನು ಹಾಕಿಕೊಂಡಂತಿದೆಯೇ?

ಯಾರಿಗಾದರೂ ಈ ಹಿಂಸೆಯನ್ನು ನಿಲ್ಲಿಸಬೇಕು ಎಂಬ ಇಚ್ಛೆ ಇದ್ದರೆ, ಅವರು ಮೊದಲು ಹಮಾಸ್ ಅನ್ನು ಮಂಡಿಯೂರುವಂತೆ ಒತ್ತಾಯಿಸಲಿ. ಒತ್ತೆಯಾಳುಗಳನ್ನು ವಾಪಸ್ ನೀಡುವಂತೆ ಹೇಳಲಿ. ಹೀಗಾದರೆ, ಯುದ್ಧವು ತಕ್ಷಣವೇ ನಿಲ್ಲುತ್ತದೆ

– ಜೋರ್ಡನ್ ನಿರ್ಣಯದ ಮೇಲಿನ ಚರ್ಚೆಯ ವೇಳೆ ಇಸ್ರೇಲ್‌ನ ಪ್ರತಿಪಾದನೆ

ನಿರ್ಣಯಕ್ಕೆ ಬಹುಮತ

14 ಇಸ್ರೇಲ್ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕು ಹೊಂದಿದೆ ಎಂದು ಮತಚಲಾಯಿಸಿದ ದೇಶಗಳು

44 ಈ ನಿರ್ಣಯದ ಮೇಲಿನ ಮತದಾನದಿಂದ ಹಿಂದೆ ಸರಿದ ದೇಶಗಳು

121 ಕದನ ವಿರಾಮ ಬೇಕು ಎಂಬ ನಿರ್ಣಯದ ಪರ ಮತಚಲಾಯಿಸಿದ ದೇಶಗಳು

ನಿರ್ಣಯದ ಮುಖ್ಯಾಂಶಗಳು

ಪ್ಯಾಲೆಸ್ಟೀನ್ ಮತ್ತು ಇಸ್ರೇಲ್ ನಾಗರಿಕರನ್ನು ಗುರಿಯಾಗಿಸಿಕೊಂಡು ನಡೆಸಿದ ಎಲ್ಲಾ ಭಯೋತ್ಪಾದಕ ದಾಳಿಗಳನ್ನು ಖಂಡಿಸುತ್ತಲೇ ಈ ನಿರ್ಣಯವನ್ನು ಸಿದ್ಧಪಡಿಸಲಾಗಿದೆ. ಇದೇ ಅಕ್ಟೋಬರ್ 7ರಂದು ನಡೆದ ದಾಳಿಯಿಂದ ಭುಗಿಲೆದ್ದ ಹಿಂಸಾಚಾರ ಮತ್ತು ನಂತರದ ಬೆಳವಣಿಗೆಯಲ್ಲಿ ಗಾಜಾಪಟ್ಟಿ, ಆಕ್ರಮಿತ ಪ್ಯಾಲೆಸ್ಟೀನ್ ಪ್ರದೇಶ, ಪೂರ್ವ ಜೆರುಸಲೇಂ ಮತ್ತು ಇಸ್ರೇಲ್‌ನಲ್ಲಿ ನಡೆಯುತ್ತಿರುವ ವಿಧ್ವಂಸಕಾರಿ ಕೃತ್ಯಗಳ ಬಗ್ಗೆ ಕಳವಳ ವ್ಯಕ್ತಪಡಿಸುತ್ತಲೇ ಈ ನಿರ್ಣಯವನ್ನು ಮಂಡಿಸಲಾಗುತ್ತಿದೆ. ನಿರ್ಣಯದ ಪ್ರಮುಖ ಆಗ್ರಹಗಳು ಇಂತಿವೆ...

1. ಈ ಪ್ರದೇಶದಲ್ಲಿನ ಪರಸ್ಪರ ದ್ವೇಷಮಯ ದಾಳಿಗಳಿಗೆ ತಕ್ಷಣವೇ ವಿರಾಮ ಹಾಕಬೇಕು
2. ನಾಗರಿಕರ ಹಕ್ಕುಗಳು ಮತ್ತು ನಾಗರಿಕರ ಸ್ವತ್ತುಗಳನ್ನು ಕಾಪಾಡಲು ಎರಡೂ ಕಡೆಯವರು ಅಂತರರಾಷ್ಟ್ರೀಯ ಮಾನವೀಯ ನೆರವು ಕಾನೂನುಗಳು, ಅಂತರರಾಷ್ಟ್ರೀಯ ಮಾನವ ಹಕ್ಕುಗಳ ರಕ್ಷಣಾ ಕಾನೂನುಗಳನ್ನು ಪಾಲಿಸಬೇಕು
3. ಗಾಜಾಪಟ್ಟಿಗೆ ಎಲ್ಲಾ ಸ್ವರೂಪದ ನಾಗರಿಕ ಪೂರೈಕೆಗಳನ್ನು ಒದಗಿಸಲು ತಕ್ಷಣವೇ ಅನುವು ಮಾಡಿಕೊಡಬೇಕು

4, 5. ಸಂಘರ್ಷಪೀಡಿತ ಗಾಜಾಪಟ್ಟಿಯಲ್ಲಿ ನಾಗರಿಕರಿಗೆ ಮಾನವೀಯ ನೆರವನ್ನು ಒದಗಿಸಲು ವಿಶ್ವ ಸಂಸ್ಥೆಯ ಏಜೆನ್ಸಿಗಳಿಗೆ ಮತ್ತು ರೆಡ್‌ಕ್ರಾಸ್ ಸೇರಿ ಎಲ್ಲಾ ಸ್ವಯಂಸೇವಾ ಸಂಸ್ಥೆಗಳಿಗೆ ಅವಕಾಶ ಮಾಡಿಕೊಡಬೇಕು. ಗಾಜಾಪಟ್ಟಿಯಲ್ಲಿ ಮಕ್ಕಳು, ಮಹಿಳೆಯರು ಸೇರಿ ಎಲ್ಲಾ ನಾಗರಿಕರು ಮತ್ತು ಸ್ವಯಂಸೇವಕರು ಮುಕ್ತವಾಗಿ ಮತ್ತು ಸುರಕ್ಷಿತವಾಗಿ ಓಡಾಡಲು ತಕ್ಷಣವೇ ಅವಕಾಶ ಮಾಡಿಕೊಡಬೇಕು

6. ಗಾಜಾಪಟ್ಟಿಯಲ್ಲಿನ ಜನರನ್ನು ದಾಳಿಯ ಮೂಲಕ ಒತ್ತಾಯಪೂರ್ವಕವಾಗಿ ಸ್ಥಳಾಂತರ ಮಾಡುವುದನ್ನು ತಕ್ಷಣವೇ ನಿಲ್ಲಿಸಬೇಕು
7. ಎರಡೂ ಕಡೆಯವರು ಒತ್ತೆಯಾಳುಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು
8. ಶಾಲೆಗಳು, ಆಸ್ಪತ್ರೆಗಳು ಮತ್ತು ವಿಶ್ವಸಂಸ್ಥೆಯ ನಿರಾಶ್ರಿತ ಶಿಬಿರಗಳ ಮೇಲೆ ದಾಳಿ ನಡೆಸುವುದನ್ನು ತಕ್ಷಣವೇ ನಿಲ್ಲಿಸಬೇಕು

9, 10. ಪ್ಯಾಲೆಸ್ಟೀನ್ ನಾಗರಿಕರು ಮತ್ತು ಅವರ ಹಕ್ಕುಗಳ ರಕ್ಷಣೆಗೆ ತಕ್ಷಣವೇ ಕಾರ್ಯತಂತ್ರವೊಂದನ್ನು ರೂಪಿಸಬೇಕು

11, 12. ಈ ಪ್ರದೇಶದಲ್ಲಿ ದಾಳಿ ಮತ್ತು ಯುದ್ಧದ ಮನಃಸ್ಥಿತಿಯನ್ನು ಎರಡೂ ಕಡೆಯವರು ನಿಗ್ರಹಿಸಿಕೊಳ್ಳಬೇಕು

13. ಪ್ಯಾಲೆಸ್ಟೀನ್–ಇಸ್ರೇಲ್ ಸಂಘರ್ಷವನ್ನು ಶಾಂತಿ ಮಾತುಕತೆಯ ಮೂಲಕ ಮಾತ್ರ ಬಗೆಹರಿಸಲು ಸಾಧ್ಯ. ಅದಕ್ಕಾಗಿ ಪ್ಯಾಲೆಸ್ಟೀನ್–ಇಸ್ರೇಲ್ ಎಂಬ ಎರಡು ದೇಶಗಳ ಸ್ಥಾಪನೆಯ ದ್ವಿರಾಷ್ಟ್ರ ಸೂತ್ರವನ್ನು ಪರಿಗಣಿಸಬೇಕು



ಮಣ್ಣಿಗೆ ಬಿದ್ದ ಬದುಕು: ಗಾಜಾಪಟ್ಟಿಗೆ ನೀರು, ವಿದ್ಯುತ್ ಮತ್ತು ಆಹಾರ ಪೂರೈಕೆಯನ್ನು ಇಸ್ರೇಲ್ ಸ್ಥಗಿತಗೊಳಿಸಿದೆ. ಇದು ಯುದ್ಧದ ನಿಯಮ ಉಲ್ಲಂಘನೆ ಎಂದು ವಿಶ್ವ ಸಂಸ್ಥೆ ಹೇಳಿದೆ. ಶುದ್ಧನೀರು ಸಿಗದೇ ಇರುವ ಕಾರಣಕ್ಕೆ ಗಾಜಾಪಟ್ಟಿಯ ಜನರು ಪಾತ್ರೆ ತೊಳೆಯಲು, ಅಡುಗೆ ಮಾಡಿಕೊಳ್ಳಲು, ಬಟ್ಟೆ ತೊಳೆಯಲು ಸಮುದ್ರದ ನೀರನ್ನೇ ಬಳಸುತ್ತಿದ್ದಾರೆ

–ಎಎಫ್‌ಪಿ ಚಿತ್ರ

'ಇಸ್ರೇಲ್ ನಿಯಮ ಮೀರಬಾರದು'

ಹಮಾಸ್‌ನವರು ಅತ್ಯಂತ ಭಯಾನಕವಾದ ಕೃತ್ಯಗಳನ್ನು ಎಸಗುತ್ತಿದ್ದಾರೆ. ಏನೇ ಇದ್ದರೂ ಭಯೋತ್ಪಾದನಾ ಕೃತ್ಯಗಳಿಗೆ ಸಮರ್ಥನೆಗಳನ್ನು ನೀಡಲು ಸಾಧ್ಯವಿಲ್ಲ. ಹಮಾಸ್ ಭಯೋತ್ಪಾದಕರಿಗೆ ನಾಗರಿಕರು ಲೆಕ್ಕಕ್ಕೇ ಇಲ್ಲದವರು. ಹಮಾಸ್‌ನಿಂದ ತನ್ನ ಜನರನ್ನು ರಕ್ಷಿಸಿಕೊಳ್ಳುವ ಜವಾಬ್ದಾರಿ ಮತ್ತು ಹಕ್ಕು ಇಸ್ರೇಲ್‌ಗೆ ಇದೆ. ಆದರೆ, ಇಸ್ರೇಲ್ ಯುದ್ಧದ ನಿಯಮಗಳನ್ನು, ಅಂತರರಾಷ್ಟ್ರೀಯ ಮಾನವೀಯ ನೆರವು ಕಾನೂನನ್ನು ಮೀರಬಾರದು

– ಜೋರ್ಡನ್ ನಿರ್ಣಯದ ಮೇಲಿನ ಚರ್ಚೆಯ ವೇಳೆ ಅಮೆರಿಕದ ಪ್ರತಿಪಾದನೆ

ಫ್ರಾನ್ಸ್: ಕದನವಿರಾಮವನ್ನು ಘೋಷಿಸಲು ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಬೇಕಿದೆ. ಯಾಕೆಂದರೆ ಗಾಜಾದ ಪರಿಸ್ಥಿತಿಯು ಅತ್ಯಂತ ಕಳವಳಕಾರಿಯಾಗಿದೆ. ಈ ಪರಿಸ್ಥಿತಿಯು ಇನ್ನಷ್ಟು ಹದಗೆಡದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ದ್ವಿರಾಷ್ಟ್ರ ಸೂತ್ರ ಒಂದೇ ಪರಿಹಾರವಾಗಿದೆ

ಸೌದಿ ಅರೇಬಿಯಾ: ಸಾಮೂಹಿಕವಾಗಿ ಜನರನ್ನು ಶಿಕ್ಷಿಸುವ ಸಲುವಾಗಿ ಗಾಜಾಪಟ್ಟಿಯ ಜನರನ್ನು ಒತ್ತಾಯಪೂರ್ವಕವಾಗಿ ಸ್ಥಳಾಂತರಿಸುವುದನ್ನು, ಹಸಿವನ್ನು ಯುದ್ಧದ ಅಸ್ತ್ರವನ್ನಾಗಿ ಮಾಡಿಕೊಂಡಿರುವುದನ್ನು ಖಂಡಿಸುತ್ತೇವೆ. ಇಸ್ರೇಲ್‌ನ ಅತಿಕ್ರಮಣವನ್ನು ತಡೆಯಲು ಅಂತರರಾಷ್ಟ್ರೀಯ ಸಮುದಾಯವು ವಿಫಲವಾಗಿದೆ ಹಾಗೂ ಅದರ ಎಲ್ಲ ಕೃತ್ಯಗಳಿಗೂ ಮೌನವಹಿಸಿದ್ದೂ ಇಂದಿನ ಈ ದುರಂತಕ್ಕೆ ಕಾರಣ

ಐರೋಪ್ಯ ಒಕ್ಕೂಟ: ಇಸ್ರೇಲ್–ಹಮಾಸ್ ನಡುವಣ ಯುದ್ಧದ ಸಂಬಂಧ ಭದ್ರತಾ ಮಂಡಳಿಯಲ್ಲಿ ಮಂಡಿಸಿದ ನಿರ್ಣಯಗಳಿಗೆ ಪ್ರಬಲ ದೇಶಗಳು ತಮ್ಮ ವಿಟೋ ಅಧಿಕಾರವನ್ನು ಬಳಸಿದ್ದರ ಬಗ್ಗೆ ಅತ್ಯಂತ ವಿಷಾದವಿದೆ. ಯಾಕೆಂದರೆ, ಈ ಬಿಕ್ಕಟ್ಟನ್ನು ಕೊನೆಗಾಣಿಸಲು ಭದ್ರತಾ ಮಂಡಳಿಯ ಶಕ್ತಿಯುತ, ಸಕಾಲಿಕ ಸಂದೇಶದ ಅಗತ್ಯವಿತ್ತು. (ಐರೋಪ್ಯ ಒಕ್ಕೂಟದ ಕೆಲವು ದೇಶಗಳು ನಿರ್ಣಯದ ಪರ ಮತ ಚಲಾಯಿಸಿದ್ದರೆ, ಕೆಲವು ದೇಶಗಳು ವಿರುದ್ಧ ಮತಚಲಾಯಿಸಿವೆ)

ಈಜಿಪ್ಟ್: ಗಾಜಾದಲ್ಲಿನ ಪ್ಯಾಲೆಸ್ಟೀನ್ ಜನರ ಮೂಲಭೂತ ಹಕ್ಕುಗಳು ದಮನವಾಗುತ್ತಿರುವ ಈ ಹೊತ್ತಿನಲ್ಲಿ ಮೌನ ವಹಿಸುವುದು ನಮ್ಮ ಆಯ್ಕೆಯಾಗಬಾರದು. ನಾಗರಿಕರನ್ನು ಗುರಿಯಾಗಿಸಬಾರದು, ಭಯೋತ್ಪಾದನೆ ಇರಬಾರದು, ಅಂತರರಾಷ್ಟ್ರೀಯ ಮಾನವೀಯ ನೆರವು ಕಾನೂನನ್ನು ಉಲ್ಲಂಘಿಸಬಾರದು, ಆಸ್ಪತ್ರೆಗಳನ್ನು, ವೈದ್ಯಕೀಯ ಕೇಂದ್ರಗಳನ್ನು ಸ್ಫೋಟಿಸಬಾರದು, ಮಕ್ಕಳನ್ನು ಕೊಲ್ಲಬಾರದು, ಬದುಕಿನ ಮೂಲಾಧಾರವಾದ ನೀರಿನ ಹರಿವನ್ನು ಕಡಿತಗೊಳಿಸಬಾರದು. ಇಲ್ಲಿ ಇಸ್ರೇಲ್‌ಗೆ ಒಂದು ನೀತಿ ಪ್ಯಾಲೆಸ್ಟೀನ್‌ಗೆ ಒಂದು ನೀತಿ ಎನ್ನುವಂತಿರಬಾರದು

ಇರಾನ್: ಅಮೆರಿಕ ಸೇರಿದಂತೆ ಹಲವು ಐರೋಪ್ಯ ದೇಶಗಳು ಇಸ್ರೇಲ್ ಪಕ್ಷವನ್ನು ವಹಿಸಿವೆ ಮತ್ತು ಇವುಗಳು ಪ್ಯಾಲೆಸ್ಟೇನ್ ವಿಮೋಚನಾ ಚಳವಳಿಯನ್ನು 'ಭಯೋತ್ಪಾದನೆ' ಎಂದು ಕರೆಯುತ್ತಿವೆ. ದುರದೃಷ್ಟವಶಾತ್ ಇದು ನಮ್ಮ ಜಗತ್ತಿನ ಇಂದಿನ ಸ್ಥಿತಿ. ಗಾಜಾ ಜನರ, ಮಹಿಳೆಯರ, ಮಕ್ಕಳ ವಿರುದ್ಧದ ಯುದ್ಧದಲ್ಲಿ ಅಮೆರಿಕವು ಇಸ್ರೇಲ್‌ಗೆ ರಾಕೆಟ್‌ಗಳನ್ನು, ಬಾಂಬುಗಳನ್ನು ಕಳುಹಿಸುವ ಬದಲು, ಗಾಜಾದಲ್ಲಿ ಪ್ಯಾಲೆಸ್ಟೀನ್‌ನಲ್ಲಿ ನಡೆಯುತ್ತಿರುವ ನರಮೇಧವನ್ನು ನಿಲ್ಲಿಸಬೇಕು

ಆಧಾರ: ವಿಶ್ವ ಸಂಸ್ಥೆಯಲ್ಲಿ ಜೋರ್ಡನ್ ಮಂಡಿಸಿದ ನಿರ್ಣಯ

ಜನವರಿಯಲ್ಲಿ ಬರ್ತಾನೆ 'ಆರಾಮ್ ಅರವಿಂದ್ ಸ್ವಾಮಿ'

ಅಭಿಷೇಕ್ ಶೆಟ್ಟಿ ಹಾಗೂ ಅನೀಶ್ ತೇಜೇಶ್ವರ್ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ 'ಆರಾಮ್ ಅರವಿಂದ್ ಸ್ವಾಮಿ' ಸಿನಿಮಾ ಜನವರಿಯಲ್ಲಿ ಬಿಡುಗಡೆಗೆ ಸಜ್ಜಾಗುತ್ತಿದೆ.

ಈ ಸಿನಿಮಾದಲ್ಲಿ ಮಿಲನ ನಾಗರಾಜ್ ಹಾಗೂ ಹೃತಿಕಾ ಶ್ರೀನಿವಾಸ್ ನಾಯಕಿಯರಾಗಿ ನಟಿಸುತ್ತಿದ್ದಾರೆ. ಸದ್ಯ ಚಿತ್ರೀಕರಣ ಪೂರ್ಣಗೊಳಿಸಿ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಚಿತ್ರತಂಡ ತೊಡಗಿಸಿಕೊಂಡಿದೆ. ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿದ ಚಿತ್ರತಂಡವು ಈ ಕುರಿತು ಮಾಹಿತಿ ಹಂಚಿಕೊಂಡಿದೆ.

'ಎಲ್ಲರೂ ಬಂದು ಆರಾಮ್ ಇದ್ದೀಯಾ ಎಂದು ಕೇಳ್ತಾರೆ. ಯಾರಿಗೂ ನಮ್ಮ ಕಷ್ಟ ಹೇಳೋದಕ್ಕೆ ಆಗುವುದಿಲ್ಲ. ಈ ಅಂಶವನ್ನು ಇಟ್ಟುಕೊಂಡು ಈ ಸಿನಿಮಾದ ಕಥೆ ಹೆಣೆದಿದ್ದೇನೆ. ಈ ಸಿನಿಮಾ ನನ್ನ ಭವಿಷ್ಯ' ಎನ್ನುತ್ತಾರೆ ನಿರ್ದೇಶಕ ಅಭಿಷೇಕ್ ಶೆಟ್ಟಿ. ಈ ಸಿನಿಮಾ, ನಟ ಹೃತಿಕಾ ಅವರಿಗೆ ಎರಡನೇ ಸಿನಿಮಾ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಶ್ರೀಕಾಂತ್ ಪ್ರಸನ್ನ ಹಾಗೂ ಪ್ರಶಾಂತ್ ರೆಡ್ಡಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರಕ್ಕೆ ಸಾಗರ್ ಛಾಯಾಚಿತ್ರ-ಗ್ರಹಣ, ಉಮೇಶ್ ಸಂಕಲನವಿದೆ.



ಹೃತಿಕಾ

'ಗಣ' ಚಿತ್ರದ ಹಾಡು ಬಿಡುಗಡೆ

ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ನಾಯಕರಾಗಿ ನಟಿಸಿರುವ 'ಗಣ' ಚಿತ್ರದ 'She is in love' ಎಂಬ ರೊಮ್ಯಾಂಟಿಕ್ ಹಾಡು ಇತ್ತೀಚೆಗೆ ಬಿಡುಗಡೆಯಾಗಿದೆ.

ಪ್ರಮೋದ್ ಮರವಂತೆ ಅವರು ಬರೆದಿರುವ ಈ ಹಾಡಿಗೆ ಅನೂಪ್ ಸೀಳಿನ್ ಸಂಗೀತ ನೀಡಿದ್ದಾರೆ. ಈ ಹಾಡಿಗೆ ವಿಜಯ ಪ್ರಕಾಶ್ ಧ್ವನಿಯಾಗಿದ್ದಾರೆ. ಮುರಳಿ ಮಾಸ್ಟರ್ ನೃತ್ಯ ಸಂಯೋಜಿಸಿರುವ ಈ ಹಾಡಿನಲ್ಲಿ ಪ್ರಜ್ವಲ್ ಹಾಗೂ ಯಶ ಶಿವಕುಮಾರ್ ಹೆಜ್ಜೆ ಹಾಕಿದ್ದಾರೆ. ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ಈ ಸಿನಿಮಾ ಬಿಡುಗಡೆಗೆ ಸಜ್ಜಾಗುತ್ತಿದ್ದು, ಸದ್ಯದಲ್ಲೇ ತೆರೆಗೆ ಬರಲಿದೆ ಎಂದಿದೆ ಚಿತ್ರತಂಡ.

ಚೆರಿ ಕ್ರಿಯೇಷನ್ಸ್ ಲಾಂಛನದಲ್ಲಿ ಪಾರ್ಥು ಅವರು ನಿರ್ಮಿಸಿರುವ ಈ ಚಿತ್ರವನ್ನು ಹರಿಪ್ರಸಾದ್ ಜಕ್ಕ ನಿರ್ದೇಶಿಸಿದ್ದಾರೆ. ಜೈ ಆನಂದ್ ಛಾಯಾಚಿತ್ರಗ್ರಹಣ, ಹರೀಶ್ ಕೊಮ್ಮೆ ಸಂಕಲನ, ಸತೀಶ್ ಎ. ಕಲಾ ನಿರ್ದೇಶನ ಚಿತ್ರಕ್ಕಿದೆ.



ಯಶ ಶಿವಕುಮಾರ್ ಹಾಗೂ ಪ್ರಜ್ವಲ್ ದೇವರಾಜ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಇಲ್ಲೇ ಸ್ವರ್ಗ, ಇಲ್ಲೇ ನರಕ

ನುಡಿ ಬೆಳಗು



ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಒಮ್ಮೆ ಓರ್ವ ಝೆನ್ ಗುರುವಿನ ಬಳಿ ಒಬ್ಬ ಯೋಧ ಬಂದು ಹೀಗೆಂದು ಕೇಳಿದ 'ಸ್ವರ್ಗ ನರಕಗಳು ನಿಜವಾಗಿಯೂ ಇವೆಯೇ?' ಇದನ್ನಾಲಿಸಿದ ಝೆನ್ ಗುರು ಅವನನ್ನು ತಕ್ಷಣ 'ನೀನು ಯಾರು' ಎಂದು ಪ್ರಶ್ನಿಸಿದ. ಆಗ ಆ ಯೋಧ 'ನಾನೊಬ್ಬ ವೀರ ಸಮುರಾಯ್' ಎಂದು ಉತ್ತರವಿತ್ತ. ಆಗ ಮಾಸ್ಟರ್ 'ಓಹೋ ನೀನೊಬ್ಬ ಸೈನಿಕನೋ ನೋಡಿದರೆ ಒಳ್ಳೇ ಭಿಕ್ಷುಕನ ಥರಾ ಕಾಣಿಸುತ್ತೀ' ಎಂದು ವ್ಯಂಗ್ಯವಾಡಿದ.

ಕುಪಿತನಾದ ಯೋಧ ತನ್ನ ಸೊಂಟದಲ್ಲಿದ್ದ ಕತ್ತಿಯನ್ನು ನಿಧಾನಕ್ಕೆ ಹೊರಗೆಳೆದ. ಅದನ್ನು ಗಮನಿಸಿದ ಝೆನ್ ಗುರು 'ನಿನ್ನ ಬಳಿ ಕತ್ತಿ ಕೂಡ ಇದೆಯೇ? ಈ ಮೊಂಡುಕತ್ತಿಯನ್ನು ಇಟ್ಟುಕೊಂಡು ಅದು ಯಾವ ಸಾಮ್ರಾಜ್ಯವನ್ನು ನೀನು ರಕ್ಷಣೆ ಮಾಡ್ತಿಯೋ?' ಎಂದು ಮತ್ತಷ್ಟು ವ್ಯಂಗ್ಯಭರಿತ ಧ್ವನಿಯಲ್ಲಿ ಮೂದಲಿಸಿದ.

ಸೈನಿಕನ ಕೋಪ ನೆತ್ತಿಗೇರಿತು. ಕತ್ತಿಯನ್ನು ಪೂರ್ಣವಾಗಿ ಹೊರ ತೆಗೆದು ಗುರುವಿನ ಮೇಲೆ ಪ್ರಹಾರ ಮಾಡಲು ಹೊರಟ.
ಆಗ ಝೆನ್ ಮಾಸ್ಟರ್ ನಗುತ್ತಾ ನುಡಿದ 'ಇದೋ ನಿನ್ನ ನರಕದ ದ್ವಾರ ತೆರೆದುಕೊಂಡಿತು'.

ಅವನ ಮಾತಿನ ಮರ್ಮವನ್ನು ಅರಿತ ಯೋಧ ತಕ್ಷಣ ಅವನಿಗೆ ಶಿರ ಬಾಗಿ ನಮಿಸಿದ. ಆಗ ಝೆನ್ ಗುರು 'ಮಿತ್ರಾ ಇದೇ ನೋಡು ಸ್ವರ್ಗ' ಎಂದು ಹೇಳಿದ.

ನಾವು ಕಾಣದ ಸ್ವರ್ಗ ನರಕಗಳ ಬಗ್ಗೆ ಯೋಚಿಸುವುದಕ್ಕಿಂತ ನಮ್ಮ ಬದುಕಿನಲ್ಲಿ ಇವು ಅಡಗಿರುವ ನೆಲೆಯನ್ನು ಗುರುತಿಸುವುದೇ ಅರ್ಥಪೂರ್ಣ ಜೀವನ. 'ಇಲ್ಲೇ ಸ್ವರ್ಗ ಇಲ್ಲೇ ನರಕ ಮೇಲೇನಿಲ್ಲ ಸುಳ್ಳು.. ಹುಟ್ಟು ಸಾವು ಎರಡರ ಮಧ್ಯೆ ಮೂರು ದಿನದ ಬಾಳು' ಎಂಬ ಜನಪ್ರಿಯ ಚಲನಚಿತ್ರ ಗೀತೆಯ ಸಾಲಿನಂತೆ ಸ್ವರ್ಗ ನರಕಗಳು ನಮ್ಮ ಮೂರು ದಿನದ ಬದುಕಿನಲ್ಲಿಯೇ ಹುದುಗಿ ಕುಳಿತಿವೆ.

'ಅಯ್ಯಾ ಎಂದರೆ ಸ್ವರ್ಗ ಎಲವೋ ಎಂದರೆ ನರಕ' ಎಂಬ ಶರಣರ ನುಡಿಯಂತೆ, ಇನ್ನೊಬ್ಬರನ್ನು ಪ್ರೀತಿ ಗೌರವ ಮಾನವೀಯತೆಗಳಿಂದ ಕಾಣುವುದೇ ನಿಜವಾದ ಸ್ವರ್ಗ. ಪರರನ್ನು ಕೀಳಾಗಿ, ದ್ವೇಷ ಅಸೂಯೆಗಳಿಂದ ನೋಡುವುದೇ ನರಕ. ಹೀಗಾಗಿ ಕೋಪವೆಂಬುದು ನಮ್ಮ ಬದುಕನ್ನು ನಾವೇ ನರಕವಾಗಿಸಿಕೊಳ್ಳುವ ಮಾರ್ಗ. 'ಕೋಪವೆಂಬುದು ಕೇಳು ಪಾಪದ ನೆಲೆಗಟ್ಟು. ಕೂಪದೊಳು ನೇಣು ಹರಿದಂತೆ ನರಕಕ್ಕೆ ಕೋಪಿ ತಾನಿಳಿವ' ಎನ್ನುವ ಸರ್ವಜ್ಞನ ವಚನದಂತೆ, ಕೋಪ ನಮ್ಮನ್ನು ನಮಗೆ ಅರಿವಿಲ್ಲದಂತೆ ನರಕಕ್ಕೆ ನೂಕುತ್ತದೆ.

'ಕೋಪವೆಂಬುದು ಕೆಂಡದಂತೆ. ಅದನ್ನು ಬೇರೆಯವರ ಮೇಲೆ ಎಸೆಯ ಹೊರಟಾಗ ಅದು ಮೊದಲು ಸುಡುವುದು ನಮ್ಮ ಮುಷ್ಟಿಯನ್ನೇ' ಎನ್ನುತ್ತಾನೆ, ಗೌತಮ ಬುದ್ಧ. ಕೋಪ ದ್ವೇಷವಾಗಿ ನಮ್ಮ ಮನಸ್ಸನ್ನೇ ಸುಡುತ್ತದೆ, ಬದುಕನ್ನೇ ನರಕವಾಗಿಸುತ್ತದೆ. ಅದೇ ಪ್ರೀತಿಸುವ ಮನಸ್ಥಿತಿ ಮನವನ್ನು ಸದಾ ತಿಳಿಯಾಗಿಸುತ್ತದೆ, ಸಂತೋಷವಾಗಿರಿಸುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಅಕ್ಟೋಬರ್ 30, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ದ್ವಿತೀಯ ಗಂ. 22-24 ನಕ್ಷತ್ರ: ಕೃತ್ತಿಕಾ ಗಂ. 28-01 ಯೋಗ: ವ್ಯತೀಪಾತ ಗಂ 17-33 ಕರಣ: ತೈತಿಲ ಗಂ. 11-04, ತುಲಾ ಮಾಸದ 13 ನೇ ದಿನ, ಮಳೆನಕ್ಷತ್ರ: ಸ್ವಾತಿ 2.
ರಾಹುಕಾಲ : ಬೆಳಿಗ್ಗೆ 07-30 - 09-00
ಸೂರ್ಯೋದಯ : 06-28 ಸೂರ್ಯಾಸ್ತ : 06-01
ಮುಸ್ಲಿಂ ದಿನಾಂಕ : 14 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 9, 8

ಮೇಷ: ಧನಾಗಮನಕ್ಕೆ ಹಲವು ದಾರಿಗಳು ಕಂಡರೂ ಸರಿಯಾದ ದಾರಿಯನ್ನು ಆರಿಸಿಕೊಳ್ಳುವುದು ವಿವೇಚನೆಗೆ ಬಿಟ್ಟಂತಹ ವಿಚಾರ. ವಾಣಿಜ್ಯ ಬೆಳೆಗಳನ್ನು ದಾಸ್ತಾನು ಮಾಡಿಕೊಳ್ಳುವ ಯೋಚನೆ ಸರಿಯಾದದ್ದಾಗಿರುತ್ತದೆ.

ವೃಷಭ: ಸಂದರ್ಶನಕಾರರಿಗೆ ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಒಂದು ಅವಕಾಶ ಸಿಗುವುದು. ಸಿನಿಮಾ ನಟ ನಟಿಯರಿಗೆ ಹೆಚ್ಚಿನ ಅವಕಾಶಗಳು ದೊರೆಯಲಿವೆ. ಕಾರ್ಮಿಕರ ಬೇಡಿಕೆಗಳನ್ನು ಪೂರೈಸುವ ತೀರ್ಮಾನ ಮಾಡಿರಿ.

ಮಿಥುನ: ಆರಿಸಿಕೊಂಡ ಮಾರ್ಗದಲ್ಲಿ ಸರಿ ತಪ್ಪುಗಳ ಬಗ್ಗೆ ಯೋಚಿಸಿ ಏಕಾಗ್ರತೆಯಿಂದ ಮುನ್ನಡೆಯಿರಿ. ದೀರ್ಘ ಪ್ರಯಾಣದಿಂದ ನಿರೀಕ್ಷಿತ ಕಾರ್ಯದಲ್ಲಿ ಸಫಲತೆ ಹೊಂದುವಿರಿ. ಮಕ್ಕಳ ಆರೋಗ್ಯ ಉತ್ತಮ ಸ್ಥಿತಿಗೆ ಬರುತ್ತದೆ.

ಕರ್ಕಾಟಕ: ಮಂಗಳ ಕಾರ್ಯಗಳು ಸುಗಮವಾಗಿ ನಡೆಯಲೆಂದು ಮನೆ ದೇವರಿಗೆ ಪೂಜೆ ಸಲ್ಲಿಸುವಿರಿ. ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕೆಂಬುದು ನಿಮಗೆ ತಿಳಿಯಲಿದೆ. ನಿಮ್ಮ ತಿಳಿವಳಿಕೆಯೇ ಅಂತಿಮವೆಂದು ಭಾವಿಸಬೇಡಿ.

ಸಿಂಹ: ತಾಂತ್ರಿಕ ವಿದ್ಯೆಯನ್ನು ವ್ಯಾಸಂಗ ಮಾಡುವವರಿಗೆ ಉತ್ತಮ ಫಲಿತಾಂಶ ಲಭಿಸಿ ಸಂತೋಷವಾಗುವುದು. ವ್ಯವಹಾರಗಳ ಬಗ್ಗೆ ಗಮನ ಹರಿಸುವುದು ಮುಖ್ಯ. ತೈಲ ಉತ್ಪನ್ನಗಳ ಮಾರಾಟದಿಂದ ಹೆಚ್ಚಿನ ಲಾಭ ಪಡೆಯಬಹುದು.

ಕನ್ಯಾ: ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧಕ್ಕೆ ಹೆಚ್ಚಿನ ಪೌಷ್ಟಿಕತೆ ಸಿಕ್ಕಿ ಮುಂದುವರಿಯುವುದು. ಕೆಲಸದಲ್ಲಿ ಅಧಿಕ ಒತ್ತಡ, ದೇಹಾಯಾಸ ತೋರಿಬಂದು ತಪ್ಪು ನಿರ್ಧಾರ ತೆಗೆದುಕೊಳ್ಳುವಂತಾಗಬಹುದು.

ತುಲಾ: ಲೇವಾದೇವಿ ವ್ಯವಹಾರ ನಡೆಸುವವರು ವ್ಯವಹಾರದಲ್ಲಿ ಸ್ವಲ್ಪ ಪ್ರಮಾಣದ ನಷ್ಟ ಸಂಭವಿಸಿ ಹಿನ್ನಡೆ ಕಾಣುವಂತಾಗಲಿದೆ. ಅನ್ಯರ ಮೇಲೆ ಅವಲಂಬಿತರಾಗದೆ ಕಾರ್ಯಪ್ರವೃತ್ತರಾಗುವ ಪ್ರಯತ್ನವಿರಲಿ.

ವೃಶ್ಚಿಕ: ಕಚೇರಿಯಲ್ಲಿ ಬುದ್ಧಿವಂತಿಕೆಯಿಂದ ಕೂಡಿರುವ ಕಾರ್ಯವೈಖರಿ ನಿಮ್ಮದಾಗಿರುತ್ತದೆ. ಬಂಗಾರದ ಮೇಲಿನ ಹೂಡಿಕೆಯು ಲಾಭದಾಯಕವಾಗಿರುವುದು. ಪಾಲುದಾರಿಕೆ ವ್ಯವಹಾರದಲ್ಲಿ ಸ್ನೇಹಿತನಿಂದ ಪ್ರಗತಿ.

ಧನು: ವಿವಾದಗಳ ಗೊಡವೆಗಳಿಂದ ದೂರ ಉಳಿಯುವುದನ್ನು ಅಭ್ಯಾಸಿಸಿಕೊಳ್ಳಿರಿ. ಸುತ್ತಮುತ್ತದ ವಿದ್ಯಮಾನಗಳನ್ನು ಗಮನಿಸಿ ವೃತ್ತಿ ಪರ ಸಮಾಲೋಚನೆ ನಡೆಸಿ. ವಿದ್ಯಾರ್ಥಿಗಳಿಗೆ ವಿಪುಲ ಅವಕಾಶ ಒದಗಿ ಬರುವುದು.

ಮಕರ: ಹಿರಿಯ ನಾಗರಿಕರು ಕೌಟುಂಬಿಕವಾಗಿ ನೀವು ವಹಿಸಿಕೊಂಡ ಜವಾಬ್ದಾರಿಗಳನ್ನು ದಿನದಿಂದ ದಿನಕ್ಕೆ ಕಡಿಮೆ ಮಾಡುವ ಬಗ್ಗೆ ಗಮನಹರಿಸಿ. ಶ್ರಮಕ್ಕೆ ಸರಿಸಮಾನ ಧನಾಗಮನಕ್ಕೆ ಯಾವುದೇ ಅಡ್ಡಿ ಆತಂಕಗಳು ಇರದು.

ಕುಂಭ: ವ್ಯವಹಾರದ ಜೀವನದಲ್ಲಿ ಕೆಲವು ವಿಚಾರಕ್ಕೆ ಆತಂಕ ಮೂಡಿ ಮನೋಧೈರ್ಯ ಸಾಲದಾಗುತ್ತದೆ. ಚಲನಚಿತ್ರರಂಗದವರಿಗೆ ಖ್ಯಾತಿ, ಗೌರವಾನ್ವಿತ ಅವಕಾಶ ದೊರೆಯುವುದು.

ಮೀನ: ಕಟ್ಟಡ ಕಾರ್ಮಿಕರಿಗೆ ಮತ್ತು ದಿನಗೂಲಿ ನೌಕರರಿಗೆ ಅವಕಾಶಗಳು ಸಿಗುವುದು. ಉಸಿರಾಟಕ್ಕೆ ಸಂಬಂಧಿಸಿದಂತೆ ಉದಾಸೀನತೆ ತೋರುವುದು ಸರಿಯಲ್ಲ. ಷೇರು ಖರೀದಿಸುವಾಗ ಎಚ್ಚರವಹಿಸಿ.

ಪದಬಂಧ 5485


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ನೀಚ ಇಲ್ಲಿದ್ದಾನೆ (3)
6. ಉತ್ತರ ನೀಡುತ್ತಾ ವಹಿಸಿಕೊಂಡ ಹೊಣೆಗಾರಿಕೆ (5)
7. ಈ ಡಿಸ್ಟ್ರಿಬ್ಯೂಟರ್ ಕನ್ನಡಿಗ! (4)
9. ಕಾದಾಡುವಾಗ ಕಾಣಿಸಿದ ಅರಣ್ಯ (2)
10. ಪರಮಾತ್ಮ ಅಥವಾ ಅಷ್ಟು ಮಾತ್ರದ ಎಂದರೂ ಸರಿ (3)
12. ಸಂತತಿಯಲ್ಲಿರುವ ಸಾಧು (2)
14. ಈಕೆ ಬೇರೆಯವನ ಹೆಂಡತಿ (4)
16. ಈತ ದಾರಿ ತೋರುವವನು (5)
18. ಬಾಗಿಲ ಮುಂದೆ ನಡೆದ ಕಾಳಗ (3)

ಮೇಲಿಂದ ಕೆಳಕ್ಕೆ

1. ಅಶುದ್ಧ ಅಥವಾ ಮೈಲಿಗೆ (4)
2. ದ್ವೇಷ ಈ ರೀತಿ ಬಂದಿದೆ (3)
3. ಗಲೀಜನ್ನು ನೋಡಿದರೆ ಆನೆ ಕಾಣುವುದೇ? (2)
4. ಬತ್ತಳಿಕೆಯನ್ನು ಹೀಗೂ ಹೇಳುವರು (4)
5. ತುರಿಯುವ ಸಾಧನ (4)
8. ವೇಷಧಾರಿಯಾಗಿ ಹಣ ಸಂಪಾದಿಸುವವನು (4)
9. ಕಾಲ ಕಳೆಯುವುದು (4)
11. ಮಾನವಿದ್ದಾಗಲೂ ಈ ಸಂದೇಹವೇ? (4)
12. ನಡುವೆ ಪಾದವನ್ನಿಟ್ಟಾಗಿನ ಗಳಿಕೆ (4)
13. ಮನದಲ್ಲಿರುವ ದಡ್ಡ! (4)
15. ರಸಸ್ವಾದನೆಯನ್ನು ಬಲ್ಲವನು (3)
17. ಕಚಕ್ಕನೆ ಕತ್ತರಿಸಿದ ತಲೆಕೂದಲು! (2)



5484ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಂಧಾಮ
3.ಹಜಾಮತಿ 5.ನೆನಪು
6.ನಿಕ್ಷೇಪ 8.ಕುಶಲ 9.ಅಹಿತ
10.ರಥಿಕ 12.ವರ್ಜನ
14,ನಿಷ್ಕರುಣ 15.ದುರಾಚಾರ

ಮೇಲಿಂದ ಕೆಳಕ್ಕೆ:
1.ಪಯಸ್ವಿನಿ 2.ಮದ್ದಾನೆ
3.ಹುರುಪು 4.ತಿಮಿಂಗಿಲ
7.ಪರ್ವತ 8.ಕುಬೇರ
9.ಅವಧಾನಿ 11.ಕಳೆವರ
12.ವರುಣ 13.ನಗದು

ಸುಡೊಕು 5871

		6			4		5	9
		7	5		6	3		2
3	8						6	
	2							4
			2	4	7			6
	7					5		
7		9			8		4	
4				3			8	
	6		4		2	7		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5870 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಬಳಕೆದಾರನಿಂದ ಹೆಚ್ಚು ವರಮಾನ ದೂರಸಂಪರ್ಕ ಕಂಪನಿಗಳ ನಿರೀಕ್ಷೆ

ನವದೆಹಲಿ (ಪಿಟಿಐ): ದೂರಸಂಪರ್ಕ ಕಂಪನಿಗಳು 5ಜಿ ಜಾಲಕ್ಕಾಗಿ ಮಾಡಿರುವ ಹೂಡಿಕೆಯನ್ನು ಮರಳಿ ಪಡೆಯಬೇಕಾದರೆ ಪ್ರತಿ ಬಳಕೆದಾರನಿಂದ ವರ್ಷಕ್ಕೆ ₹270ರಿಂದ ₹300 ವರಮಾನ ಬರಬೇಕು ಎಂಬುದು ಈ ಕ್ಷೇತ್ರದ ಪರಿಣತರ ಅಭಿಪ್ರಾಯವಾಗಿದೆ. ಆದರೆ, ಈಗ ಈ ಕ್ಷೇತ್ರವು ಪ್ರತಿ ಬಳಕೆದಾರನಿಂದ ಪಡೆಯುತ್ತಿರುವ ವರಮಾನವು ₹140ರಿಂದ ₹200 ಮಾತ್ರ. ಜಾಗತಿಕ ಸರಾಸರಿಯು ₹600ರಿಂದ ₹850ರಷ್ಟಿದೆ. ಚೀನಾದ ಕಂಪನಿಗಳು ಪ್ರತಿ ಬಳಕೆದಾರನಿಂದ ವರ್ಷಕ್ಕೆ ₹580 ವರಮಾನ ಪಡೆಯುತ್ತಿವೆ.

ಅತಿ ಹೆಚ್ಚು ಬಳಕೆಯಾಗುವ 4–5 ಆ್ಯಪ್‌ಗಳು ವರಮಾನ ಹಂಚಿಕೆ ಆಧಾರದಲ್ಲಿ ಕಾರ್ಯನಿರ್ವಹಿಸಲು ಅವಕಾಶ ಕೊಡಬೇಕು ಎಂಬ ಬೇಡಿಕೆಯನ್ನು ದೂರಸಂಪರ್ಕ ಸೇವಾ ಕಂಪನಿಗಳು ಇರಿಸಿವೆ. ಹೀಗಾದರೆ, 5ಜಿ ಜಾಲಕ್ಕೆ ಮಾಡಿರುವ ವೆಚ್ಚದ ಒಂದು ಭಾಗವನ್ನು ಪಡೆದುಕೊಳ್ಳಬಹುದು ಎಂಬುದು ಈ ಕಂಪನಿಗಳ ಪ್ರತಿಪಾದನೆಯಾಗಿದೆ.

ಆದರೆ, ಭಾರತದ ದೂರಸಂಪರ್ಕ ಸೇವೆ ಜಗತ್ತಿನಲ್ಲಿಯೇ ಅತ್ಯಂತ ಕಡಿಮೆ ವೆಚ್ಚದ್ದಾಗಿರಬೇಕು ಎಂದು ಸರ್ಕಾರ ಬಯಸುತ್ತಿದೆ ಎಂದು ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

'ಸರ್ಕಾರದ ನಿಲುವು ಅತ್ಯಂತ ಸ್ಪಷ್ಟವಾಗಿದೆ. ಭಾರತದಲ್ಲಿ ದೂರಸಂಪರ್ಕ ಸೇವೆಯು ಬಹಳ ಕಡಿಮೆ ವೆಚ್ಚದ್ದಾಗಿರಬೇಕು. ಈಗಲೂ ಪ್ರಮುಖ ದೇಶಗಳಿಗೆ ಹೋಲಿಸಿದರೆ ಭಾರತದ ದೂರಸಂಪರ್ಕ ಸೇವೆಯು ಮಿತವ್ಯಯಕರವೇ ಆಗಿದೆ' ಎಂದು ಇಂಡಿಯಾ ಮೊಬೈಲ್ ಕಾಂಗ್ರೆಸ್–2023ರಲ್ಲಿ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ವೈಷ್ಣವ್ ಹೇಳಿದ್ದಾರೆ.

ದೇಶದಲ್ಲಿ 5ಜಿ ಸೇವೆಗೆ ಕಳೆದ ವರ್ಷವೇ ಚಾಲನೆ ನೀಡಿದ್ದರೂ ಅದರಿಂದ ವರಮಾನ ಬರಲು ಆರಂಭವಾಗಿಲ್ಲ ಎಂದು ಭಾರತದ ಸೆಲ್ಯುಲಾರ್ ನಿರ್ವಾಹಕರ ಸಂಘವು ಹೇಳಿದೆ.

6ಜಿ ತಂತ್ರಜ್ಞಾನ ಅಭಿವೃದ್ಧಿ ಕುರಿತು ಕೆಲಸ ಈಗಾಗಲೇ ಆರಂಭವಾಗಿದೆ. 'ಭಾರತ್ 6ಜಿ ವಿಷನ್'ಗೆ ಅಂತರ ರಾಷ್ಟ್ರೀಯ ದೂರಸಂಪರ್ಕ ಸಂಘಟನೆ ಅನುಮೋದನೆ ನೀಡಿದೆ ಎಂದು ವೈಷ್ಣವ್ ತಿಳಿಸಿದ್ದಾರೆ. 6ಜಿ ಅಭಿವೃದ್ಧಿಯಲ್ಲಿ ಉದ್ಯಮ, ಶೈಕ್ಷಣಿಕ ವಲಯ, ವಿದ್ಯಾರ್ಥಿಗಳು, ಸರ್ಕಾರದ ಸಹಭಾಗಿತ್ವ ಇರಲಿದೆ ಎಂದು ಅವರು ಹೇಳಿದ್ದಾರೆ.

5ಜಿ ಜಾಲ ಮತ್ತು 4ಜಿಯನ್ನು ವಿಸ್ತರಿಸುವುದಕ್ಕಾಗಿ ಗಣನೀಯ ಮೊತ್ತವನ್ನು ಹೂಡಿಕೆ ಮಾಡಲಾಗುವುದು ಎಂದು ಸಾಲದಿಂದ ತತ್ತರಿಸಿರುವ ವೊಡಾಫೋನ್ ಐಡಿಯಾದ ಕಾರ್ಯನಿರ್ವಾಹಕೇತರ ಹೆಚ್ಚುವರಿ ನಿರ್ದೇಶಕ ಕುಮಾರ ಮಂಗಳಂ ಬಿರ್ಲಾ ಹೇಳಿದ್ದಾರೆ.

ಧೋನಿ ಎಸ್‌ಬಿಐ ರಾಯಭಾರಿ



ನವದೆಹಲಿ (ಪಿಟಿಐ): ಕ್ರಿಕೆಟ್ ಆಟಗಾರ ಮಹೇಂದ್ರ ಸಿಂಗ್ ಧೋನಿ ಅವರನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ತನ್ನ ರಾಯಭಾರಿಯನ್ನಾಗಿ ಭಾನುವಾರ ನೇಮಿಸಿದೆ.

ಎಸ್‌ಬಿಐನ ರಾಯಭಾರಿ (ಬ್ರ್ಯಾಂಡ್ ಅಂಬಾಸಿಡರ್) ಆಗಿ ಧೋನಿ ವಿವಿಧ ಮಾರ್ಕೆಟಿಂಗ್, ಪ್ರಚಾರ ಅಭಿಯಾನಗಳಲ್ಲಿ ಪ್ರಮುಖ ಪಾತ್ರ ವಹಿಸಲಿದ್ದಾರೆ ಎಂದು ಬ್ಯಾಂಕ್ ಹೇಳಿಕೆಯಲ್ಲಿ ತಿಳಿಸಿದೆ.

ಸ್ಪಷ್ಟ ಆಲೋಚನೆ, ಒತ್ತಡದ ಸಂದರ್ಭದಲ್ಲಿ ತ್ವರಿತ ನಿರ್ಧಾರ ತೆಗೆದುಕೊಳ್ಳುವ ಧೋನಿ ಅವರ ಸಾಮರ್ಥ್ಯದಿಂದಾಗಿ ದೇಶದಾದ್ಯಂತ ತನ್ನ ಗ್ರಾಹಕರು ಮತ್ತು ಪಾಲುದಾರರೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗುತ್ತದೆ ಎಂದು ಬ್ಯಾಂಕ್ ಹೇಳಿದೆ.

'ಎಸ್‌ಬಿಐನ ಸಂತೃಪ್ತ ಗ್ರಾಹಕರಾಗಿರುವ ಅವರು ಪರಿಪೂರ್ಣ ರಾಯಭಾರಿಯೂ ಆಗಲಿದ್ದಾರೆ. ಈ ಪಾಲುದಾರಿಕೆಯೊಂದಿಗೆ ನಾವು ವಿಶ್ವಾಸ, ಪ್ರಾಮಾಣಿಕತೆ ಮತ್ತು ಅಚಲ ಬದ್ಧತೆಯ ಮೂಲಕ ಗ್ರಾಹಕರ ಸೇವೆ ಸಲ್ಲಿಸುತ್ತೇವೆ ಎಂದು ಪುನರುಚ್ಚರಿಸುತ್ತೇವೆ' ಎಂದು ಎಸ್‌ಬಿಐನ ಅಧ್ಯಕ್ಷ ದಿನೇಶ್ ಖಾರಾ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹73
ಮೈಸೂರು	
100 ಮೊಟ್ಟೆಗೆ	₹570

7 ಸುರಕ್ಷಿತ ಹೂಡಿಕೆ ಆಯ್ಕೆಗಳು



ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

ಹೆಚ್ಚು ಗಳಿಕೆ ಬರದಿದ್ದರೂ ಪರವಾಗಿಲ್ಲ, ಆದರೆ ಹೂಡಿಕೆ ಮೊತ್ತಕ್ಕೆ ಸುರಕ್ಷತೆ ಮುಖ್ಯ ಎನ್ನುವ ಅನೇಕರಿದ್ದಾರೆ. ಅಂತಹ ಹೂಡಿಕೆದಾರರಿಗೆ ಒಪ್ಪುವಂತಹ, ಕೇಂದ್ರ ಸರ್ಕಾರದ ಗ್ಯಾರಂಟಿ ಇರುವ ಅನೇಕ ಹೂಡಿಕೆ ಆಯ್ಕೆಗಳಿವೆ. ಅವುಗಳ ಪೈಕಿ ಸಾರ್ವಜನಿಕ ಭವಿಷ್ಯ ನಿಧಿ, ಎನ್‌ಪಿಎಸ್, ಆರ್‌ಬಿಐ ಬಾಂಡ್ಸ್, ಸಾಲ ಪತ್ರಗಳು, ಸಾವರಿನ್ ಗೋಲ್ಡ್ ಬಾಂಡ್, ಹಿರಿಯ ನಾಗರಿಕರ ಉಳಿತಾಯ ಯೋಜನೆ ಮತ್ತು ರಾಷ್ಟ್ರೀಯ ಉಳಿತಾಯ ಪತ್ರದ ಬಗ್ಗೆ ಈ ಲೇಖನದಲ್ಲಿ ತಿಳಿಯೋಣ.

ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್): ಸಾರ್ವಜನಿಕ ಭವಿಷ್ಯ ನಿಧಿಯ (ಪಿಪಿಎಫ್) ಸದ್ಯದ ಬಡ್ಡಿ ದರ ಶೇ 7.1 ರಷ್ಟಿದೆ. 15 ವರ್ಷಗಳ ಲಾಕಿನ್ ಅವಧಿ ಹೊಂದಿರುವ ಈ ಯೋಜನೆ ತೆರಿಗೆ ಉಳಿತಾಯಕ್ಕೆ ಒಳ್ಳೆಯ ಸಾಧನ. ಹೂಡಿಕೆ ಹಂತದಲ್ಲಿ, ಹೂಡಿಕೆ ಮೇಲೆ ಗಳಿಸುವ ಬಡ್ಡಿಗೆ ಮತ್ತು ಮೆಚ್ಯೂರಿಟಿ ಬಳಿಕ ತೆಗೆದುಕೊಳ್ಳುವ ಹಣಕ್ಕೆ ಈ ಯೋಜನೆಯಲ್ಲಿ ತೆರಿಗೆ ಇಲ್ಲ. ಪಿಪಿಎಫ್ ಖಾತೆ ಆರಂಭಿಸಿ 6 ವರ್ಷಗಳ ಬಳಿಕ ಶೇ 50 ರಷ್ಟು ಮೊತ್ತವನ್ನು ಹಿಂಪಡೆಯುವ ಅವಕಾಶವೂ ಇದೆ. ಸೆಕ್ಷನ್ 80 ಸಿ ಅಡಿಯಲ್ಲಿ ಪಿಪಿಎಫ್ ಹೂಡಿಕೆಗೆ ತೆರಿಗೆ ವಿನಾಯಿತಿಯೂ ಸಿಗುತ್ತದೆ. ಭಾರತದ ಪ್ರಜೆಗಳು ಪಿಪಿಎಫ್‌ನಲ್ಲಿ ಹೂಡಿಕೆ ಮಾಡಬಹುದು.

ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್): ನಿವೃತ್ತಿ ಜೀವನಕ್ಕಾಗಿ ಹೂಡಿಕೆ ಮಾಡುವವರಿಗೆ ಎನ್‌ಪಿಎಸ್ ಒಂದು ಅತ್ಯುತ್ತಮ ಆಯ್ಕೆ. ಎನ್‌ಪಿಎಸ್ ಹೂಡಿಕೆಯಲ್ಲಿ ಶೇ 9 ರಿಂದ ಶೇ 12 ರವರೆಗೂ ಲಾಭಾಂಶ ನಿರೀಕ್ಷೆ ಮಾಡಬಹುದು. ಎನ್‌ಪಿಎಸ್‌ನಲ್ಲಿ ಷೇರು ಮಾರುಕಟ್ಟೆ ಆಧಾರಿತ ಹೂಡಿಕೆ ಬೇಕೋ ಅಥವಾ ಡೆಟ್ (ಸುರಕ್ಷಿತ) ಹೂಡಿಕೆಗಳು ಬೇಕೋ ಎನ್ನುವುದನ್ನು ಆಯ್ಕೆ ಮಾಡುವ ಸ್ವಾತಂತ್ರ್ಯ ಹೂಡಿಕೆದಾರನಿಗಿದೆ. 60 ವರ್ಷಗಳ ಬಳಿಕ ಎನ್‌ಪಿಎಸ್ ಹೂಡಿಕೆ ನಗದೀಕರಣ ಸಾಧ್ಯವಾಗುತ್ತದೆ.

ಆರ್‌ಬಿಐ ಬಾಂಡ್ಸ್: ಆರ್‌ಬಿಐ ಬಾಂಡ್‌ಗಳು ನಿಶ್ಚಿತ ಆದಾಯ ಖಾತರಿಪಡಿಸುವ ಹೂಡಿಕೆಗಳಾಗಿವೆ. ನೀವು ಹೂಡಿಕೆ ಮಾಡುವ ಮೊತ್ತಕ್ಕೆ ಆರ್‌ಬಿಐ ಪ್ರತಿ ವರ್ಷ ಇಂತಿಷ್ಟು ಬಡ್ಡಿ ಎಂದು ನೀಡುತ್ತಾ ಹೋಗುತ್ತದೆ. ಆರ್‌ಬಿಐ ಬಾಂಡ್‌ನ ಸದ್ಯದ ಬಡ್ಡಿ ದರ ಶೇ 7.10 ರಷ್ಟಿದ್ದು 7 ವರ್ಷಗಳ ಅವಧಿಗೆ ಹೂಡಿಕೆ ಮಾಡಬೇಕಾಗುತ್ತದೆ. ಆರ್‌ಬಿಐ ಬಾಂಡ್‌ಗಳಲ್ಲಿ ಹೂಡಿಕೆ ಮಾಡಲು ಭಾರತದ ಪ್ರಜೆಯಾಗಿರಬೇಕು, ಅಪ್ರಾಪ್ತರ ಹೆಸರಿನಲ್ಲೂ ಹೂಡಿಕೆಗೆ ಅವಕಾಶವಿದೆ. ಕನಿಷ್ಠ ₹ 1 ಸಾವಿರ ಹೂಡಿಕೆಯನ್ನು ಆರ್‌ಬಿಐ ಬಾಂಡ್ ಗಳಲ್ಲಿ ಮಾಡಬಹುದಾಗಿದೆ.

ಸರ್ಕಾರಿ ಸಾಲಪತ್ರಗಳು (Government Securities): ಸರ್ಕಾರದ ವಿವಿಧ ಕೆಲಸಗಳಿಗೆ ಹಣಕಾಸಿನ ಅಗತ್ಯ ಬೀಳುತ್ತದೆ. ಹೀಗೆ ಬರುವ ಆರ್ಥಿಕ ಅಗತ್ಯವನ್ನು ಪೂರೈಸಿಕೊಳ್ಳಲು ಸರ್ಕಾರ ನೀಡುವ ಪತ್ರಗಳೇ ಸಾಲ ಪತ್ರಗಳು ಅಥವಾ ಗವರ್ನಮೆಂಟ್ ಸೆಕ್ಯೂರಿಟಿಸ್. ಸರ್ಕಾರದಿಂದ ಸಾಲ ಪತ್ರಗಳನ್ನು ಖರೀದಿಸಿದವರಿಗೆ ನಿಯಮಿತವಾಗಿ ಬಡ್ಡಿ ಸಿಗುತ್ತದೆ. ಮೆಚ್ಯೂರಿಟಿ ಅವಧಿ ಪೂರೈಸಿದ ಬಳಿಕ ಹೂಡಿಕೆ ಮೊತ್ತವೂ ವಾಪಸ್ ಆಗುತ್ತದೆ. ಸರಳವಾಗಿ ಹೇಳುವುದಾದರೆ ಕೇಂದ್ರ ಸರ್ಕಾರದ ಪರವಾಗಿ ಆರ್‌ಬಿಐ ವಿತರಿಸುವ ಬಾಂಡ್‌ಗಳನ್ನು ಸಾಲ ಪತ್ರಗಳು ಎಂದು ಕರೆಯಬಹುದು. ಸದ್ಯ ಸರ್ಕಾರಿ ಸಾಲ ಪತ್ರಗಳ ಬಡ್ಡಿ ದರ ಶೇ 7.20 ರಷ್ಟಿದ್ದು ಹೂಡಿಕೆ ಅವಧಿ 10 ವರ್ಷಗಳಾಗಿವೆ.

ಸಾವರಿನ್ ಗೋಲ್ಡ್ ಬಾಂಡ್: ಚಿನ್ನದ ಮೌಲ್ಯಕ್ಕೆ ಪ್ರತಿಯಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡುವ ಬಾಂಡ್ ಗಳನ್ನು ಸಾವರಿನ್ ಗೋಲ್ಡ್ ಬಾಂಡ್ ಎಂದು ಕರೆಯಬಹುದು. ಸಾವರಿನ್ ಗೋಲ್ಡ್ ಬಾಂಡ್‌ಗಳನ್ನು ಸರ್ಕಾರದ ಪರವಾಗಿ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ವಿತರಿಸುತ್ತದೆ. ಭೌತಿಕರೂಪದ ಚಿನ್ನಕ್ಕೆ ಪ್ರತಿಯಾಗಿ ಬಾಂಡ್‌ಗಳನ್ನು ವಿತರಿಸಲಾಗುತ್ತದೆ. ಪ್ರತಿ ಬಾಂಡ್ ಒಂದು ಗ್ರಾಂ ಚಿನ್ನಕ್ಕೆ ಸಮಾನವಾದ ಮೌಲ್ಯವನ್ನು ಪ್ರಮುಖ ಅಂಚೆ ಕಚೇರಿಗಳು, ಬ್ಯಾಂಕ್‌ಗಳಿಂದ ಇವನ್ನು ಖರೀದಿಸಬಹುದಾಗಿದೆ. ಭಾರತದ ಪ್ರಜೆಗಳು, ಹಿಂದೂ ಅವಿಭಕ್ತ ಕುಟುಂಬಗಳು, ಟ್ರಸ್ಟ್‌ಗಳು, ಚಾರಿಟೆಬಲ್ ಸಂಸ್ಥೆಗಳು ಸಾವರಿನ್ ಗೋಲ್ಡ್ ಬಾಂಡ್‌ನಲ್ಲಿ ತೊಡಗಿಸಬಹುದು.

ವ್ಯಕ್ತಿಗಳು ಮತ್ತು ಅವಿಭಕ್ತ ಕುಟುಂಬಗಳು ಕನಿಷ್ಠ 1 ಗ್ರಾಂ ಮತ್ತು ಗರಿಷ್ಠ 4 ಕೆ.ಜಿ. ವರೆಗೆ ಹೂಡಿಕೆ ಮಾಡಬಹುದು. ಟ್ರಸ್ಟಿಗಳಿಗೆ 20 ಕೆ.ಜಿ. ವರೆಗೆ ಹೂಡಿಕೆಗೆ ಅವಕಾಶವಿದೆ. ಸಾವರಿನ್ ಗೋಲ್ಡ್ ಬಾಂಡ್ 8 ವರ್ಷಗಳ ನಂತರ ಮೆಚ್ಯೂರಿಟಿಗೆ ಒಳಪಡುತ್ತದೆ. ಸಾವರಿನ್ ಗೋಲ್ಡ್ ಬಾಂಡ್‌ನಲ್ಲಿ ಹೂಡಿಕೆ ಮಾಡಿದಾಗ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಹೆಚ್ಚಳಕ್ಕೆ ಅನುಗುಣವಾಗಿ ಅದರ ಲಾಭ ಸಿಗುವ ಜೊತೆಗೆ ವಾರ್ಷಿಕ ಶೇ 2.5 ರಷ್ಟು ಬಡ್ಡಿ ಲಾಭಾಂಶವೂ ಲಭಿಸುತ್ತದೆ. ಪ್ರತಿ 6 ತಿಂಗಳಿಗೊಮ್ಮೆ ಬಡ್ಡಿ ಪಾವತಿಯಾಗುತ್ತದೆ.

ಹಿರಿಯ ನಾಗರಿಕರ ಉಳಿತಾಯ ಯೋಜನೆ (ಎಸ್‌ಸಿಎಸ್‌ಎಸ್): ಹಿರಿಯ ನಾಗರಿಕರ ಉಳಿತಾಯ ಯೋಜನೆ (ಎಸ್‌ಸಿಎಸ್‌ಎಸ್) ಸರ್ಕಾರಿ ಸಹಭಾಗಿತ್ವದ ಹೂಡಿಕೆ ಯೋಜನೆಯಾಗಿದ್ದು 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಇದರ ಪ್ರಯೋಜನ ಪಡೆಯಬಹುದಾಗಿದೆ. ಎಸ್‌ಸಿಎಸ್‌ಎಸ್‌ನಲ್ಲಿ ಕನಿಷ್ಠ ₹ 1 ಸಾವಿರ, ಗರಿಷ್ಠ ₹ 30 ಲಕ್ಷ ಹೂಡಿಕೆಗೆ ಅವಕಾಶವಿದೆ. ಸದ್ಯ ಇದರ ಬಡ್ಡಿ ದರ ಶೇ 8.20 ರಷ್ಟಿದೆ. ಈ ಹೂಡಿಕೆಗೆ ಸೆಕ್ಷನ್ 80ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ಇದ್ದು ಸ್ಥಿರ ಆದಾಯ ನಿರೀಕ್ಷಿಸುವ ಹಿರಿಯ ನಾಗರಿಕರಿಗೆ ಇದೊಂದು ಉತ್ತಮ ಆಯ್ಕೆ.

ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ): ತೆರಿಗೆ ಉಳಿಸುವ ಜೊತೆಗೆ ಸುರಕ್ಷತೆ ಮತ್ತು ನಿಶ್ಚಿತ ಆದಾಯವನ್ನು ಎನ್‌ಎಸ್‌ಸಿ ಹೂಡಿಕೆ ಒದಗಿಸುತ್ತದೆ. ರಾಷ್ಟ್ರೀಯ ಉಳಿತಾಯ ಪತ್ರದ ಸದ್ಯದ ಬಡ್ಡಿ ದರ ಶೇ 7.70 ರಷ್ಟಿದೆ. ಎನ್‌ಎಸ್‌ಸಿ ಹೂಡಿಕೆಯಲ್ಲಿ 5 ವರ್ಷಗಳ ಲಾಕಿನ್ ಅವಧಿಯಿದ್ದು ನಂತರ ಹೂಡಿಕೆ ನಗದೀಕರಣ ಮಾಡಬಹುದಾಗಿದೆ. ಅಂಚೆ ಕಚೇರಿಗಳಲ್ಲಿ ಎನ್‌ಎಸ್‌ಸಿ ಹೂಡಿಕೆ ಪತ್ರಗಳನ್ನು ಪಡೆಯಬಹುದು. ಎನ್‌ಎಸ್‌ಸಿ ಹೂಡಿಕೆಗೆ ಆದಾಯ ತೆರಿಗೆ ಸೆಕ್ಷನ್ 80 ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ಪಡೆಯಬಹುದಾಗಿದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಭಾರಿ ಕುಸಿತ ಕಂಡ ಷೇರುಪೇಟೆಗಳು



ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರವೂ ಕುಸಿತ ದಾಖಲಿಸಿವೆ. ಅಕ್ಟೋಬರ್ 27ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಭಾರೀ ಇಳಿಕೆ ಕಂಡಿವೆ. 63,782 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.46 ರಷ್ಟು ಕುಸಿದಿದೆ. 19,047 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2.53 ರಷ್ಟು ತಗ್ಗಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಹಿಂಜರಿಕೆ, ಪ್ರಮುಖ ದೇಶಗಳ ಸೆಂಟ್ರಲ್ ಬ್ಯಾಂಕ್ ಗಳಿಂದ ಬಡ್ಡಿ ದರ ಹೆಚ್ಚಳ, ಇಸ್ರೇಲ್–ಹಮಾಸ್ ಯುದ್ಧ ಸೇರಿ ಹಲವು ಅಂಶಗಳು ಮಾರುಕಟ್ಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 5.3, ಲೋಹ ಸೂಚ್ಯಂಕ ಶೇ 4 ರಷ್ಟು ಕುಸಿದಿವೆ. ಮಾಹಿತಿ ತಂತ್ರಜ್ಞಾನ ಸೂಚ್ಯಂಕ, ಅನಿಲ-ತೈಲ ಸೂಚ್ಯಂಕ, ರಿಯಲ್ ಎಸ್ಟೇಟ್ ಸೂಚ್ಯಂಕ ತಲಾ ಶೇ 3 ರಷ್ಟು ಕುಸಿದಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಪೇಟಿಎಂ, ಇಂಡಸ್ ಟವರ್ಸ್, ಬರ್ಜರ್ ಪೇಂಟ್ಸ್, ಯುಪಿಎಲ್, ಜೊಮಾಟೊ, ಅದಾನಿ ಎಂಟರ್ ಪ್ರೈಸಸ್, ಗೇಲ್ ಇಂಡಿಯಾ, ಅದಾನಿ ಗ್ರೀನ್ ಎನರ್ಜಿ ಮತ್ತು ಅದಾನಿ ಟೋಟಲ್ ಗ್ಯಾಸ್ ಕುಸಿತ ದಾಖಲಿಸಿವೆ.

ಮುನ್ನೋಟ: ಈ ವಾರ ಅದಾನಿ ಗ್ರೀನ್, ಮಾರಿಕೋ, ಪೆಟ್ರೋನೆಟ್, ಟಿವಿಎಸ್ ಮೋಟರ್, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಟಾಟಾ ಮೋಟರ್ಸ್, ಹೀರೊ ಮೋಟರ್ಸ್, ಟಾಟಾ ಸ್ಟೀಲ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ದೇಶಿಯ ಮತ್ತು ಜಾಗತಿಕ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಇಸ್ರೇಲ್–ಹಮಾಸ್ ಸಂಘರ್ಷದಿಂದಾಗಿ ಸೃಷ್ಟಿಯಾಗಿರುವ ಅನಿಶ್ಚಿತ ಸ್ಥಿತಿ

ಎಫ್‌ಪಿಐ: ₹20,300 ಕೋಟಿ ವಾಪಸ್

ನವದೆಹಲಿ (ಪಿಟಿಐ): ವಿದೇಶಿ ಪೋರ್ಟ್‌ಫೋಲಿಯೊ ಹೂಡಿಕೆದಾರರು (ಎಫ್‌ಪಿಐ) ಈ ತಿಂಗಳಲ್ಲಿ ಈವರೆಗೆ ಭಾರತದ ಷೇರುಪೇಟೆಯಿಂದ ₹20,300 ಕೋಟಿ ಹೂಡಿಕೆಯನ್ನು ಹಿಂದಕ್ಕೆ ಪಡೆದಿದ್ದಾರೆ. ಅಮೆರಿಕದ ಬಾಂಡ್ ಮೇಲಿನ ಹೂಡಿಕೆಯಿಂದ ಲಾಭ ಹೆಚ್ಚಳ, ಇಸ್ರೇಲ್–ಹಮಾಸ್ ಸಂಘರ್ಷದಿಂದಾಗಿ ಸೃಷ್ಟಿಯಾಗಿರುವ ಅನಿಶ್ಚಿತ ಸ್ಥಿತಿ ಇದಕ್ಕೆ ಮುಖ್ಯ ಕಾರಣ.

ಆಸಕ್ತಿಕರ ವಿಚಾರವೆಂದರೆ, ಎಫ್‌ಪಿಐಗಳು ಭಾರತದ ಬಾಂಡ್ ಮಾರುಕಟ್ಟೆಯಲ್ಲಿ ಈ ತಿಂಗಳಲ್ಲಿ 6,080 ಕೋಟಿ ಹೂಡಿಕೆ ಮಾಡಿವೆ.

ಎಫ್‌ಪಿಐ ಒಳಹರಿವು ಹಲವು ಅಂಶಗಳ ಮೇಲೆ ಅವಲಂಬಿತವಾಗಿದೆ. ಅಮೆರಿಕದ ಫೆಡರಲ್ ರಿಸರ್ವ್‌ನ ನ. 2ರ ಸಭೆ, ಜಾಗತಿಕ ಆರ್ಥಿಕ ಬೆಳವಣಿಗೆಗಳೂ ಇದರಲ್ಲಿ ಸೇರಿವೆ ಎಂದು ಕ್ರೇವಿಂಗ್ ಆಲ್ಫಾ ಸಂಸ್ಥೆಯ ಪಾಲುದಾರ ಮಯಾಂಕ್ ಮೆಹ್ರಾ ಹೇಳಿದ್ದಾರೆ.



ಅಲ್ಪಾವಧಿಯಲ್ಲಿ ಎಫ್‌ಪಿಐಗಳು ಹೆಚ್ಚು ಎಚ್ಚರದಿಂದ ಇರಬಹುದು ಎಂದು ಅಂದಾಜಿಸಲಾಗಿದೆ. ಜಾಗತಿಕ ಅನಿಶ್ಚಿತ ಸ್ಥಿತಿ ಮತ್ತು ಅಮೆರಿಕದಲ್ಲಿ ಬಡ್ಡಿ ದರ ಏರಿಕೆ ಇದಕ್ಕೆ ಕಾರಣ. ಹಾಗಿದ್ದರೂ ಭಾರತದಲ್ಲಿ ಹೆಚ್ಚಿನ ಆರ್ಥಿಕ ಪ್ರಗತಿಯ ಅವಕಾಶ ಇರುವುದು ವಿದೇಶಿ ಹೂಡಿಕೆದಾರರನ್ನು ಆಕರ್ಷಿಸುತ್ತಿದೆ. ಹಾಗಾಗಿಯೇ ಷೇರುಪೇಟೆ ಮತ್ತು ಬಾಂಡ್ ಮಾರುಕಟ್ಟೆಯಲ್ಲಿ ಹೆಚ್ಚಿನ ಹೂಡಿಕೆಯ ನಿರೀಕ್ಷೆ ಇದೆ.

ಅ. 27ರವರೆಗೆ ₹20,356 ಕೋಟಿ ಹೂಡಿಕೆಯನ್ನು ವಾಪಸ್ ಪಡೆಯಲಾಗಿದೆ. ಇನ್ನೂ ಎರಡು ದಿನಗಳ ವಹಿವಾಟು ಈ ತಿಂಗಳಲ್ಲಿ ಇದೆ. ಹಾಗಾಗಿ ಈ ಮೊತ್ತ ಇನ್ನೂ ಹೆಚ್ಚಳ ಆಗಬಹುದು. ಸೆಪ್ಟೆಂಬರ್‌ನಲ್ಲಿಯೂ ಎಫ್‌ಪಿಐಗಳು ಹೂಡಿಕೆಯನ್ನು ದೊಡ್ಡ ಪ್ರಮಾಣದಲ್ಲಿಯೇ ಹಿಂದಕ್ಕೆ ಪಡೆದಿದ್ದರು. ಈ ತಿಂಗಳ ಹೂಡಿಕೆ ವಾಪಸ್ ಮೊತ್ತವು ₹14,767 ಕೋಟಿ ಆಗಿತ್ತು.

ಮಾರ್ಚ್‌ನಿಂದ ಆಗಸ್ಟ್‌ವರೆಗಿನ ಆರು ತಿಂಗಳಲ್ಲಿ ಎಫ್‌ಪಿಐಗಳಿಂದ ಹೆಚ್ಚಿನ ಹೂಡಿಕೆ ಆಗಿತ್ತು. ಈ ಮೊತ್ತವು ₹1.74 ಲಕ್ಷ ಕೋಟಿ ಆಗಿತ್ತು.

ಈಗ, ಹಣಕಾಸು ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಿಂದ ಹೆಚ್ಚಿನ ಹೂಡಿಕೆ ಹೊರ ಹೋಗುತ್ತಿದೆ.

> **ಇಸ್ರೇಲ್–ಹಮಾಸ್ ಸಂಘರ್ಷದ ಕುರಿತು ಇರುವ ಅನಿಶ್ಚಿತ ಸ್ಥಿತಿಯು ಮಾರುಕಟ್ಟೆಯಲ್ಲಿ ನಕಾರಾತ್ಮಕ ಮನೋಭಾವಕ್ಕೆ ಕಾರಣವಾಗಿದೆ**
> **ವಿ.ಕೆ.ವಿಜಯಕುಮಾರ್,** ಮುಖ್ಯ ಹೂಡಿಕೆ ಪರಿಣತ, ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್

> **ಸೆಪ್ಟೆಂಬರ್ ತ್ರೈಮಾಸಿಕದ ಲಾಭವು ಈ ಹಿಂದಿನ ತ್ರೈಮಾಸಿಕದ ಲಾಭಕ್ಕಿಂತ ಕಡಿಮೆ ಆಗಿರುವುದು ಹೂಡಿಕೆದಾರರಲ್ಲಿ ನಿರಾಶೆಗೆ ಕಾರಣವಾಗಿದೆ**
> **ಮಯಾಂಕ್ ಮೆಹ್ರಾ,** ಕ್ರೇವಿಂಗ್ ಆಲ್ಫಾ ಸಂಸ್ಥೆಯ ಪಾಲುದಾರ

ಹೂಡಿಕೆ ಹಿಂತೆಗೆತಕ್ಕೆ ಕಾರಣಗಳೇನು?

- ಅಮೆರಿಕದಲ್ಲಿ 10 ವರ್ಷದ ಬಾಂಡ್‌ಗಳಿಗೆ ಶೇ 5ಕ್ಕಿಂತ ಹೆಚ್ಚಿನ ಲಾಭ ದೊರಕುತ್ತಿದೆ. 16 ವರ್ಷಗಳಲ್ಲಿ ಇದೇ ಮೊದಲಿಗೆ ಲಾಭವು ಶೇ 5ಕ್ಕಿಂತ ಹೆಚ್ಚಾಗಿದೆ
- ಹೂಡಿಕೆದಾರರು ಅಮೆರಿಕದ ಬಾಂಡ್‌ಗಳಲ್ಲಿ ಹೂಡಿಕೆ ಮಾಡುವುದಕ್ಕೆ ಆದ್ಯತೆ ನೀಡಿದ್ದಾರೆ
- ಹಣದುಬ್ಬರದಿಂದ ಉಂಟಾಗಿರುವ ಒತ್ತಡವು ಹೂಡಿಕೆದಾರರು ಹೆಚ್ಚು ಜಾಗರೂಕರಾಗುವಂತೆ ಮಾಡಿದೆ
- ಅನಿಶ್ಚಿತ ಸ್ಥಿತಿಯ ಕಾರಣದಿಂದಾಗಿ ಡಾಲರ್ ಮತ್ತು ಚಿನ್ನದ ಮೇಲಿನ ಹೂಡಿಕೆ ಹೆಚ್ಚಾಗಿದೆ
- ಜಾಗತಿಕ ಅರ್ಥ ವ್ಯವಸ್ಥೆಯು ದುರ್ಬಲವಾಗಿರುವುದರಿಂದ ಹೂಡಿಕೆದಾರರು ತಮ್ಮ ಹೂಡಿಕೆಯನ್ನು ವೈವಿಧ್ಯಗೊಳಿಸಲು ಬಯಸಿದ್ದಾರೆ

ವಿದ್ಯುತ್ ಉತ್ಪಾದನೆಗೆ ತೆರಿಗೆ ಬೇಡ

ರಾಜ್ಯಗಳ ನಡೆ ಅಕ್ರಮ ಎಂದ ಕೇಂದ್ರ: ಸಚಿವಾಲಯದಿಂದ ಸುತ್ತೋಲೆ

ನವದೆಹಲಿ (ಪಿಟಿಐ): ಕಲ್ಲಿದ್ದಲು, ಜಲ, ಪವನ ಅಥವಾ ಸೌರ ಸೇರಿದಂತೆ ಯಾವುದೇ ಮೂಲದಿಂದ ಉತ್ಪಾದಿಸುವ ವಿದ್ಯುತ್‌ಗೆ ತೆರಿಗೆ ಅಥವಾ ಸುಂಕ ವಿಧಿಸುವ ಅಧಿಕಾರ ರಾಜ್ಯಗಳಿಗೆ ಇಲ್ಲ. ಹೀಗೆ ತೆರಿಗೆ ವಿಧಿಸುವುದು ಅಕ್ರಮ ಮತ್ತು ಅಸಾಂವಿಧಾನಿಕ ಎಂದು ಕೇಂದ್ರ ಸರ್ಕಾರ ಹೇಳಿದೆ.

ಈ ಸಂಬಂಧ ಕೇಂದ್ರ ಇಂಧನ ಸಚಿವಾಲಯವು ಇದೇ 25ರಂದು ಸುತ್ತೋಲೆ ಹೊರಡಿಸಿದ್ದು, ಕೆಲವು ರಾಜ್ಯ ಸರ್ಕಾರಗಳು ವಿವಿಧ ಮೂಲಗಳಿಂದ ಉತ್ಪಾದಿಸುವ ವಿದ್ಯುತ್‌ಗೆ ಹೆಚ್ಚುವರಿ ಶುಲ್ಕ ವಿಧಿಸಿರುವುದು ಕೇಂದ್ರ ಸರ್ಕಾರದ ಗಮನಕ್ಕೆ ಬಂದಿದೆ. ವಿದ್ಯುತ್ ಉತ್ಪಾದನೆಗೆ ತೆರಿಗೆ ಅಥವಾ ಸುಂಕದ ರೂಪದಲ್ಲಿ ಪಡೆಯುವ ಯಾವುದೇ ಹೆಚ್ಚುವರಿ ಶುಲ್ಕವು ಅಕ್ರಮ ಮತ್ತು ಅಸಾಂವಿಧಾನಿಕ. ಇಂಥ ತೆರಿಗೆಗಳನ್ನು ಕೂಡಲೇ ತೆಗೆದುಹಾಕಬೇಕು ಎಂದು ರಾಜ್ಯಗಳಿಗೆ ಸೂಚಿಸಿದೆ.

ತೆರಿಗೆ ಅಥವಾ ಸುಂಕ ವಿಧಿಸುವ ಬಗ್ಗೆ ರಾಜ್ಯಗಳಿಗೆ ಇರುವ ಅಧಿಕಾರದ ಕುರಿತು ಸಂವಿಧಾನದ 7ನೇ ಪರಿಚ್ಛೇದದ ಎರಡನೇ ಪಟ್ಟಿಯಲ್ಲಿ ವಿವರಿಸಲಾಗಿದೆ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

'ಈ ಪಟ್ಟಿಯ 45–63ರ ವರೆಗಿನ ಉಲ್ಲೇಖಗಳಲ್ಲಿ ನಿರ್ದಿಷ್ಟವಾಗಿ ಸೂಚಿಸಿರುವ ವಸ್ತುಗಳ ಮೇಲೆ ಯಾವುದೇ ತೆರಿಗೆ ಅಥವಾ ಸುಂಕವನ್ನು ರಾಜ್ಯಗಳು ವಸೂಲಿ ಮಾಡುವಂತಿಲ್ಲ. ಇದಕ್ಕೆ ಸಂಬಂಧಿಸಿದ ಎಲ್ಲ ಅಧಿಕಾರ ಕೇಂದ್ರ ಸರ್ಕಾರಕಕ್ಕೆ ಮಾತ್ರ ಇದೆ' ಎಂದು ಹೇಳಿದೆ.

ಎರಡನೇ ಪಟ್ಟಿಯ 53ನೇ ಉಲ್ಲೇಖದಲ್ಲಿ (ರಾಜ್ಯ ಪಟ್ಟಿ) ರಾಜ್ಯಗಳು ತಮ್ಮ ಅಧಿಕಾರ ವ್ಯಾಪ್ತಿಯ ಒಳಗೆ ವಿದ್ಯುತ್ ಬಳಕೆ ಅಥವಾ ಮಾರಾಟಕ್ಕೆ ತೆರಿಗೆ ವಿಧಿಸಬಹುದು ಎಂದು ಹೇಳಲಾಗಿದೆ. ಆದರೆ ವಿದ್ಯುತ್ ಉತ್ಪಾದನೆ ಮೇಲೆ ಯಾವುದೇ ತೆರಿಗೆ ಅಥವಾ ಸುಂಕ ವಿಧಿಸುವ ಅಧಿಕಾರವನ್ನು ಇದು ಒಳಗೊಂಡಿಲ್ಲ. ಏಕೆಂದರೆ ಒಂದು ರಾಜ್ಯವು ಉತ್ಪಾದಿಸಿದ ವಿದ್ಯುತ್ ಅನ್ನು ಬೇರೆ ರಾಜ್ಯಗಳಲ್ಲಿ ಬಳಕೆ ಮಾಡಬಹುದು ಮತ್ತು ಬೇರೆ ರಾಜ್ಯಗಳ ನಿವಾಸಿಗಳಿಗೆ ತೆರಿಗೆ ವಿಧಿಸುವ ಅಧಿಕಾರ ರಾಜ್ಯಕ್ಕೆ ಇಲ್ಲ ಎಂದು ಸಚಿವಾಲಯ ತಿಳಿಸಿದೆ.

ಸಂವಿಧಾನದ 286ನೇ ವಿಧಿಯಲ್ಲಿ ರಾಜ್ಯಗಳು ಅನ್ಯ ರಾಜ್ಯಗಳಿಗೆ ಪೂರೈಸುವ ಸರಕು ಅಥವಾ ಸೇವೆಗಳ ಮೇಲೆ ಅಥವಾ ಎರಡಕ್ಕೂ ತೆರಿಗೆ ವಿಧಿಸುವಂತಿಲ್ಲ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ ಎಂದು ಹೇಳಿದೆ.

ಕೇಂದ್ರ ಸರ್ಕಾರವು ಬಳಸಿದ ಅಥವಾ ಮಾರಾಟ ಮಾಡುವ ವಿದ್ಯುತ್ ಮೇಲೆ ರಾಜ್ಯಗಳು ತೆರಿಗೆ ವಿಧಿಸುವಂತಿಲ್ಲ ಎಂದೂ 287 ಮತ್ತು 288ನೇ ವಿಧಿಯು ಸ್ಪಷ್ಟವಾಗಿ ತಿಳಿಸಿದೆ. ಒಟ್ಟಾರೆ ಸಂವಿಧಾನದ ನಿಬಂಧನೆಗಳ ಪ್ರಕಾರ, ಉಷ್ಣ, ಜಲ ಅಥವಾ ನವೀಕರಿಸಬಹುದಾದ ಮೂಲಗಳಿಂದ ಉತ್ಪಾದಿಸುವ ವಿದ್ಯುತ್ ಮೇಲೆ ಅಥವಾ ಅಂತರ ರಾಜ್ಯ ಪೂರೈಕೆಗೆ ಹೆಚ್ಚುವರಿ ಶುಲ್ಕದ ಹೆಸರಲ್ಲಿ ತೆರಿಗೆ ಅಥವಾ ಸುಂಕ ವಿಧಿಸುವ ಅಧಿಕಾರ ರಾಜ್ಯಗಳಿಗೆ ಇಲ್ಲ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ.

ಪ್ರಮುಖ 10 ಕಂಪನಿಗಳ ಮೌಲ್ಯ ₹1.93 ಲಕ್ಷ ಕೋಟಿಯಷ್ಟು ಇಳಿಕೆ

ನವದೆಹಲಿ (ಪಿಟಿಐ): ಪ್ರಮುಖ 10 ಸಂಸ್ಥೆಗಳ ಮಾರುಕಟ್ಟೆ ಮೌಲ್ಯ ಕಳೆದ ವಾರ ₹1,93,181 ಕೋಟಿಯಷ್ಟು ಸಂಯೋಜಿತ ಇಳಿಕೆ ಕಂಡಿವೆ. ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರು ಮೌಲ್ಯ ಇಳಿಕೆಯಿಂದ ಭಾರಿ ನಷ್ಟ ಅನುಭವಿಸಿವೆ.

ಟಿಸಿಎಸ್‌ನ ಮಾರುಕಟ್ಟೆ ಮೌಲ್ಯವು ₹52,580 ಕೋಟಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಮಾರುಕಟ್ಟೆ ಬಂಡವಾಳೀಕರಣ (ಎಂಕ್ಯಾಪ್) ₹40,562 ಕೋಟಿ ಕಡಿಮೆ ಆಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಮೌಲ್ಯ ₹22,935 ಕೋಟಿ, ಇನ್ಫೊಸಿಸ್‌ನ ಮೌಲ್ಯವು ₹19,320 ಕೋಟಿ, ಭಾರ್ತಿ ಏರ್‌ಟೆಲ್‌ನ ಎಂಕ್ಯಾಪ್ ₹17,161 ಕೋಟಿ, ಬಜಾಜ್ ಫೈನಾನ್ಸ್ ₹15,759 ಕೋಟಿ, ಐಸಿಐಸಿಐ ಬ್ಯಾಂಕ್‌ನ ಮೌಲ್ಯ ₹13,827 ಕೋಟಿ, ಐಟಿಸಿಯ ಮೌಲ್ಯ ₹5,900 ಕೋಟಿ, ಹಿಂದೂಸ್ತಾನ್ ಯೂನಿಲಿವರ್‌ನ ಎಂಕ್ಯಾಪ್ ₹3,124 ಕೋಟಿ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ₹2,008 ಕೋಟಿ ಕಡಿಮೆ ಆಗಿದೆ.



ಅತ್ಯಂತ ಮೌಲ್ಯಯುತ ಕಂಪನಿ ಎಂಬ ಹೆಗ್ಗಳಿಕೆಯನ್ನು ರಿಲಯನ್ಸ್ ಇಂಡಸ್ಟ್ರೀಸ್ ಉಳಿಸಿಕೊಂಡಿದೆ. ನಂತರದ ಸ್ಥಾನಗಳಲ್ಲಿ ಟಿಸಿಎಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಹಿಂದೂಸ್ತಾನ್ ಯೂನಿಲಿವರ್, ಇನ್ಫೊಸಿಸ್, ಐಟಿಸಿ, ಭಾರ್ತಿ ಏರ್‌ಟೆಲ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಬಜಾಜ್ ಫೈನಾನ್ಸ್ ಇವೆ. ಕಳೆದ ವಾರ ಮುಂಬೈ ಷೇರುಪೇಟೆಯು ಶೇ 2.46ರಷ್ಟು ಮೌಲ್ಯ ಕಳೆದುಕೊಂಡಿದೆ.

ಬಾಂಗ್ಲಾದಲ್ಲಿ ನಿಲ್ಲದ ಹಿಂಸಾಚಾರ ವಿಪಕ್ಷದ ಹಿರಿಯ ನಾಯಕನ ಸೆರೆ

ಢಾಕಾ (ಪಿಟಿಐ): ರಾಷ್ಟ್ರವ್ಯಾಪಿ ನಡೆಯುತ್ತಿರುವ ಮುಷ್ಕರದ ವೇಳೆ ಪ್ರಮುಖ ವಿರೋಧ ಪಕ್ಷವಾದ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಮತ್ತು ಆಡಳಿತಾರೂಢ ಅವಾಮಿ ಲೀಗ್‌ನ ಬೆಂಬಲಿಗರ ನಡುವೆ ನಡೆದ ಘರ್ಷಣೆಯಲ್ಲಿ ಭಾನುವಾರ ಮೂವರು ಸಾವನ್ನಪ್ಪಿದ್ದಾರೆ. ಘರ್ಷಣೆಗೆ ಸಂಬಂಧಿಸಿ ಬಿಎನ್‌ಪಿ ಹಿರಿಯ ನಾಯಕ, ಪ್ರಧಾನ ಕಾರ್ಯದರ್ಶಿ ಮಿರ್ಜಾ ಫಕ್ರುಲ್ ಇಸ್ಲಾಂ ಅಲಂಗೀರ್(75) ಅವರನ್ನು ಅವರ ಮನೆಯಿಂದ ಪೊಲೀಸರು ಬಂಧಿಸಿದ್ದಾರೆ.

'ಕಾನೂನು ಕ್ರಮಗಳಿಗಾಗಿ ಅಲಂಗೀರ್ ಅವರನ್ನು ಕಸ್ಟಡಿಗೆ ತೆಗೆದುಕೊಂಡಿದ್ದೇವೆ' ಎಂದು ಢಾಕಾ ಮೆಟ್ರೊಪಾಲಿಟನ್ ಪೊಲೀಸ್ ವಕ್ತಾರರು ಸುದ್ದಿಗಾರರಿಗೆ ತಿಳಿಸಿದರು.

'ಪೊಲೀಸರು ಮೊದಲು ಮನೆಗೆ ಬಂದು, ಮನೆಯ ಮತ್ತು ಕಟ್ಟಡದ ಸಿಸಿಟಿವಿ ಕ್ಯಾಮೆರಾದ ಹಾರ್ಡ್ ಡಿಸ್ಕ್ ತೆಗೆದುಕೊಂಡು ಹೋದರು. ನಂತರ ಮರಳಿ ಬಂದು ಅಲಂಗೀರ್ ಅವರನ್ನು ವಶಕ್ಕೆ ತೆಗೆದುಕೊಂಡರು. ಅಲಂಗೀರ್ ತುಂಬಾ ಅನಾರೋಗ್ಯದಿಂದ ಬಳಲುತ್ತಿದ್ದಾರೆ' ಎಂದು ಅವರ ಪತ್ನಿ ಹೇಳಿದ್ದಾರೆ.

ಢಾಕಾದ ಕಾಕ್ರೈಲ್ ಪ್ರದೇಶದಲ್ಲಿ ಶನಿವಾರ ಪೊಲೀಸರು ಮತ್ತು ವಿರೋಧ ಪಕ್ಷದ ಕಾರ್ಯಕರ್ತರ ನಡುವಿನ ಘರ್ಷಣೆಯಲ್ಲಿ ಗಾಯಗೊಂಡಿದ್ದ ಹಿರಿಯ ಪತ್ರಕರ್ತ ರಫೀಕ್ ಭುಯಾನ್ ಅವರು ಭಾನುವಾರ ನಿಧನರಾದರು.



ಢಾಕಾದಲ್ಲಿ ಭಾನುವಾರ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ (ಬಿಎನ್‌ಪಿ) ಕಾರ್ಯಕರ್ತರು ರಾಷ್ಟ್ರವ್ಯಾಪಿ ನಡೆಸುತ್ತಿರುವ ಮುಷ್ಕರದ ವೇಳೆ ದುಷ್ಕರ್ಮಿಗಳು ಹಚ್ಚಿದ ಬೆಂಕಿಗೆ ಬಸ್ ಸುಟ್ಟು ಹೋಗಿದ್ದು, ಪೊಲೀಸ್ ಭದ್ರತೆ ನಿಯೋಜಿಸಲಾಗಿತ್ತು– ಎಎಫ್‌ಪಿ ಚಿತ್ರ

ಬೂಮ್ರಾ, ಶಮಿ ಅಮೋಘ ಬೌಲಿಂಗ್ • ಸೆಮಿಫೈನಲ್‌ನತ್ತ ಭಾರತ ದಾಪುಗಾಲು • ಜೋಸ್ ಬಟ್ಲರ್ ಬಳಗ 'ನಿರ್ಗಮನ'

ರೋಹಿತ್ ಆಟ; ಇಂಗ್ಲೆಂಡ್ 'ಚಿತ್'



ಮೊಹಮ್ಮದ್ ಶಮಿ

ಲಖನೌ: ತಮ್ಮ ಎಂದಿನ ಬೀಸಾಟವನ್ನು ಕೈಬಿಟ್ಟು ತಾಳ್ಮೆಯೇ ಮೂರ್ತಿವೆತ್ತಂತೆ ಬ್ಯಾಟಿಂಗ್ ಮಾಡಿದ ರೋಹಿತ್ ಶರ್ಮಾ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಭಾರತ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. ಇದರೊಂದಿಗೆ ತಂಡದ ಸೆಮಿಫೈನಲ್ ಪ್ರವೇಶವೂ ಬಹುತೇಕ ಖಚಿತವಾಯಿತು.

ಏಕನಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಆತಿಥೇಯ ಭಾರತ ತಂಡವು 100 ರನ್‌ಗಳಿಂದ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವನ್ನು ಪರಾಭವಗೊಳಿಸಿತು.

229 ರನ್‌ಗಳ ಸಾಧಾರಣ ಗುರಿ ಬೆನ್ನಟ್ಟಿದ್ದ ಇಂಗ್ಲೆಂಡ್ ತಂಡವನ್ನು 129 ರನ್‌ಗಳಿಗೆ ಕಟ್ಟಿಹಾಕಿದ ಶ್ರೇಯ ಜಸ್‌ಪ್ರೀತ್ ಬೂಮ್ರಾ (32ಕ್ಕೆ3) ಮತ್ತು ಮೊಹಮ್ಮದ್ ಶಮಿ (22ಕ್ಕೆ4) ಸಂದಿತು. ಇದರಿಂದಾಗಿ ರೋಹಿತ್ (87; 101ಎಸೆತ, 4X10, 6X3) ಜವಾಬ್ದಾರಿಯುತ ಆಟವೂ ವ್ಯರ್ಥ-ವಾಗಲಿಲ್ಲ.

ಭಾರತವು ಟೂರ್ನಿಯಲ್ಲಿ ಇದುವರೆಗೆ ಆಡಿದ ಆರು ಪಂದ್ಯಗಳಲ್ಲಿಯೂ ಜಯಿಸಿದೆ. ಆದರೆ ಇಂಗ್ಲೆಂಡ್‌ಗೆ ಇದು ಐದನೇ ಸೋಲಾಗಿದ್ದು, ನಾಲ್ಕರ ಘಟ್ಟಕ್ಕೆ ಪ್ರವೇಶಿಸುವ ಆಸೆಯೂ ಕಮರಿತು. ಈ ಪಂದ್ಯದಲ್ಲಿ ಇಂಗ್ಲೆಂಡ್ ಬೌಲರ್‌ಗಳು ಉತ್ತಮವಾಗಿ ಆಡಿದರು. ಆದರೆ ಬ್ಯಾಟರ್‌ಗಳು ನೆಲಕಚ್ಚಿದರು.

ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 40 ರನ್‌ಗಳಿಗೇ ಮೂರು ವಿಕೆಟ್‌ಗಳನ್ನು ಕಳೆದುಕೊಂಡ ಭಾರತ ಸಂಕಷ್ಟಕ್ಕೆ ಸಿಲುಕಿತು. ಅಮೋಘ ಲಯದಲ್ಲಿರುವ ವಿರಾಟ್ ಕೊಹ್ಲಿ ಸೊನ್ನೆ ಸುತ್ತಿದಾಗಲಂತೂ ಕ್ರೀಡಾಂಗಣದಲ್ಲಿದ್ದ ಅಭಿಮಾನಿಗಳ ಮುಖಗಳಲ್ಲಿ ದುಗುಡ ಮೂಡಿತ್ತು. ಭಾರತ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಾಗಿತ್ತು.

ಆದರೆ ರೋಹಿತ್ ಶರ್ಮಾ ತಂಡದ ಗೌರವ ಕಾಪಾಡಿ-ದ್ದಲ್ಲದೇ ಗೆಲುವಿಗೂ ಕಾರಣರಾದರು. 101 ಎಸೆತಗಳಲ್ಲಿ 87 ರನ್ ಗಳಿಸಿದ ಅವರ ಆಟದಿಂದ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 229 ರನ್ ಗಳಿಸಿತು. ಬೌಲರ್‌ಗಳಿಗೇ ಹೆಚ್ಚು ನೆರವು ನೀಡಿದ ಪಿಚ್‌ನಲ್ಲಿ ಬ್ಯಾಟಿಂಗ್ ಮಾಡಲು ತಾಳ್ಮೆ ಮತ್ತು ಚಾಣಾಕ್ಷತೆಯ ಅಗತ್ಯವಿತ್ತು. ಆ ಪರೀಕ್ಷೆಯಲ್ಲಿ ರೋಹಿತ್ ಉತ್ತೀರ್ಣರಾದರು. ರೋಹಿತ್ ಜೊತೆಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 91 ರನ್ ಸೇರಿಸಲು ಕಾರಣರಾದ ಕೆ.ಎಲ್. ರಾಹುಲ್ (39; 58ಎ, 4X3) ಅವರ ಆಟವೂ ಮಹತ್ವದ್ದು.

ಬಿಗಿದು ಕಟ್ಟಿದ ತಂತಿಯ ಮೇಲಿನ ನಡಿಗೆಯಿಂತಿದ್ದ ಇನಿಂಗ್ಸ್‌ನಲ್ಲಿ ರೋಹಿತ್ ಮತ್ತು ರಾಹುಲ್ ಒಂದೊಂದೇ ರನ್ ಗಳಿಸಿದರು. ಅವಕಾಶ ಸಿಕ್ಕಾಗ ಬೌಂಡರಿ ಹೊಡೆದರು. ರನ್ ಗಳಿಕೆಯ ವೇಗ ಹೆಚ್ಚಿಸುವ ಭರದಲ್ಲಿ ರಾಹುಲ್ ಅವರು 31ನೇ ಓವರ್ ಹಾಕಿದ ಡೇವಿಡ್ ವಿಲ್ಲಿ ಎಸೆತವನ್ನು ಸಿಕ್ಸರ್‌ಗೆ ಎತ್ತುವ ಪ್ರಯತ್ನ ಮಾಡಿದರು. ಆದರೆ ಫೀಲ್ಡರ್ ಜಾನಿ ಬೆಸ್ಟೊ ಕ್ಯಾಚ್ ಪಡೆದರು. ಜೊತೆಯಾಟ ಮುರಿದು ಬಿತ್ತು.

ಕ್ರೀಸ್‌ಗೆ ಬಂದ ಸೂರ್ಯಕುಮಾರ್ ಯಾದವ್ ಅವರು ರೋಹಿತ್ ಜೊತೆಗೆ ಇನಿಂಗ್ಸ್ ಕಟ್ಟಲು ಕೈಜೋಡಿಸಿದರು. ಕಳೆದ ಕೆಲವು ಪಂದ್ಯಗಳಲ್ಲಿ ಲಯ ಕಂಡುಕೊಳ್ಳಲು ವಿಫಲರಾಗಿದ್ದ ಸೂರ್ಯ ಈ ಪಂದ್ಯದಲ್ಲಿ ಉಪಯುಕ್ತ ಆಟವಾಡಿದರು. ರೋಹಿತ್ ಜೊತೆಗೆ ಐದನೇ ವಿಕೆಟ್ ಜೊತೆಯಾಟದಲ್ಲಿ 33 ರನ್‌ಗಳು ಸೇರಿದ್ದವು. ಈ ಹಂತದಲ್ಲಿ ರೋಹಿತ್ ವಿಕೆಟ್ ಗಳಿಸುವಲ್ಲಿ ಸ್ಪಿನ್ನರ್ ಆದಿಲ್ ರಶೀದ್ ಯಶಸ್ವಿಯಾದರು.

ಸೂರ್ಯ ಒಂದು ರನ್ ಅಂತರದಿಂದ ತಮ್ಮ ಅರ್ಧಶತಕ ತಪ್ಪಿಸಿಕೊಂಡರೂ ತಂಡವು 200 ರನ್‌ಗಳ ಗಡಿಯನ್ನು ದಾಟುವಂತೆ ನೋಡಿಕೊಂಡರು.

ಬೂಮ್ರಾ–ಶಮಿ ಜೊತೆಯಾಟ: ಭಾರತದ ವೇಗದ ಜೋಡಿ ಬೂಮ್ರಾ ಮತ್ತು ಶಮಿ ಅವರ ಬೌಲಿಂಗ್ ಜೊತೆಯಾಟವೂ ರಂಗೇರಿತು. ಇಂಗ್ಲೆಂಡ್‌ಗೆ ಉತ್ತಮ ಆರಂಭ ನೀಡುವ ಪ್ರಯತ್ನ ಮಾಡಿದ ಜಾನಿ ಬೆಸ್ಟೊ ಮತ್ತು ಡೇವಿಡ್ ಮಲಾನ್ ಜೊತೆಯಾಟವನ್ನು ಬೂಮ್ರಾ ಮುರಿದರು. ಈ ಜೋಡಿಯು 27 ಎಸೆತಗಳಲ್ಲಿ 30 ರನ್ ಸೇರಿಸಿತ್ತು. ಆದರೆ ಬೂಮ್ರಾ ಹಾಕಿದ ಐದನೇ ಓವರ್‌ನಲ್ಲಿ ಮಲಾನ್ ಕ್ಲೀನ್‌ಬೌಲ್ಡ್ ಆದರು. ಜೋ ರೂಟ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಎಂಟನೇ ಓವರ್‌ನಲ್ಲಿ ಶಮಿ ಎಸೆತದಲ್ಲಿ ಬೆನ್ ಸ್ಟೋಕ್ಸ್ ಕ್ಲೀನ್‌ಬೌಲ್ಡ್ ಆದರು. 10 ಎಸೆತ ಎದುರಿಸಿದ ಸ್ಟೋಕ್ಸ್ ಸೊನ್ನೆ ಸುತ್ತಿದರು. ನಂತರದ ಹಂತದಲ್ಲಿ ಶಮಿ ಮತ್ತು ಬೂಮ್ರಾ ಅವರದ್ದೇ ಮೇಲುಗೈ.

ಇವರಿಬ್ಬರೊಂದಿಗೆ ಸ್ಪಿನ್ ಜೋಡಿ ಕುಲದೀಪ್ ಯಾದವ್ (24ಕ್ಕೆ2) ಮತ್ತು ರವೀಂದ್ರ ಜಡೇಜ (16ಕ್ಕೆ1) ಬ್ಯಾಟರ್‌ಗಳನ್ನು ಕಾಡಿದರು. ವಿಕೆಟ್ ಪಡೆಯದ ಮೊಹಮ್ಮದ್ ಸಿರಾಜ್ ಮೊದಲ ಸ್ಪೆಲ್‌ನಲ್ಲಿ ದುಬಾರಿಯೂ ಆದರು.



ರೋಹಿತ್ ಶರ್ಮಾ



ಜಸ್‌ಪ್ರೀತ್ ಬೂಮ್ರಾ

ಆರು ಕ್ಲೀನ್‌ಬೌಲ್ಡ್

ಈ ಪಂದ್ಯದಲ್ಲಿ ಇಂಗ್ಲೆಂಡ್ ತಂಡದ ಆರು ಬ್ಯಾಟರ್‌ಗಳು ಕ್ಲೀನ್‌ಬೌಲ್ಡ್ ಆದರು.

ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಭಾರತ ತಂಡವು ಮೂರನೇ ಬಾರಿಗೆ ಈ ಸಾಧನೆ ಮಾಡಿತು. 1986ರಲ್ಲಿ ಶಾರ್ಜಾದಲ್ಲಿ ಶ್ರೀಲಂಕಾ ಎದುರು ಹಾಗೂ 1993ರಲ್ಲಿ ಕೋಲ್ಕತ್ತದಲ್ಲಿ ವೆಸ್ಟ್ ಇಂಡೀಸ್ ಎದುರು ಭಾರತವು ಈ ಸಾಧನೆ ಮಾಡಿತ್ತು.

ಬೇಡಿಗೆ ಗೌರವ

ಭಾರತ ಕ್ರಿಕೆಟ್ ತಂಡದ ಆಟಗಾರರು ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ತಮ್ಮ ತೋಳುಗಳಿಗೆ ಕಪ್ಪುಪಟ್ಟಿ ಕಟ್ಟಿಕೊಂಡು ಆಡಿದರು. ಈಚೆಗೆ ನಿಧನರಾದ ದಿಗ್ಗಜ ಕ್ರಿಕೆಟಿಗ ಬಿಷನ್ ಸಿಂಗ್ ಬೇಡಿ ಅವರಿಗೆ ಗೌರವ ಸಲ್ಲಿಸಲು ರೋಹಿತ್ ಶರ್ಮಾ ಬಳಗದವರು ಕಪ್ಪು ಪಟ್ಟಿ ಧರಿಸಿದ್ದರು.

ಐದು ಸೋಲು

ಈ ಟೂರ್ನಿಯಲ್ಲಿ ಇಂಗ್ಲೆಂಡ್ ತಂಡವು ಆರು ಪಂದ್ಯಗಳಲ್ಲಿ ಆಡಿದ್ದು ಐದರಲ್ಲಿ ಸೋತಿದೆ. ಇದರೊಂದಿಗೆ ಹಾಲಿ ಚಾಂಪಿಯನ್ ತಂಡವೊಂದು ವಿಶ್ವಕಪ್ ಟೂರ್ನಿಯಲ್ಲಿ ಅತಿ ಹೆಚ್ಚು ಪಂದ್ಯಗಳನ್ನು ಸೋತ 'ದಾಖಲೆ' ಮಾಡಿತು.

1992ರ ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾ ನಾಲ್ಕುಪಂದ್ಯಗಳಲ್ಲಿ ಸೋತಿತ್ತು. 1987ರಲ್ಲಿ ಆಸ್ಟ್ರೇಲಿಯಾ ಮತ್ತು 2019ರಲ್ಲಿ ಇಂಗ್ಲೆಂಡ್ ಪ್ರಶಸ್ತಿ ಜಯಿಸಿದ್ದವು.

ಪ್ರಮುಖ ಅಂಶಗಳು

12 ಭಾರತದ ರೋಹಿತ್ ಶರ್ಮಾ ಏಕದಿನ ವಿಶ್ವಕಪ್ ಕ್ರಿಕೆಟ್‌ನಲ್ಲಿ ಗಳಿಸಿದ 50+ ಸ್ಕೋರ್‌ಗಳು. ಇದರೊಂದಿಗೆ ರೋಹಿತ್ ಅವರು ಕೊಹ್ಲಿ, ಶಕೀಬ್, ಕುಮಾರ ಸಂಗಕ್ಕಾರ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ. ಸಚಿನ್ (21) ಅಗ್ರಸ್ಥಾನದಲ್ಲಿದ್ದಾರೆ.

91 ರೋಹಿತ್ ಶರ್ಮಾ ಮತ್ತು ಕೆ.ಎಲ್. ರಾಹುಲ್ ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ ರನ್‌ಗಳು. ಇದಕ್ಕಾಗಿ ಅವರಿಬ್ಬರು 111 ಎಸೆತ ಎದುರಿಸಿದರು.

0 ವಿರಾಟ್ ಕೊಹ್ಲಿ ತಾವು ಆಡಿದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಗಳಲ್ಲಿ ಇದೇ ಮೊದಲ ಸಲ ಸೊನ್ನೆ ಸುತ್ತಿದರು. ಅವರಿಗೆ ಇದು ನಾಲ್ಕನೇ ವಿಶ್ವಕಪ್ ಟೂರ್ನಿ

ಸ್ಕೋರ್ ಕಾರ್ಡ್

ಭಾರತ 9ಕ್ಕೆ 229 (50 ಓವರ್)

ರೋಹಿತ್ ಸಿ ಲಿವಿಂಗ್‌ಸ್ಟೋನ್ ಬಿ ರಶೀದ್ 87 (101 ಎ., 4X10, 6X3)
ಗಿಲ್ ಬಿ ವೋಕ್ಸ್ 9 (13 ಎ., 4X1)
ಕೊಹ್ಲಿ ಸಿ ಸ್ಟೋಕ್ಸ್ ಬಿ ವಿಲಿ 0 (9 ಎ)
ಅಯ್ಯರ್ ಸಿ ವುಡ್ ಬಿ ವೋಕ್ಸ್ 4 (16 ಎ)
ರಾಹುಲ್ ಸಿ ಬೆಸ್ಟೊ ಬಿ ವಿಲಿ 39 (58 ಎ., 4X3)
ಸೂರ್ಯಕುಮಾರ್ ಸಿ ವೋಕ್ಸ್ ಬಿ ವಿಲಿ 49 (47 ಎ., 4X4, 6X1)
ಜಡೇಜ ಎಲ್‌ಬಿಡಬ್ಲ್ಯು ಬಿ ರಶೀದ್ 8 (13 ಎ)
ಶಮಿ ಸಿ ಬಟ್ಲರ್ ಬಿ ವುಡ್ 1 (5 ಎ)
ಬೂಮ್ರಾ ರನೌಟ್ 16 (25 ಎ., 4X1)
ಕುಲದೀಪ್ ಔಟಾಗದೆ 9 (13 ಎ., 4X1)
ಇತರೆ: ಇತರೆ: (ಬೈ 4, ವೈಡ್ 3)
ವಿಕೆಟ್ ಪತನ: 1–26 (ಶುಭಮನ್ ಗಿಲ್; 3.6), 2–27 (ವಿರಾಟ್ ಕೊಹ್ಲಿ; 6.5), 3–40 (ಶ್ರೇಯಸ್ ಅಯ್ಯರ್; 11.5), 4–131 (ಕೆ.ಎಲ್.ರಾಹುಲ್; 30.2), 5–164 (ರೋಹಿತ್ ಶರ್ಮಾ; 36.5), 6–182 (ರವೀಂದ್ರ ಜಡೇಜ; 40.3), 7–183 (ಮೊಹಮ್ಮದ್ ಶಮಿ; 41.2), 8–208 (ಸೂರ್ಯಕುಮಾರ್ ಯಾದವ್; 46.2), 9–229 (ಜಸ್‌ಪ್ರೀತ್ ಬೂಮ್ರಾ; 49.6)
ಬೌಲಿಂಗ್: ಡೇವಿಡ್ ವಿಲಿ 10–2–45–3, ಕ್ರಿಸ್ ವೋಕ್ಸ್ 9–1–33–2, ಆದಿಲ್ ರಶೀದ್ 10–0–35–2, ಮಾರ್ಕ್ ವುಡ್ 9–1–46–1, ಲಿಯಾಮ್ ಲಿವಿಂಗ್‌ಸ್ಟೋನ್ 4–1–29–0, ಮೊಯೀನ್ ಅಲಿ 8–0–37–0

ಇಂಗ್ಲೆಂಡ್ 129 (34.5 ಓವರ್)

ಬೆಸ್ಟೊ ಬಿ ಶಮಿ 14 (23 ಎ., 4X2)
ಮಲಾನ್ ಬಿ ಬೂಮ್ರಾ 16 (17 ಎ., 4X2, 6X1)
ರೂಟ್ ಎಲ್‌ಬಿಡಬ್ಲ್ಯು ಬಿ ಬೂಮ್ರಾ 0 (1)
ಸ್ಟೋಕ್ಸ್ ಬಿ ಶಮಿ 0 (10 ಎ)
ಬಟ್ಲರ್ ಬಿ ಕುಲದೀಪ್ 10 (23 ಎ., 4X1)
ಮೊಯೀನ್ ಸ್ಟಂಪ್ ರಾಹುಲ್ ಬಿ ಶಮಿ 15 (31 ಎ)
ಲಿವಿಂಗ್‌ಸ್ಟೋನ್ ಎಲ್‌ಬಿಡಬ್ಲ್ಯು ಬಿ ಕುಲದೀಪ್ 27 (46 ಎ., 4X2)
ವೋಕ್ಸ್ ಸ್ಟಂಪ್ ರಾಹುಲ್ ಬಿ ಜಡೇಜ 10 (20 ಎ., 4X1)
ವಿಲಿ ಔಟಾಗದೆ 16 (17 ಎ., 6X2)
ರಶೀದ್ ಬಿ ಶಮಿ 13 (20 ಎ., 4X2)
ವುಡ್ ಬಿ ಬೂಮ್ರಾ 0 (1 ಎ)
ಇತರೆ: 8 (ಲೆಗ್‌ಬೈ 2, ವೈಡ್ 6)
ವಿಕೆಟ್ ಪತನ: 1–30 (ಡೇವಿಡ್ ಮಲಾನ್; 4.5), 2–30 (ಜೋ ರೂಟ್; 4.6), 3–33 (ಬೆನ್ ಸ್ಟೋಕ್ಸ್; 7.6), 4–39 (ಜಾನಿ ಬೆಸ್ಟೊ; 9.1), 5–52 (ಜೋಸ್ ಬಟ್ಲರ್; 15.1), 6–81 (ಮೊಯೀನ್ ಅಲಿ; 23.1), 7–98 (ಕ್ರಿಸ್ ವೋಕ್ಸ್; 28.1), 8–98 (ಲಿಯಾಮ್ ಲಿವಿಂಗ್‌ಸ್ಟೋನ್; 29.2), 9–122 (ಆದಿಲ್ ರಶೀದ್; 33.6), 10–129 (ಮಾರ್ಕ್ ವುಡ್; 34.5)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 6.5–1–32–3, ಮೊಹಮ್ಮದ್ ಸಿರಾಜ್ 6–0–33–0, ಮೊಹಮ್ಮದ್ ಶಮಿ 7–2–22–4, ಕುಲದೀಪ್ ಯಾದವ್ 8–0–24–2, ಜಡೇಜ 7–1–16–1

ಫಲಿತಾಂಶ: ಭಾರತಕ್ಕೆ 100 ರನ್ ಗೆಲುವು, ಎರಡು ಅಂಕ

ಲಂಕಾಕ್ಕೆ ಆಘಾತ ನೀಡುವುದೇ ಅಫ್ಗನ್?

ಪುಣೆಯಲ್ಲಿ ಮೆಂಡಿಸ್–ಶಹೀದಿ ಪಡೆಗಳ ಹಣಾಹಣಿ ಇಂದು; ಲಹೀರು ಕುಮಾರ್ ಅಲಭ್ಯ

11 ಒಟ್ಟು ಮುಖಾಮುಖಿ | **7** ಶ್ರೀಲಂಕಾ ಗೆಲುವು | **3** ಅಫ್ಗನ್ ಗೆಲುವು

ಒಂದು ಪಂದ್ಯದಲ್ಲಿ ಫಲಿತಾಂಶವಿಲ್ಲ



ಅಫ್ಗಾನಿಸ್ತಾನದ ಹಷ್ಮತ್‌ವುಲ್ಲಾ ಶಹೀದಿ

ಪಂದ್ಯ ಆರಂಭ: ಮಧ್ಯಾಹ್ನ 2
ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಪುಣೆ (ಪಿಟಿಐ): ಈ ಸಲದ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವನ್ನು ಸೋಲಿಸಿರುವ ಅಫ್ಗಾನಿಸ್ತಾನ ಮತ್ತು ಶ್ರೀಲಂಕಾ ತಂಡಗಳು ಸೋಮವಾರ ಮುಖಾಮುಖಿಯಾಗಲಿವೆ.

ಏಷ್ಯಾ ಖಂಡದ ಈ ಎರಡೂ ತಂಡಗಳು ಸಮಬಲದ ಹೋರಾಟ ನಡೆಸುವ ನಿರೀಕ್ಷೆ ಗರಿಗೆದರಿದೆ. ನಾಲ್ಕರ ಹಂತಕ್ಕೆ ಪ್ರವೇಶಿಸುವ ಕನಸು ಜೀವಂತವಾಗುಳಿಯಬೇಕಾದರೆ ಎರಡೂ ತಂಡಗಳಿಗೂ ಈ ಪಂದ್ಯದಲ್ಲಿ ಗೆಲ್ಲುವುದು ಮುಖ್ಯವಾಗಿದೆ. ಅಂಕಪಟ್ಟಿಯಲ್ಲಿ ಶ್ರೀಲಂಕಾ ಐದು ಅಫ್ಗಾನಿಸ್ತಾನ ಏಳನೇ ಸ್ಥಾನದಲ್ಲಿದೆ.

ಲಂಕಾ ತಂಡವು ಕಳೆದ ಎರಡೂ ಪಂದ್ಯಗಳಲ್ಲಿ ಜಯಿಸಿದೆ. ಅದಕ್ಕಿಂತ ಮೊದಲು ಮೂರು ಪಂದ್ಯಗಳಲ್ಲಿ ಸತತ ಸೋಲನುಭವಿಸಿತ್ತು. ಆದರೆ ಈಚೆಗೆ ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಅಮೋಘ ಬೌಲಿಂಗ್ ಮಾಡಿದ್ದ ಲಹೀರು ಕುಮಾರ ಗಾಯಗೊಂಡಿದ್ದಾರೆ. ಆದ್ದರಿಂದ ಅವರಿಲ್ಲದೇ ತಂಡವು ಕಣಕ್ಕಿಳಿಯಬೇಕಿದೆ.

ಅನುಭವಿ ಏಂಜೆಲೊ ಮ್ಯಾಥ್ಯೂಸ್ ತಂಡಕ್ಕೆ ಮರಳಿದ್ದಾರೆ. ಇದರಿಂದಾಗಿ ಬೌಲಿಂಗ್ ವಿಭಾಗದ ಬಲ ಹೆಚ್ಚಿದಂತಾಗಿದೆ.

ವಿಶ್ವಕಪ್ ಕ್ರಿಕೆಟ್: ಪಾಯಿಂಟ್ ಪಟ್ಟಿ

ದೇಶ	ಪಂದ್ಯ	ಗೆಲುವು	ಸೋಲು	ಟೈ	ಪಾಯಿಂಟ್	ಎನ್‌ಆರ್‌ಆರ್
ಭಾರತ	6	6	0	0	12	1.405
ದಕ್ಷಿಣ ಆಫ್ರಿಕಾ	6	5	1	0	10	2.032
ನ್ಯೂಜಿಲೆಂಡ್	6	4	2	0	8	1.232
ಆಸ್ಟ್ರೇಲಿಯಾ	6	4	2	0	8	0.970
ಶ್ರೀಲಂಕಾ	5	2	3	0	4	-0.205
ಪಾಕಿಸ್ತಾನ	6	2	4	0	4	-0.387
ಅಫ್ಗಾನಿಸ್ತಾನ	5	2	3	0	4	-0.969
ನೆದರ್ಲೆಂಡ್ಸ್	6	2	4	0	4	-1.277
ಬಾಂಗ್ಲಾದೇಶ	6	1	5	0	2	-1.338
ಇಂಗ್ಲೆಂಡ್	6	1	5	0	2	-1.652


ಮಧುಶಂಕಾ ಕೂಡ ಫಾರ್ಮ್‌ನಲ್ಲಿದ್ದಾರೆ. ಪಥುಮ್ ನಿಸಾಂಕ, ಮೆಂಡಿಸ್, ಸದೀರ ಸಮರವಿಕ್ರಮ ಅವರು ಉತ್ತಮ ಲಯದಲ್ಲಿರುವುದರಿಂದ ಬ್ಯಾಟಿಂಗ್ ವಿಭಾಗ ಚೆನ್ನಾಗಿದೆ.

ಆದರೆ ಇದೇ ಟೂರ್ನಿಯಲ್ಲಿ ಪಾಕಿಸ್ತಾನ ಮತ್ತು ಇಂಗ್ಲೆಂಡ್ ತಂಡಗಳಿಗೆ ಆಘಾತ ನೀಡಿರುವ ಹಷ್ಮತ್‌ವುಲ್ಲಾ ಶಹೀದಿ ಬಳಗವೂ ಕಠಿಣ ಸವಾಲು ಒಡ್ಡುವ ಸಾಮರ್ಥ್ಯ ಹೊಂದಿದೆ.

ಕೊನೆಯ ಹಂತದವರೆಗೂ ಹೋರಾಟ ಮಾಡುವ ಮನೋಭಾವ ತಂಡದ ಆಟಗಾರರಲ್ಲಿರುವುದು ವಿಶೇಷ. ಬೌಲರ್‌ಗಳಲ್ಲಿ ನವೀನ್ ಉಲ್ ಹಕ್, ನೂರ್ ಅಹಮದ್ ಹಾಗೂ ಅನುಭವಿ ಸ್ಪಿನ್ನರ್ ರಶೀದ್ ಖಾನ್ ಅವರು ಲಂಕಾ ಬ್ಯಾಟರ್‌ಗಳಿಗೆ ಸವಾಲೊಡ್ಡಬಲ್ಲ ಸಮರ್ಥರು.

ಪಾಕ್ ಪಂದ್ಯದ ಎದುರು ಅರ್ಧಶತಕಗಳನ್ನು ದಾಖಲಿಸಿದ್ದ ರೆಹಮಾನುಲ್ಲಾ ಗುರ್ಬಾಜ್, ಇಬ್ರಾಹಿಂ ಜದ್ರಾನ್ ಮತ್ತು ರೆಹಮತ್ ಶಾ ಅವರು ಬೌಲರ್‌ಗಳಿಗೆ ತಲೆನೋವಾಗಬಲ್ಲರು. ಆದ್ದರಿಂದ ಲಂಕಾ ತಂಡವು ಯಾವುದೇ ಹಂತದಲ್ಲಿಯೂ ಮೈಮರೆಯುವಂತಿಲ್ಲ.

ಈ ಹಿಂದೆ ಏಕದಿನ ಕ್ರಿಕೆಟ್ ನಲ್ಲಿ ಉಭಯ ತಂಡಗಳು 11 ಬಾರಿ ಸೆಣಸಾಡಿವೆ. ಅದರಲ್ಲಿ ಅಫ್ಗಾನಿಸ್ತಾನವು ಮೂರು ಪಂದ್ಯಗಳಲ್ಲಿ ಗೆದ್ದಿದೆ. ಉಳಿದಿದ್ದರಲ್ಲಿ ಸೋತಿದೆ.



ಶ್ರೀಲಂಕೆಯ ಪಥುಮ್ ನಿಸಾಂಕ

ಚೆಸ್: ವೈಶಾಲಿಗೆ ಮಣಿದ ಮಾಜಿ ವಿಶ್ವ ಚಾಂಪಿಯನ್

ಐಲ್ ಆಫ್ ಮ್ಯಾನ್ (ಯುಕೆ), (ಪಿಟಿಐ): ಮಾಜಿ ವಿಶ್ವ ಮಹಿಳಾ ಚೆಸ್ ಚಾಂಪಿಯನ್ ಮರಿಯಾ ಮುಝಿಚುಕ್ ಅವರ ರಕ್ಷಣಾಕೋಟೆಯನ್ನು ಛಿದ್ರಗೊಳಿಸಿದ ಭಾರತದ ಆಟಗಾರ್ತಿ ಆರ್.ವೈಶಾಲಿ, ಫಿಡೆ ಮಹಿಳಾ ಗ್ರ್ಯಾಂಡ್ ಸ್ವಿಸ್ ಚೆಸ್ ಟೂರ್ನಿಯ ನಾಲ್ಕನೇ ಸುತ್ತಿನಲ್ಲಿ ಜಯಗಳಿಸಿರು. ಅವರು 4 ಸುತ್ತುಗಳಿಂದ 3.5 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಇತ್ತೀಚೆಗಷ್ಟೇ ಕತಾರ್ ಓಪನ್‌ನಲ್ಲಿ ಮೂರನೇ ಜಿಎಂ ನಾರ್ಮ್ ಪಡೆದಿದ್ದ ವೈಶಾಲಿ ಈಗ ಗ್ರ್ಯಾಂಡ್‌ಮಾಸ್ಟರ್ ಪದವಿಗೆ ಹತ್ತಿರವಾಗಿದ್ದು, ದೊಡ್ಡ ಸವಾಲುಗಳಿಗೆ ಸಜ್ಜಾಗಿರುವುದನ್ನು ಈ ಪಂದ್ಯದಲ್ಲಿ ತೋರಿಸಿದರು. ಅವರ ಆಕ್ರಮಣಕಾರಿ ಆಟದ ಕೌಶಲ ಶನಿವಾರದ ಪಂದ್ಯದಲ್ಲಿ ಗಮನಸೆಳೆಯಿತು.

ಮೊದಲು ಪ್ರಮುಖ ಪಡೆಯೊಂದನ್ನು ಕಳೆದುಕೊಂಡ ಮರಿಯಾ ನಂತರ ಚೆಕ್‌ಮೇಟ್ ಬಲೆಯೊಳಗೆ ಸಿಲುಕಿ 23ನೇ ನಡೆಯಲ್ಲಿ ಸೋಲೊಪ್ಪಿಕೊಂಡರು. ಇದು ನಾಲ್ಕು ಪಂದ್ಯಗಳಲ್ಲಿ ವೈಶಾಲಿಗೆ ಮೂರನೇ ಜಯ. ಈ ಆಟಗಾರ್ತಿ, ಹೆಚ್ಚು ಪ್ರಸಿದ್ಧಿಪ-ಡೆದಿರುವ ಆರ್.ಪ್ರಜ್ಞಾನಂದ ಅವರ ಅಕ್ಕ.

ಓಪನ್ ವಿಭಾಗದಲ್ಲಿ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ಗೆಲುವಿನತ್ತ ಹೆಜ್ಜೆಯಿಡುವಂತೆ ಕಂಡರೂ ಅಂತಿಮವಾಗಿ ಅಲೆಕ್ಸಾಂಡರ್ ಪ್ರೆಡ್ಕೆ (ಸರ್ಬಿಯಾ) ಎದುರು ಪಾಯಿಂಟ್ ಹಂಚಿಕೊಳ್ಳುವುದಕ್ಕೆ ತೃಪ್ತಿಪಡಬೇಕಾಯಿತು.



ವೈಶಾಲಿ

ಇಬ್ಬರೂ ತಲಾ ಮೂರು ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ವಿದಿತ್ ಸಂತೋಷ್ ಗುಜರಾತಿ ಅವರು ಯಶಸ್ಸಿನ ಓಟ ಮುಂದುವರಿಸಿ ಮೂರನೇ ಗೆಲುವನ್ನು ದಾಖಲಿಸಿದರು. ಈ ಬಾರಿ ಬಿಳಿ ಕಾಯಿಗಳಲ್ಲಿ ಆಡಿದ ಅವರು ಮಾಜಿ ವಿಶ್ವ ಚಾಂಪಿಯನ್‌ಷಿಪ್ ಚಾಲೆಂಜರ್ ಅಲೆಕ್ಸಿ ಶಿರೋವ್ (ಸ್ಪೇನ್) ಅವರನ್ನು ಮಣಿಸಿದರು.

ಈ ಟೂರ್ನಿ ವಿಶ್ವ ಚಾಂಪಿಯನ್‌ಷಿಪ್‌ನ ಭಾಗವಾಗಿದೆ. ಓಪನ್ ವಿಭಾಗದಲ್ಲಿ ಮೊದಲ ಎರಡು ಸ್ಥಾನ ಗಳಿಸಿದ ಆಟಗಾರರು 2024ರ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆಯುತ್ತಾರೆ. ಮಹಿಳಾ ವಿಭಾಗದಲ್ಲಿ ಮೊದಲೆರಡು ಸ್ಥಾನ ಪಡೆದ ಆಟಗಾರ್ತಿಯರು ಮಹಿಳಾ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆಯುತ್ತಾರೆ. ಕ್ಯಾಂಡಿಡೇಟ್ಸ್ ಟೂರ್ನಿಯ ವಿಜೇತ ಆಟಗಾರ, ವಿಶ್ವ ಚಾಂಪಿಯನ್ ಆಟಗಾರನಿಗೆ ಸವಾಲು ಹಾಕುವ ಅರ್ಹತೆ ಗಿಟ್ಟಿಸುತ್ತಾರೆ. ಮೊದಲ ಬೋರ್ಡ್‌ನಲ್ಲಿ ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನ (ಇಟಲಿ, 3), ಉಜ್ಬೇಕಿಸ್ತಾನದ ಜಾವೊಕಿರ್ ಸಿಂದರೋವ್ (3) ಜೊತೆ ಪಾಯಿಂಟ್ ಹಂಚಿಕೊಂಡರು. ಡಿ.ಗುಕೇಶ್ (2) ಅವರು ಇವಾನ್ ಸರಿಕ್ (2) ಜೊತೆ ಡ್ರಾ ಮಾಡಿಕೊಂಡರು.

ಬ್ಯಾಡ್ಮಿಂಟನ್: ಸತೀಶ್, ಇಶಾರಾಣಿಗೆ ಪ್ರಶಸ್ತಿ

ಬೆಂಗಳೂರು: ಭಾರತದ ಸತೀಶ್ ಕುಮಾರ್ ಕರುಣಾಕರನ್ ಮತ್ತು ಇಶಾರಾಣಿ ಬರುವಾ ಅವರು ಇನ್ಫೊಸಿಸ್ ಫೌಂಡೇಷನ್ ಇಂಡಿಯಾ ಇಂಟ-ರ್‌ನ್ಯಾಷನಲ್ ಚಾಲೆಂಜ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಭಾನುವಾರ ನಡೆದ ಪುರುಷರ ಫೈನಲ್ ಪಂದ್ಯದಲ್ಲಿ 16ನೇ ಶ್ರೇಯಾಂಕದ ಸತೀಶ್ ಕುಮಾರ್ ಅವರು 21–14, 21–16ರಿಂದ ನಾಲ್ಕನೇ ಶ್ರೇಯಾಂಕದ ರವಿ (ಭಾರತ) ಅವರನ್ನು ಮಣಿಸಿದರು. ಮಹಿಳೆಯರ ಸಿಂಗಲ್ಸ್‌ನಲ್ಲಿ ಶ್ರೇಯಾಂಕರಹಿತ ಆಟಗಾರ್ತಿ ಇಶಾರಾಣಿ ಅವರು 13–21, 21–19, 21–11ರಿಂದ 9ನೇ ಶ್ರೇಯಾಂಕದ ಆಟಗಾರ್ತಿ, ಭಾರತದ ಉನ್ನತಿ ಹೂಡಾ ವಿರುದ್ಧ ಗೆಲುವು ಸಾಧಿಸಿದರು.

ಪುರುಷರ ಡಬಲ್ಸ್‌ನಲ್ಲಿ ಭಾರತದ ಎ. ಹರಿಹರನ್ ಮತ್ತು ಆರ್. ರುಬನ್ ಕುಮಾರ್ ಜೋಡಿಯು 21–13, 21–14 ರಿಂದ ಸ್ವದೇಶದ ಶ್ಯಾಮ್‌ಪ್ರಸಾದ್ ಮತ್ತು ಸುಬ್ರಮಣಿಯನ್ ಸುಂಜಿತ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದಿತು.

ಮಹಿಳೆಯರ ಡಬಲ್ಸ್‌ನಲ್ಲಿ ಜಪಾನ್‌ನ ಮಿಕು ಶಿಗೇಟಾ ಮತ್ತು ಮಾಯಾ ಟಗುಚಿ ಜೋಡಿಯು 17–21, 21–18, 21–15ರಿಂದ ಪ್ರಿಯಾ ಕೊಂಜೆಂಗಮ್ ಮತ್ತು ಶ್ರುತಿ ಮಿಶ್ರಾ ಅವರನ್ನು ಸೋಲಿಸಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಥಾಯ್ಲೆಂಡ್‌ನ ಥಥರಾಥಾರ್ನ್ ನಿಪೋರ್ನ್‌ರಾಮ್ ಮತ್ತು ನಟ್ಟಮೊನ್ ಲೈಸುವಾನ್ ಜೋಡಿಯು ಮಿಶ್ರ ಡಬಲ್ಸ್‌ನಲ್ಲಿ 21–23, 21–17, 22–20ರಿಂದ ಭಾರತದ ಸತೀಶ್ ಕುಮಾರ್ ಕರುಣಾಕರನ್ ಮತ್ತು ಆದ್ಯಾ ವರಿಯಾತ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು.



ಪ್ರಶಸ್ತಿಯೊಂದಿಗೆ ಥರಾಥಾರ್ನ್ ನಿಪೋರ್ನ್‌ರಾಮ್ ಮತ್ತು ನಟ್ಟಮೊನ್ ಲೈಸುವಾನ್ (ಥಾಯ್ಲೆಂಡ್), ಮಿಕು ಶಿಗೇಟಾ ಮತ್ತು ಮಾಯಾ ಟಗುಚಿ (ಜಪಾನ್), ಇಶಾರಾಣಿ ಬರುವಾ, ಸತೀಶ್ ಕುಮಾರ್ ಕರುಣಾಕರನ್, ಎ. ಹರಿಹರನ್ ಮತ್ತು ಆರ್. ರುಬನ್ ಕುಮಾರ್

ಚಾಂಪಿಯನ್ಸ್ ಟ್ರೋಫಿ: ಅಗ್ರ ಏಳು ತಂಡಗಳಿಗೆ ಅವಕಾಶ

ನವದೆಹಲಿ (ಪಿಟಿಐ): ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಅಗ್ರ 7 ಸ್ಥಾನಗಳನ್ನು ಪಡೆಯುವ ತಂಡಗಳು ಆತಿಥೇಯ ಪಾಕಿಸ್ತಾನದ ಜತೆ 2025ರ ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡಲು ಅವಕಾಶ ಪಡೆಯಲಿವೆ.

ಚಾಂಪಿಯನ್ಸ್ ಟ್ರೋಫಿ ಟೂರ್ನಿಯ ಅರ್ಹತೆಯ ಮಾನದಂಡವನ್ನು ಐಸಿಸಿ 2021 ರಲ್ಲಿ ಬದಲಿಸಿತ್ತು. ಟೂರ್ನಿ ಯ ಪಂದ್ಯಗಳು ಹಳೆಯ ಮಾದರಿಯಂತೆಯೇ ನಡೆಯಲಿದೆ. ಎಂಟು ತಂಡಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಿ ಲೀಗ್ ಪಂದ್ಯಗಳನ್ನು ಆಡಿಸಲಾಗುತ್ತ-ದೆ. ಪ್ರತಿ ಗುಂಪಿನಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ.

ವಿಶ್ವಕಪ್ ಟೂರ್ನಿಯ ಪಾಯಿಂಟ್ ಪಟ್ಟಿಯಲ್ಲಿ 9 ಹಾಗೂ 10ನೇ ಸ್ಥಾನಗಳ-ಲ್ಲಿರುವ ಬಾಂಗ್ಲಾದೇಶ ಮತ್ತು ಇಂಗ್ಲೆಂಡ್ ತಂಡಗಳು ಚಾಂಪಿಯನ್ಸ್ ಟ್ರೋಫಿಗೆ ಅರ್ಹತೆ ಪಡೆಯಲು ಇನ್ನುಳಿದ ಎಲ್ಲ ಪಂದ್ಯಗಳನ್ನು ಗೆಲ್ಲಲೇಬೇಕು.

ಏಳು ಮತ್ತು ಎಂಟನೇ ಸ್ಥಾ-ನದಲ್ಲಿರುವ ಅಫ್ಗಾನಿಸ್ತಾನ ಮತ್ತು ನೆದರ್ಲೆಂಡ್ಸ್ ತಂಡಗಳು ಇನ್ನುಳಿದ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡಿ ಅದೇ ಸ್ಥಾನವನ್ನು ಉಳಿಸಿಕೊಂಡರೆ, ಚಾಂಪಿಯನ್ಸ್ ಟ್ರೋಫಿಗೆ ಅರ್ಹತೆ ಪಡೆಯುವ ಅವಕಾಶ ಹೊಂದಿವೆ.

ಎಂಇಜಿ ತಂಡ ಜಯಭೇರಿ

ಬೆಂಗಳೂರು: ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–2ರಿಂದ ಎಎಸ್‌ಸಿ ಅಂಡ್ ಸೆಂಟರ್ ತಂಡದ ವಿರುದ್ಧ ಜಯ ಸಾಧಿಸಿತು.

ಮತ್ತೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 9–0ಯಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ವಿರುದ್ಧ ಸುಲಭ ಗೆಲುವು ಸಾಧಿಸಿತು.

ಸರ್ಕಾರಿ ನೌಕರರ ಕ್ರೀಡಾಕೂಟ: ಕಬಡ್ಡಿಯಲ್ಲಿ ಬೆಂಗಳೂರು, ಕೊಪ್ಪಳ ಚಾಂಪಿಯನ್

ಬೆಂಗಳೂರು ನಗರಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ತುಮಕೂರು: ಬೆಂಗಳೂರು ನಗರ ತಂಡವು ಭಾನುವಾರ ಮುಕ್ತಾಯವಾದ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ಒಟ್ಟು 45 ಪ್ರಶಸ್ತಿಗಳನ್ನು ಪಡೆದ ಬೆಂಗಳೂರು ನಗರ ತಂಡವು ಪಾರಮ್ಯ ಮೆರೆಯಿತು. 43 ಪ್ರಶಸ್ತಿ ಪಡೆದ ಶಿವಮೊಗ್ಗ ದ್ವಿತೀಯ, 37 ಪ್ರಶಸ್ತಿಗ-ಳೊಂದಿಗೆ ಹಾಸನ ತೃತೀಯ ಸ್ಥಾನ ಪಡೆಯಿತು.

ಮಹಿಳೆಯರ ವಿಭಾಗದ ಕಬಡ್ಡಿ ಫೈನಲ್ ಪಂದ್ಯದಲ್ಲಿ ಬೆಂಗಳೂರು ನಗರ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿತು. ಬೆಂಗಳೂರು ಗ್ರಾಮಾಂತರ ತಂಡ ರನ್ನರ್ ಅಪ್ ಆಯಿತು. ಪುರುಷರ ವಿಭಾಗದಲ್ಲಿ ಕೊಪ್ಪಳ ತಂಡದ ಆಟಗಾರರು ಫೈನಲ್ ಪಂದ್ಯ ಗೆದ್ದು ಸಂಭ್ರಮಿಸಿದರು. ಬಾಗಲಕೋಟೆ ತಂಡ ಎರಡನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು.

ಫಲಿತಾಂಶ: ಪುರುಷರು: ಡಿಸ್ಕಸ್ ಥ್ರೋ: 40 ವರ್ಷದ ಒಳಗಿನವರು– ಸಂತೋಷ್ ಗೋಪಾಲ್ ನಾಯ್ಕ್ (ಉತ್ತರ ಕನ್ನಡ)–1, ಎಂ.ಉಮಾಶಂಕರ್ (ಬೆಂಗಳೂರು ಗ್ರಾಮಾಂತರ)–2, ಎ.ಎಂ.ಪ್ರಭಾಕರ್ (ಚಾಮರಾಜನಗರ)–3; 40 ರಿಂದ 50 ವರ್ಷದ ಒಳಗಿನವರು– ಎನ್. ಬಿ.ನಂದೀಶ್‌ಬಾಬು (ವಿಜಯನಗರ)–1, ವೈ.ಜೆ.ರಾಮೇಗೌಡ (ಚಿಕ್ಕಮಗಳೂರು)–2, ಶ್ರೀನಿವಾಸ್ ಎಂ.ಭಟ್ (ಉತ್ತರ ಕನ್ನಡ)–3; 50 ವರ್ಷಕ್ಕಿಂತ ಮೇಲಿನವರು– ಕೃಷ್ಣ ಜಿ.ಗೌಡ (ಉತ್ತರ ಕನ್ನಡ)–1, ಗಣಪತಿ ಜಕಾತಿ (ಮೈಸೂರು)–2, ಬೋರೇಗೌಡ (ಮಂಡ್ಯ)–3; ಭರ್ಜಿ ಎಸೆತ–ಮಣಿಕಂಠನ್ (ದಕ್ಷಿಣ ಕನ್ನಡ)–1, ಎಸ್.ಆರ್.ನಾರಾಯಣಸ್ವಾಮಿ (ಕೋಲಾರ)–2, ನಾಗರಾಜ್ ಬಿ.ಲಮಾಣಿ (ಬೆಳಗಾವಿ)–3; 200 ಮೀಟರ್ ಓಟ– 40 ವರ್ಷದ ಒಳಗಿನವರು– ಸಿ.ಅರು-ಣ್‌ಕುಮಾರ್ (ಕಲಬುರಗಿ)–1, ಕೆ.ಬಿ. ಶರತ್ (ಚಿಕ್ಕಮಗಳೂರು)–2, ಎಚ್.ಎಲ್. ಚಂದ್ರಶೇಖರ್ (ಚಾಮರಾಜನಗರ)–3; 800 ಮೀಟರ್ ಓಟ: 40 ವರ್ಷದ ಒಳಗಿನವರು– ನಾಗರಾಜು (ಕಲಬುರಗಿ)–1, ಎಚ್.ಎಸ್.ಮಂಜುನಾಥ್(ಬೆಂಗಳೂರು ನಗರ)–2, ವಿನಾಯಕ ಕಲ್ಮನೆ (ಉಡುಪಿ)–3; 40 ರಿಂದ 50 ವರ್ಷ– ಎ.ಎಸ್.ಪ್ರಮೋದ್ (ಹಾಸನ)–1, ಬಿ.ಮೂರ್ತಿ (ಶಿವಮೊಗ್ಗ)–2, ಕೆ.ರಮೇಶ್ (ಕೊಡಗು)–3; 50ರಿಂದ 60 ವರ್ಷ– ಭಾಸ್ಕರ್ ವಿ.ನಾಯ್ಕ್ (ಉತ್ತರ ಕನ್ನಡ)–1, ಪುಟ್ಟಣ್ಣಗೌಡ (ದಾವಣಗೆರೆ)–2, ಎಚ್. ಟಿ.ಥೀಕ್ಷ (ಶಿವಮೊಗ್ಗ)–3;

10000 ಮೀಟರ್– ಎ.ಬಿ. ಚಂಗಪ್ಪ (ಹಾಸನ)–1, ನಿಲವಂಜಿ ನಾಗರಾಜ್ (ವಿಜಯನಗರ)–2, ಪಿ.ಅಭಿಷೇಕ್ (ಬೀದರ್)–3; 400 ಮೀಟರ್ ಹರ್ಡಲ್ಸ್– ಕೆ.ಎಂ.ಯತಿರಾಜು (ಶಿವಮೊಗ್ಗ)–1, ಎಂ.ಪುನೀತ್–2, ಗಿರೀಶ್ ನೀಲಕೊಪ್ಪ (ಹಾವೇರಿ)–3; ಹೈಜಂಪ್: 45 ವರ್ಷದ ಒಳಗಿನವರು– ಎ.ಎಂ.ಪ್ರಭಾಕರ್–1, ಚಂದ್ರಪ್ಪ–2, ರಾಘವೇಂದ್ರ (ತುಮಕೂರು)–3; ವಾಲಿಬಾಲ್: ಕಾರವಾರ–1, ಹಾವೇರಿ–2; ಫುಟ್‌ಬಾಲ್– ಬೀದರ್–1, ಬೆಂಗಳೂರು ನಗರ–2; 4X100 ರಿಲೇ– ಕಲಬುರಗಿ–1, ಶಿವಮೊಗ್ಗ–2, ಹಾವೇರಿ–3. ಮಹಿಳೆಯರ ವಿಭಾಗ– ಹಾಸನ–1, ದಕ್ಷಿಣ ಕನ್ನಡ–2, ಬೆಂಗಳೂರು ನಗರ– 3; ಕುಸ್ತಿ: 57 ಕೆ.ಜಿ– ಯಲ್ಲಾಲಿಂಗಪ್ಪ ಯಾವಗಲ್ (ಬೆಳಗಾವಿ)–1, ದೇವಲನಾಯ್ಕ್ (ಶಿವಮೊಗ್ಗ)–2; 61 ಕೆ.ಜಿ– ಕಿರಣ್ ಆರ್.ನಾಯಕ್ (ಬಾಗಲಕೋಟೆ)–1, ಚಂದ್ರಕಾಂತ್ ತಲವಾಡಿ (ಬೀದರ್)–2; 65 ಕೆ.ಜಿ– ಮರಿಸ್ವಾಮಿ (ಕಲಬುರಗಿ)–1, ಎಸ್.ಅಶೋಕ್ (ಗದಗ)–2; 70 ಕೆ.ಜಿ– ಬಿ.ಎ.ಮುಲ್ಲಾ (ಬೆಳಗಾವಿ)–1; 74 ಕೆ.ಜಿ– ವಿಶ್ವರಾಜ್ (ಕಲಬುರಗಿ)–1, ಟಿ.ಸ್ವಾಮಿ (ಬಳ್ಳಾರಿ)–2; 79 ಕೆ.ಜಿ– ಟಿ.ಬಿ.ಸುರೇಶ್ (ದಾವಣಗೆರೆ)–1, ಶ್ರೀಶೈಲ ಎಸ್.ಕಳಸ (ಹಾವೇರಿ)–2; 86 ಕೆ.ಜಿ– ಉಪೇಂದ್ರ ಕೆರೆಕಲಮತ್ತಿ (ಧಾರವಾಡ)–1, ಎ.ಸಿ. ಬಸವರಾಜ್ (ತುಮಕೂರು)–2; 92 ಕೆ.ಜಿ– ಎನ್.ಮತ್ತೇಶ್ (ಬೆಂಗಳೂರು)–1, ಸುನಿಲ ಬಾಗೇವಾಡಿ (ಬೆಳಗಾವಿ)–2; 97 ಕೆ.ಜಿ– ವಿ.ನವೀನ್ (ಬೆಂಗಳೂರು)–1, ದೇವರಾಜು ಎಂ.ನಾಯಕ (ಹಾವೇರಿ)–2; 125 ಕೆ.ಜಿ– ಎನ್.ಪೃಥ್ವಿರಾಜ್ (ವಿಜಯಪುರ)–1, ಮೊಹ್ಮದ್ ಪಾಷಾ (ಕಲಬುರಗಿ)–2

ಮಹಿಳೆಯರು: ಡಿಸ್ಕಸ್ ಥ್ರೋ: 35 ವರ್ಷದ ಒಳಗಿನವರು– ಪುಷ್ಪಾ–1, ಎನ್.ನಾಗಮಣಿ (ಚಿಕ್ಕಬಳ್ಳಾಪುರ)–2, ರೇಷ್ಮಾ ನಾಯಕ್ (ಹಾವೇರಿ)–3; 35 ವರ್ಷಕ್ಕಿಂತ ಮೇಲಿನವರು– ಭಾಗೀರಥಿ ರೈ (ದಕ್ಷಿಣ ಕನ್ನಡ)–1, ಡಿ.ಇವಂಜಲಿನಾ (ಬೆಂಗಳೂರು ನಗರ)–2, ಯಮುನಾ ನಾಯ್ಕ್ (ಉತ್ತರ ಕನ್ನಡ)–3; ಜಾವೆಲಿನ್ ಥ್ರೋ – ಸಾವಿತ್ರಿ ಎಸ್.ಮಾದಪ್ಪನವರ್ (ಗದಗ)–1, ಭಾಗೀರಥಿ ರೈ (ದಕ್ಷಿಣ ಕನ್ನಡ)–2, ಕೆ.ವಿ.ರೂಪಾ (ಬೆಂಗಳೂರು ಗ್ರಾಮಾಂತರ)–3.

200 ಮೀಟರ್ ಓಟ: 35 ವರ್ಷದ ಒಳಗಿನವರು– ವೃಂದಾ (ಚಿತ್ರದುರ್ಗ)–1, ರಂಜನಾ ಭಂಡಾರಿ (ಉತ್ತರ ಕನ್ನಡ)–2, ಸಿ.ಜ್ಯೋತಿ–3; 35ರಿಂದ 40 ವರ್ಷ– ಜಿ.ಪಿ.ಕವಿತಾ (ಹಾಸನ)–1, ನಳಿನಿ (ಮೈಸೂರು)–2, ಜಿ.ಎಸ್.ನೇತ್ರಾವತಿ (ಹಾಸನ)–3; 45 ರಿಂದ 60 ವರ್ಷ– ಎಂ.ಎಸ್.ಸರೋಜಾ (ಮೈಸೂರು)–1, ಗೀತಾ (ಉಡುಪಿ)–2, ಕನ್ಯಾಕುಮಾರಿ (ಶಿವಮೊಗ್ಗ)–3 800 ಮೀಟರ್: 35 ವರ್ಷ ಒಳಗಿನವರು– ಎಚ್. ಎಂ.ಜ್ಯೋತಿ (ಶಿವಮೊಗ್ಗ)–1, ಬಿ.ಎನ್. ಹೇಮಲತಾ (ಹಾಸನ)–2, ಕೆ.ಪಿ.ಗುಣವತಿ (ಬೆಂಗಳೂರು ನಗರ)–3;

ಹೈಜಂಪ್: 35 ವರ್ಷ ಒಳಗಿನವರು– ಜೆ.ಭಾರತಿ (ದಕ್ಷಿಣ ಕನ್ನಡ)–1, ಬಿ. ವೃಂದಾ(ಚಿತ್ರದುರ್ಗ)–2, ರೇಖಾ ಅಕ್ಕಿ (ವಿಜಯನಗರ)–3; ಥ್ರೋಬಾಲ್– ಚಿಕ್ಕಬಳ್ಳಾಪುರ–1, ಚಾಮರಾಜನಗರ–2.

ಕುಸ್ತಿ: 50 ಕೆ.ಜಿ– ಬಿ.ಕವಿತಾ (ಚಿತ್ರದುರ್ಗ)–1, ಪದ್ಮಾವತಿ (ಶಿವಮೊಗ್ಗ)–2; 53 ಕೆ.ಜಿ–ಜಿ.ಎಲ್. ನಾಗವೇಣಿ (ತುಮಕೂರು)–1, ರೇಖಾ ಜಿ.ಬಗಲಿ (ಧಾರವಾಡ)–2; 55 ಕೆ.ಜಿ– ಬಿ.ರೇಷ್ಮ (ಕೋಲಾರ)–1, ಸರಸ್ವತಿ ಸುನಯಾ (ಧಾರವಾಡ)–2; 57 ಕೆ.ಜಿ– ಭೂಲಕ್ಷ್ಮಿ (ದಾವಣಗೆರೆ)–1, ಭಾರತಿ ವಿ.ಗಂಗಾವತಿ (ಬಾಗಲಕೋಟೆ)–2; 59 ಕೆ.ಜಿ– ಎಸ್.ಜಿ.ನಿರ್ಮಲಾ (ತುಮಕೂರು)–1, ಎಚ್.ಈರಮ್ಮ (ರಾಯಚೂರು)–2; 62 ಕೆ.ಜಿ– ಬಿ.ಸುಧಾ (ದಾವಣಗೆರೆ)–1, ರೇಣುಕಾ (ಬೀದರ್)–2; 65 ಕೆ.ಜಿ– ಎಂ.ಪಿ.ಗಾಯತ್ರಿ (ದಾವಣಗೆರೆ)–1, ಬಿ.ಆರ್.ಗಾಯತ್ರಮ್ಮ (ಹಾಸನ)–2; 68 ಕೆ.ಜಿ– ಮಂಜಮ್ಮ (ದಾವಣಗೆರೆ)–1, ಬೇಬಿ ಆರ್.ಪಾಟೀಲ್ (ಬಾಗಲಕೋಟೆ)–2; 72 ಕೆ.ಜಿ– ಎ.ಎಸ್.ನರ್ಗೀಸ್ ಬಾನು (ತುಮಕೂರು)–1, ಶಾಂತವ್ವ ಛಲವಾದಿ (ಬಳ್ಳಾರಿ)–2; 76 ಕೆ.ಜಿ– ರೂಪಾ ಬಿ.ಬ-ಸಪ್ಪನವರ್ (ದಾವಣಗೆರೆ)–1, ಕೆ.ಆರ್. ಪರಿಮಳಾ (ಶಿವಮೊಗ್ಗ)–2.



ತುಮಕೂರಿನಲ್ಲಿ ಭಾನುವಾರ ಮುಕ್ತಾಯವಾದ ಸರ್ಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾಕೂಟದ ಕಬಡ್ಡಿ ಪಂದ್ಯಾವಳಿಯ ವಿಜೇತ ಕೊಪ್ಪಳ ತಂಡ

37ನೇ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆ: ಕರ್ನಾಟಕದ ಪದಕ ಬೇಟೆ

ಶ್ರೀಹರಿ, ನೀನಾ ವೆಂಕಟೇಶ್ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಶ್ರೀಹರಿ ನಟರಾಜ್ ಮತ್ತು ನೀನಾ ವೆಂಕಟೇಶ್ ಅವರು ಗೋವಾದಲ್ಲಿ ನಡೆಯುತ್ತಿರುವ 37ನೇ ರಾಷ್ಟ್ರೀಯ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದುಕೊಂಡರು.

ಭಾನುವಾರ ನಡೆದ ಪುರುಷರ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಶ್ರೀಹರಿ ಅವರು 1 ನಿ. 49.09 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿದರು. ಎರಡನೇ ಸ್ಥಾನ ಪಡೆದ ಕೇರಳದ ಸಜನ್ ಪ್ರಕಾಶ್ (1 ನಿ. 51.10 ಸೆ.) ಒಡ್ಡಿದ ಸವಾಲನ್ನು ಅವರು ಬದಿಗೊತ್ತಿದರು. ಕರ್ನಾಟಕದ ಅನೀಶ್ ಎಸ್. ಗೌಡ (1 ನಿ. 52.18 ಸೆ.) ಕಂಚು ತಮ್ಮದಾಗಿಸಿಕೊಂಡರು.

ನೀನಾ ಅವರು ಮಹಿಳೆಯರ 100 ಮೀ. ಬಟರ್‌ಫ್ಲೈ ಸ್ಪರ್ಧೆಯನ್ನು 1 ನಿ. 2.22 ಸೆ.ಗಳಲ್ಲಿ ಪೂರೈಸಿ ಬಂಗಾರ ಜಯಿಸಿದರು. ಮಹಿಳೆಯರ 200 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಧೀನಿಧಿ ದೇಸಿಂಗು ಅವರು 2 ನಿ. 7.32 ಸೆ.ಗಳೊಂದಿಗೆ ರಾಜ್ಯಕ್ಕೆ ಚಿನ್ನ ತಂದಿತ್ತರು. ಹಷಿಕಾ ರಾಮಚಂದ್ರ ಅವರು ನಾಲ್ಕನೇ ಸ್ಥಾನ ಪಡೆದರು. ಪುರುಷರ 100 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ಸಜನ್ ಪ್ರಕಾಶ್ ಕೂಟ ದಾಖಲೆಯೊಂದಿಗೆ (53.79 ಸೆ.) ಚಿನ್ನ ಜಯಿಸಿದರು.


ನೀನಾ ವೆಂಕಟೇಶ್


ಶ್ರೀಹರಿ ನಟರಾಜ್

ಕರ್ನಾಟಕ ಪುರುಷರ ಮತ್ತು ಮಹಿಳೆಯರ 4X100 ಮೀ. ಫ್ರೀಸ್ಟೈಲ್ ರಿಲೇ ತಂಡಗಳೂ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದುಕೊಂಡವು.

ಆರ್.ಸಂಭವ್, ಎಂ.ಪೃಥ್ವಿ, ಅನೀಶ್ ಎಸ್.ಗೌಡ ಮತ್ತು ಶ್ರೀಹರಿ ನಟರಾಜ್ ಅವರನ್ನೊಳಗೊಂಡ ಪುರುಷರ ತಂಡ 3 ನಿ. 26.88 ಸೆ.ಗಳೊಂದಿಗೆ ಮೊದಲ ಸ್ಥಾನ ಪಡೆಯಿತು. ತಮಿಳುನಾಡು ಮತ್ತು ಮಹಾರಾಷ್ಟ್ರ ತಂಡಗಳು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡವು.

ಹಷಿಕಾ ರಾಮಚಂದ್ರ, ಶಾಲಿನಿ ಆರ್. ದೀಕ್ಷಿತ್, ನೀನಾ ವೆಂಕಟೇಶ್ ಮತ್ತು ಧೀನಿಧಿ ದೇಸಿಂಗು ಅವರಿದ್ದ ಮಹಿಳಾ ತಂಡ 3 ನಿ. 59.53 ಸೆ.ಗಳೊಂದಿಗೆ ಚಿನ್ನ ಜಯಿಸಿತು. ಮಹಾರಾಷ್ಟ್ರ ಮತ್ತು ಅಸ್ಸಾಂ ತಂಡಗಳು ಎರಡು ಹಾಗೂ ಮೂರನೇ ಸ್ಥಾನ ಗಳಿಸಿದವು.

ರಾಜ್ಯದ ಸ್ನೇಹಾ 'ವೇಗದ ರಾಣಿ'


ಎಸ್.ಎಸ್.ಸ್ನೇಹಾ

ಕರ್ನಾಟಕದ ಎಸ್.ಎಸ್.ಸ್ನೇಹಾ ಅವರು ರಾಷ್ಟ್ರೀಯ ಕ್ರೀಡಾಕೂಟದ ಅಥ್ಲೆಟಿಕ್ಸ್‌ನ ಮಹಿಳೆಯರ 100 ಮೀ. ಓಟದಲ್ಲಿ ಚಿನ್ನ ಗೆದ್ದು 'ವೇಗದ ರಾಣಿ' ಗೌರವ ತಮ್ಮದಾಗಿಸಿಕೊಂಡರು.

ಭಾನುವಾರ ನಡೆದ ಸ್ಪರ್ಧೆಯನ್ನು ಅವರು 11.45 ಸೆ.ಗಳೊಂದಿಗೆ ಪೂರೈಸಿದರು. ಒಡಿಶಾದ ಶ್ರಬಣಿ ನಂದಾ (11.50 ಸೆ.) ಮತ್ತು ತಮಿಳುನಾಡಿನ ಆರ್.ಗಿರಿಧರಣಿ (11.58 ಸೆ.) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಜಯಿಸಿದರು.

ಪುರುಷರ ವಿಭಾಗದ ಚಿನ್ನವನ್ನು ತಮಿಳುನಾಡಿನ ವಿ.ಕೆ.ಎಲಕ್ಕಿಯದಾಸನ್ (10.36 ಸೆ.) ಗೆದ್ದರು. ಮಹಾರಾಷ್ಟ್ರದ ಗುರವ್ ಪ್ರಣವ್ (10.41 ಸೆ.) ಮತ್ತು ಸರ್ವಿಸಸ್‌ನ ಸೌರಭ್ ರಾಜೇಶ್ (10.45 ಸೆ.) ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿದರು. ಸರ್ವಿಸಸ್ ತಂಡವನ್ನು ಪ್ರತಿನಿಧಿಸಿದ ಕರ್ನಾಟಕದ ಎಚ್.ಮಣಿಕಂಠ (10.46 ಸೆ.) ನಾಲ್ಕನೇ ಸ್ಥಾನಕ್ಕೆ ಜಾರಿದರು. ಮಣಿಕಂಠ ಅವರು ಬೆಂಗಳೂರಿನಲ್ಲಿ ಈಚೆಗೆ ನಡೆದಿದ್ದ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್‌ನಲ್ಲಿ ರಾಷ್ಟ್ರೀಯ ದಾಖಲೆ (10.23 ಸೆ.) ಸ್ಥಾಪಿಸಿದ್ದರು.

ಫುಟ್‌ಬಾಲ್: ಮಹಿಳಾ ತಂಡದ ಒಲಿಂಪಿಕ್ಸ್ ಕನಸು ಭಗ್ನ

ತಾಷ್ಕೆಂಟ್ (ಪಿಟಿಐ): ಭಾರತ ಮಹಿಳಾ ಫುಟ್‌ಬಾಲ್ ತಂಡದವರು ಎಎಫ್‌ಸಿ ಅರ್ಹತಾ ಟೂರ್ನಿಯ ಎರಡನೇ ಪಂದ್ಯದಲ್ಲಿ 1–3 ಗೋಲುಗಳಿಂದ ವಿಯೆಟ್ನಾಂ ಎದುರು ಸೋಲುವುದರೊಂದಿಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಅವಕಾಶವನ್ನು ಕಳೆದುಕೊಂಡರು.

ಭಾರತ ತಂಡ ಮೊದಲ ಪಂದ್ಯದಲ್ಲಿ 0–7 ಗೋಲುಗಳಿಂದ ಜಪಾನ್ ತಂಡಕ್ಕೆ ಮಣಿದಿತ್ತು. 'ಸಿ' ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ಬುಧವಾರ ಉಜ್ಬೆಕಿಸ್ತಾನ ವಿರುದ್ಧ ಆಡಲಿದೆ. ಆದರೆ ಆ ಪಂದ್ಯದಲ್ಲಿ ಗೆದ್ದರೂ, ಭಾರತ ತಂಡ ಮುಂದಿನ ಹಂತ ಪ್ರವೇಶಿಸುವುದಿಲ್ಲ.

ಮೂರು ಗುಂಪುಗಳ ವಿಜೇತರು ಮತ್ತು 'ರನ್ನರ್ ಅಪ್' ಸ್ಥಾನ ಪಡೆದ ಒಂದು ತಂಡ ಅರ್ಹತಾ ಟೂರ್ನಿಯ ಮೂರನೇ ಹಾಗೂ ಫೈನಲ್ ಸುತ್ತು ಪ್ರವೇಶಿಸಲಿವೆ.

ಭಾನುವಾರ ನಡೆದ ಪಂದ್ಯದಲ್ಲಿ ಹ್ಯೂನ್ ಎನ್‌ಹು (4ನೇ ನಿ.), ಟ್ರಾನ್ ಥಿ ಹಾಯ್ ಲಿನ್ (22) ಮತ್ತು ಫಾಮ್ ಹೆ ಯೆನ (73) ಅವರು ವಿಯೆಟ್ನಾಂ ಪರ ಗೋಲು ಗಳಿಸಿದರು.

ಭಾರತ ತಂಡದ ಏಕೈಕ ಗೋಲನ್ನು ಸಂಧ್ಯಾ ರಂಗನಾಥನ್ ಅವರು 80ನೇ ನಿಮಿಷದಲ್ಲಿ ತಂದಿತ್ತರು. ಎಲ್ಲ ನಾಲ್ಕು ಗೋಲುಗಳು ಹೆಡರ್ ಮೂಲಕ ಬಂದದ್ದು ವಿಶೇಷ.

ಯೂಕಿ–ಕ್ಯಾಶ್ ಜೋಡಿಗೆ ಪ್ರಶಸ್ತಿ


ಯೂಕಿ ಭಾಂಬ್ರಿ

ನವದೆಹಲಿ (ಪಿಟಿಐ): ಭಾರತದ ಯೂಕಿ ಭಾಂಬ್ರಿ ಮತ್ತು ಬ್ರಿಟನ್‌ನ ಜೂಲಿಯನ್ ಕ್ಯಾಶ್ ಅವರು ಫ್ರಾನ್ಸ್‌ನಲ್ಲಿ ನಡೆದ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಜೋಡಿಗೆ ಆಘಾತ ನೀಡಿ ಕಿರೀಟ ಮುಡಿಗೇರಿಸಿಕೊಂಡರು.

ಭಾನುವಾರ ನಡೆದ ಫೈನಲ್‌ನಲ್ಲಿ ಭಾರತ- ಬ್ರಿಟನ್ ಜೋಡಿ 6–7, 6–3, 10–5 ರಿಂದ ಫ್ರಾನ್ಸ್‌ನ ಅಲ್ಬನೊ ಒಲಿವೆಟಿ– ಬ್ರಿಟನ್‌ನ ರಾಬರ್ಟ್ ಗಾಲೊವೆ ಅವರನ್ನು ಪರಾಭವಗೊಳಿಸಿತು.

ಯೂಕಿ ಅವರು ಗೆದ್ದ ಮೂರನೇ ಚಾಲೆಂಜರ್ ಟ್ರೋಫಿ ಇದು. ಭಾರತದ 31 ವರ್ಷದ ಆಟಗಾರ ಮತ್ತು ಬ್ರಿಟನ್‌ನ ಜತೆಗಾರ ಈ ಗೆಲುವಿನ ಮೂಲಕ 100 ಎಟಿಪಿ ಪಾಯಿಂಟ್ಸ್‌ಗಳನ್ನು ತಮ್ಮದಾಗಿಸಿಕೊಂಡರು.

ಶನಿವಾರ ನಡೆದಿದ್ದ ಸೆಮಿಫೈನಲ್‌ನಲ್ಲಿ ಯೂಕಿ–ಕ್ಯಾಶ್ ಜೋಡಿ 6–3, 6–7, 10–7 ರಿಂದ ನೆದರ್ಲೆಂಡ್ಸ್‌ನ ಸ್ಯಾಂಡರ್ ಅರೆಂಡ್ಸ್ ಮತ್ತು ಮೆಕ್ಸಿಕೊದ ಮಿಗುಯೆಲ್ ಏಂಜೆಲ್ ವರೆಲಾ ಅವರನ್ನು ಮಣಿಸಿತ್ತು.

ಯೂಕಿ ಈ ವರ್ಷದ ಜುಲೈನಲ್ಲಿ ಸ್ಪೇನ್‌ನ ಮಲೋರ್ಕದಲ್ಲಿ ತಮ್ಮ ಚೊಚ್ಚಲ ಎಟಿಪಿ ಟೂರ್ ಪ್ರಶಸ್ತಿ ಜಯಿಸಿದ್ದರು.

ರಷ್ಯಾದ ಬೊಬ್ರೊವ್‌ಗೆ ಸಿಂಗಲ್ಸ್ ಕಿರೀಟ

ಐಟಿಎಫ್ ದಾವಣಗೆರೆ ಓಪನ್ ಟೆನಿಸ್ ಟೂರ್ನಿಗೆ ತೆರೆ: ನಿಕ್ ಚಾಪೆಲ್‌ಗೆ ನಿರಾಸೆ

• ಜಿ.ಶಿವಕುಮಾರ

ದಾವಣಗೆರೆ: ಬಿಸಿಲಿನ ತಾಪ ನಿಧಾನವಾಗಿ ಏರುತ್ತಿದ್ದ ಹೊತ್ತಿನಲ್ಲೇ ದಾವಣಗೆರೆ ಜಿಲ್ಲಾ ಟೆನಿಸ್ ಸಂಸ್ಥೆಯ ಅಂಗಳದಲ್ಲಿ 'ಸ್ನೇಹಿತರ' ಹಣಾಹಣಿ ಶುರುವಾಗಿತ್ತು. ಪಾದರಸದಂತಹ ಚಲನೆ, ಮನಮೋಹಕ ರಿಟರ್ನ್ ಹಾಗೂ ಚುರುಕಿನ ಡ್ರಾಪ್‌ಗಳ ಮೂಲಕ ಮಿಂಚು ಹರಿಸಿದ ರಷ್ಯಾದ ಬೊಗ್ಡಾನ್ ಬೊಬ್ರೊಬ್ ಜಯದ ತೋರಣ ಕಟ್ಟಿದರು.

ಐಟಿಎಫ್ ದಾವಣಗೆರೆ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ಫೈನಲ್‌ನಲ್ಲಿ ಬೊಬ್ರೊವ್ 6–3, 7–6ರಿಂದ ಅಮೆರಿಕದ ನಿಕ್ ಚಾಪೆಲ್ ಸವಾಲು ಮೀರಿದರು. ಟೂರ್ನಿಯ ಕೊನೆಯ ದಿನವಾದ ಭಾನುವಾರ, ಟೆನಿಸ್ ಪ್ರಿಯರು ನಿರೀಕ್ಷೆಗಿಂತಲೂ ಅಧಿಕ ಸಂಖ್ಯೆಯಲ್ಲಿ ಕ್ರೀಡಾಂಗಣಕ್ಕೆ ಬಂದಿದ್ದರು. ಬೊಬ್ರೊವ್ ಹಾಗೂ ಚಾಪೆಲ್, 1 ಗಂಟೆ 38 ನಿಮಿಷ ಜಿದ್ದಾಜಿದ್ದಿನ ಪೈಪೋಟಿ ನಡೆಸಿ ಅಭಿಮಾನಿಗಳನ್ನು ಖುಷಿಯ ಕಡಲಲ್ಲಿ ತೇಲಿಸಿದರು. ಗ್ಯಾಲರಿಯಲ್ಲಿ ಕುಳಿತಿದ್ದ ಪ್ರೇಕ್ಷಕರೊಬ್ಬರು 'ಕಮಾನ್ ಬಾಬುರಾವ್ (ಬೊಬ್ರೊವ್)' ಎಂದು ಕೂಗಿದಾಗ ಅವರ ಆಸುಪಾಸಿನಲ್ಲಿ ಕುಳಿತಿದ್ದವರ ಮೊಗದಲ್ಲಿ ನಗು ಉಕ್ಕಿತು.

ಸಿಂಗಲ್ಸ್‌ನಲ್ಲಿ ಚಾಪೆಲ್ ಅಗ್ರ ಶ್ರೇಯಾಂಕ ಹೊಂದಿದ್ದರು. ಬೊಬ್ರೊವ್ 2ನೇ ಶ್ರೇಯಾಂಕ ಪಡೆದಿದ್ದರು. ಡಬಲ್ಸ್‌ನಲ್ಲಿ ಇವರು ಜೊತೆಯಾಗಿ ಆಡಿದ್ದರು.


ಟ್ರೋಫಿಯೊಂದಿಗೆ ಚಾಂಪಿಯನ್ ಆದ ಬೊಗ್ಡಾನ್ ಬೊಬ್ರೊಬ್ (ಎಡ) ಮತ್ತು ರನ್ನರ್ ಅಪ್ ಆದ ನಿಕ್ ಚಾಪೆಲ್ –ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

26 ವರ್ಷದ ಬೊಬ್ರೊವ್, ಪಂದ್ಯದುದ್ದಕ್ಕೂ ಪ್ರಾಬಲ್ಯ ಮೆರೆದರು. ಬೇಸ್‌ಲೈನ್ ಬಳಿಯೇ ಚೆಂಡನ್ನು ಬಾರಿಸುತ್ತಿದ್ದ ಅವರು, ಎದುರಾಳಿ ರಿಟರ್ನ್ ಮಾಡಿದ ಚೆಂಡನ್ನು ನೆಟ್‌ನ ಸಮೀಪದಲ್ಲಿ ಡ್ರಾಪ್ ಮಾಡುವ ಮೂಲಕ ಸುಲಭವಾಗಿ ಗೇಮ್ ಗೆಲ್ಲುತ್ತಾ ಸಾಗಿದರು. ಮೊದಲ ಸೆಟ್‌ನ ಮೊದಲ ಗೇಮ್‌ನಲ್ಲೇ ಚಾಪೆಲ್ ಸರ್ವ್ ಬ್ರೇಕ್ ಮಾಡಿದ ಬೊಬ್ರೊವ್, ನಂತರ ಹಿಂತಿರುಗಿ ನೋಡಲೇ ಇಲ್ಲ. ತಮ್ಮ ಸರ್ವ್ ಉಳಿಸಿಕೊಳ್ಳುವಲ್ಲಿ ಸಫಲರಾದ ಅವರು 8ನೇ ಗೇಮ್‌ನಲ್ಲಿ ಮತ್ತೊಮ್ಮೆ ಎದುರಾಳಿಯ ಸರ್ವ್ ಮುರಿದು 37 ನಿಮಿಷಗಳಲ್ಲೇ ಸೆಟ್ ಗೆದ್ದರು.

ಎರಡನೇ ಸೆಟ್‌ನಲ್ಲಿ ಚಾಪೆಲ್ ಚೇತರಿಕೆಯ ಆಟ ಆಡಿದರು. ಮೂರನೇ ಗೇಮ್‌ನಲ್ಲಿ ಬೊಬ್ರೊವ್ ಸರ್ವ್ ಮುರಿದ ಅವರು, ಅದರ ಬೆನ್ನಲ್ಲೇ ತಮ್ಮ ಸರ್ವ್ ಕಾಪಾಡಿಕೊಂಡು 3–1ರಿಂದ ಮುನ್ನಡೆ ಗಳಿಸಿದರು. ಅಮೆರಿಕದ ಆಟಗಾರ ಎದುರಾಳಿಗೆ ತಿರುಗೇಟು ನೀಡಬಹುದೆಂಬ ನಿರೀಕ್ಷೆ ಆಗ ಅಭಿಮಾನಿಗಳಲ್ಲೂ ಗರಿಗೆದರಿತ್ತು. ಅದು 6ನೇ ಗೇಮ್‌ನಲ್ಲೇ ಹುಸಿಯಾಯಿತು. ನಂತರದ 6 ಗೇಮ್‌ಗಳಲ್ಲಿ ಉಭಯ ಆಟಗಾರರು ಸಮಬಲದಿಂದ ಹೋರಾಡಿದರು. ಆದ್ದರಿಂದ ಸೆಟ್ 'ಟೈ ಬ್ರೇಕರ್'ಗೆ ಸಾಗಿತು. ಟೈ ಬ್ರೇಕರ್‌ನಲ್ಲಿ ಬೊಬ್ರೊಬ್ 3–1ರಿಂದ ಮುಂದಿದ್ದರು. ಈ ಹಂತದಲ್ಲಿ ಸತತ ಎರಡು ಪಾಯಿಂಟ್ಸ್ ಗಳಿಸಿದ ಚಾಪೆಲ್ ಸಮಬಲ ಸಾಧಿಸಿದರು. 10ನೇ ಸರ್ವ್‌ನಲ್ಲಿ ಚಾಪೆಲ್, ಚೆಂಡನ್ನು ಅಂಗಳದ ಆಚೆ ಬಾರಿಸಿದರು. ಅದರೊಂದಿಗೆ ಪಂದ್ಯವನ್ನೂ ಕೈಚೆಲ್ಲಿದರು. ಅದರ ಬೆನ್ನಲ್ಲೇ ಸರ್ವ್ ಉಳಿಸಿಕೊಂಡ ಬೊಬ್ರೊವ್ ಸಂಭ್ರಮಿಸಿದರು.

ಅಂಕಿ ಅಂಶ

15 ಸಿಂಗಲ್ಸ್ ಚಾಂಪಿಯನ್‌ಗೆ ಸಿಕ್ಕ ಎಟಿಪಿ ಪಾಯಿಂಟ್ಸ್

8 ರನ್ನರ್ ಅಪ್ ಆಟಗಾರನಿಗೆ ದೊರೆತ ಎಟಿಪಿ ಪಾಯಿಂಟ್ಸ್

₹1.80 ಲಕ್ಷ ಚಾಂಪಿಯನ್‌ಗೆ ದೊರೆತ ಬಹುಮಾನ ಮೊತ್ತ

₹1.06 ಲಕ್ಷ ರನ್ನರ್ ಅಪ್ ಆಟಗಾರ ಪಡೆದ ನಗದು